ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 12 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 266 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು 'ಯುವ ನಿಧಿ' ಜಾರಿ

● ಶಿವಮೊಗ್ಗದಲ್ಲಿ ನಡೆಯುತ್ತಿರುವ ಸಮಾವೇಶದಲ್ಲಿ ಆಯ್ದ ಕೆಲವರ ಖಾತೆಗೆ ಹಣ ಜಮಾ ● ಈಗಾಗಲೇ ಶಕ್ತಿ, ಗೃಹ ಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಗ್ಯಾರಂಟಿ ಜಾರಿಯಲ್ಲಿದೆ; ಇದು ಐದನೆಯದ್ದು ● ಇದರೊಂದಿಗೆ ಕಾಂಗ್ರೆಸ್‌ನ ಐದು ಗ್ಯಾರಂಟಿ ಜಾರಿಯಾದಂತಾಗಲಿದೆ





ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ಶರಣ ಪ್ರಕಾಶ್ ಪಾಟೀಲ್

ಬೆಂಗಳೂರು, ಜ.11(ಕೆಎಂಶಿ)–ಪದವಿ, ಡಿಪ್ಲೊಮಾ ಪಡೆದು ನಿರುದ್ಯೋಗಿಗಳಾದವರಿಗೆ ನಾಳೆಯಿಂದ ಮಾಸಿಕ ಭತ್ಯೆ ನೀಡುವ ಯುವ ನಿಧಿ ಯೋಜನೆ ಅನುಷ್ಠಾನಕ್ಕೆ ಬರಲಿದೆ.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಕೊನೆಯ ಯೋಜನೆ ಜಾರಿಗೆ ಬರುತ್ತಿದೆ. ಈಗಾಗಲೇ ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಹಾಗೂ ಗೃಹಲಕ್ಷ್ಮಿ ಯೋಜನೆಗಳು ಅನುಷ್ಠಾನಗೊಂಡಿವೆ, ಶೈಕ್ಷಣಿಕ ವರ್ಷ 2023ರಲ್ಲಿ ಪದವಿ ಹಾಗೂ ಡಿಪ್ಲೊಮಾ ಪಡೆದವರು ಕ್ರಮವಾಗಿ 3 ಸಾವಿರ, 1500 ಭತ್ಯೆಗೆ ಅರ್ಹರಾಗಿರುತ್ತಾರೆ.

ಜ.12ರಿಂದ (ಇಂದು) ಫಲಾನುಭವಿಗಳಿಗೆ ಹಣ ವರ್ಗಾವಣೆ ಎಂದು ಹೇಳುತ್ತಿರುವ ಸರ್ಕಾರ ಮತ್ತೊಂದೆಡೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದು ಆರು ತಿಂಗಳಿನಿಂದ ಕೆಲಸ ಸಿಗದಿದ್ದವರು, ಈ ಯೋಜನೆಗೆ ಅರ್ಹರಾಗಿ ರುತ್ತಾರೆ ಎನ್ನುತ್ತಿದೆ. ಕಡೆ ಗಳಿಗೆಯಲ್ಲಿ ಸರ್ಕಾರ ಈ ಷರತ್ತು ವಿಧಿಸಿದೆ, ಇದರ ಲಾಭ ಪಡೆಯಲು ನಿರುದ್ಯೋಗಿಗಳು ಮತ್ತಷ್ಟು ಸಮಯ ಕಾಯಬೇಕಾಗುತ್ತದೆ.

ಲೋಕಸಭಾ ಚುನಾವಣೆಗೂ ಮುನ್ನವೇ ತಮ್ಮ ಐದು ಗ್ಯಾರಂಟಿಗಳು ಚಾಲನೆಯಲ್ಲಿವೆ ಎಂಬುದನ್ನು ಸಾಬೀತು ಪಡಿಸಲು ಸರ್ಕಾರ ನಾಳೆ ಶಿವಮೊಗ್ಗದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೌಶಲ್ಯಾಭಿವೃದ್ಧಿ ಖಾತೆ ಸಚಿವ ಶರಣ ಪ್ರಕಾಶ್ ಪಾಟೀಲ್, ಆಯ್ದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡುವ ಮೂಲಕ ಐದನೇ ಮತ್ತು ಕೊನೆಯ ಗ್ಯಾರಂಟಿಗೆ ಚಾಲನೆ ನೀಡಲಿದ್ದಾರೆ. ಯುವನಿಧಿ ಯೋಜನೆಗೆ ಅರ್ಹ ಫಲಾನುಭವಿಗಳು ಅರ್ಜಿ ಹಾಕಲು ಕಳೆದ ತಿಂಗಳು ಕಾಲ ಅವಕಾಶ ಮಾಡಿಕೊಟ್ಟಿತ್ತು. ಸರ್ಕಾರದ ಈ ನಿರ್ಧಾರದಿಂದ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದ ಐದು ಲಕ್ಷಕ್ಕೂ ಹೆಚ್ಚು ನಿರುದ್ಯೋಗಿಗಳಿಗೆ ಇದರ ಲಾಭ ದೊರೆಯಲಿದೆ. ಪದವಿ ಪಡೆದವರಿಗೆ ಮಾಸಿಕ ಮೂರು ಸಾವಿರ ರೂ. ಹಾಗೂ ಡಿಪ್ಲೊಮಾ ಪಡೆದವರಿಗೆ ಮಾಸಿಕ 1,500 ರೂ. ನಿರುದ್ಯೋಗಿ ಭತ್ಯೆ ದೊರೆಯಲಿದೆ. ● 9ನೇ ಪುಟಕ್ಕೆ

ಮೈಸೂರಲ್ಲಿ ಡಾ.ಯತೀಂದ್ರ ಸ್ಪರ್ಧೆ ಖಚಿತಪಡಿಸಿದ ಪ್ರದೀಪ್ ಈಶ್ವರ್!



ಡಾ. ಯತೀಂದ್ರ



ಪ್ರದೀಪ್

ಚಿಕ್ಕಬಳ್ಳಾಪುರ, ಜ.11– ವರುಣ ಕ್ಷೇತ್ರವನ್ನು ತಂದೆಗೆ ಬಿಟ್ಟುಕೊಟ್ಟಿರುವ ಯತೀಂದ್ರ ಸಿದ್ದರಾಮಯ್ಯ ಅವರು ಈ ಬಾರಿ ಲೋಕಸಭಾ ಚುನಾವಣೆಗೆ ಮೈಸೂರು–ಕೊಡಗು ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರು, ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರನ್ನು ಟೀಕಿಸುವ ಭರದಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರು ಸ್ಪರ್ಧೆ ಮಾಡುವ ವಿಚಾರವನ್ನು ಬಹಿರಂಗಪಡಿಸಿದ್ದಾರೆ.

ಇಂದು ಚಿಕ್ಕಬಳ್ಳಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಪ್ರದೀಪ್ ಈಶ್ವರ್, ಸಂಸದ ಪ್ರತಾಪ್ ಸಿಂಹ, ಸಿಎಂ ಸಿದ್ದರಾಮಯ್ಯ ಬಗ್ಗೆ ಮಾತಾಡಿದ್ರೆ ಹುಷಾರ್, ಪರಿಣಾಮ ನೆಟ್ಟಗಿರಲ್ಲ ಎಂದು ಎಚ್ಚರಿಕೆ ನೀಡಿದರು. ಸಂಸತ್ ಭವನದಲ್ಲಿ ಸ್ಮೋಕ್ ಬಾಂಬ್ ಹಾಕಿದವನಿಗೆ ನೀವು ಪಾಸ್ ನೀಡಿದ್ದೀರಿ. ನೀವು ದೇಶದ್ರೋಹಿ ಅಲ್ಲವೇ? ಈ ಬಾರಿ ಚುನಾವಣೆಯಲ್ಲಿ ನೀವು ಗೆಲ್ಲುವುದಿಲ್ಲ. ಈ ಬಾರಿ ಮೈಸೂರು ಕ್ಷೇತ್ರದಲ್ಲಿ ಯತೀಂದ್ರ ಸಿದ್ದರಾಮಯ್ಯನೇ ಗೆಲ್ಲೋದು ಎಂದು ಅಚ್ಚರಿ ಹೇಳಿಕೆ ನೀಡಿದ್ದಾರೆ. ಇದರೊಂದಿಗೆ ಈ ಬಾರಿ ಸಿಎಂ ಸಿದ್ದರಾಮಯ್ಯನವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎನ್ನುವ ಸುದ್ದಿಗೆ ಈಗ ರೆಕ್ಕೆಪುಕ್ಕ ಬಂದಂತಾಗಿದೆ.

ಸ್ವಚ್ಛತೆಯಲ್ಲಿ ಮತ್ತೆ ಕುಸಿದ ಸುಂದರ ನಗರಿ ಮೈಸೂರು

ಕಳೆದ ಬಾರಿ 7ನೇ ಸ್ಥಾನ; ಈ ಬಾರಿ 27ನೇ ಸ್ಥಾನ

ಮೈಸೂರು, ಜ.11(ಆರ್‌ಕೆ)– ಕೇಂದ್ರ ಸರ್ಕಾರ ನಡೆಸಿದ ಸ್ವಚ್ಛ ನಗರ ಸರ್ವೇಕ್ಷಣೆ ಫಲಿತಾಂಶ ಪ್ರಕಟಗೊಂಡಿದ್ದು, ಸಾಂಸ್ಕೃತಿಕ ನಗರಿ ಮೈಸೂರು 27ನೇ ಸ್ಥಾನಕ್ಕೆ ಕುಸಿದಿದೆ.

ಅಲ್ಲದೆ 3 ರಿಂದ 10 ಲಕ್ಷ ಜನಸಂಖ್ಯೆಯುಳ್ಳ ನಗರಗಳ ವರ್ಗದಲ್ಲೂ ಮೈಸೂರು ಪ್ರಥಮ ಸ್ಥಾನ ಕಳೆದುಕೊಂಡು, 2ನೇ ಸ್ಥಾನಕ್ಕೆ ತೃಪ್ತಿಪಟ್ಟಿದೆ.

ರಾಷ್ಟ್ರ ಮಟ್ಟದಲ್ಲಿ ಈ ಬಾರಿಯೂ ಇಂದೋರ್‌ಗೆ ಮೊದಲ ಸ್ವಚ್ಛ ನಗರ ಪ್ರಶಸ್ತಿ ಲಭಿಸಿದೆ. ಜನಸಂಖ್ಯೆ ಆಧಾರಿತ ನಗರಗಳಲ್ಲಿ ಆಂಧ್ರಪ್ರದೇಶದ ತಿರುಪತಿ ಮೊದಲ ಸ್ಥಾನ ಪಡೆದುಕೊಂಡಿದೆ.

ನವದೆಹಲಿಯಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಕೇಂದ್ರದ ನಗರಾಭಿವೃದ್ಧಿ ಸಚಿವ ಹರ್ದೀಪ್ ಸಿಂಗ್ ಪುರಿ ಹಾಗೂ ಜಂಟಿ ನಿರ್ದೇಶಕ ಅಶೋಕ ಸಿಂಘ್ವಿ ಅವರು ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸ್ವಚ್ಛ ಭಾರತ ಪ್ರಶಸ್ತಿ ಪ್ರದಾನ ಮಾಡಿದರು. ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಪಾಲಿಕೆ ಕಮಿಷನರ್ ಎಂ. ರೆಹಮಾನ್ ಷರೀಫ್, ಹಿರಿಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಹಾಗೂ ಇತರ ಅಧಿಕಾರಿಗಳು ಪ್ರಶಸ್ತಿ ಸ್ವೀಕರಿಸಿದರು. ಕಳೆದ 2022ನೇ ಸಾಲಿನಲ್ಲಿ ದೇಶದಲ್ಲೇ ಮೈಸೂರು ನಗರಕ್ಕೆ 7ನೇ ಸ್ವಚ್ಛ ನಗರ ಪ್ರಶಸ್ತಿ ಬಂದಿತ್ತಲ್ಲದೆ, 3ರಿಂದ 10 ಲಕ್ಷ ಜನಸಂಖ್ಯೆ ವರ್ಗದಲ್ಲಿ ಮೊದಲ ಬಹುಮಾನ ಲಭಿಸಿತ್ತು ಈವರೆಗೆ ನಡೆದ ಭಾರತ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ಟಾಪ್ 10 ನಗರಗಳ ಪಟ್ಟಿಯಲ್ಲಿ ಸ್ಥಾನ ಕಾಯ್ದುಕೊಂಡು ಬಂದಿತ್ತು. ● 9ನೇ ಪುಟಕ್ಕೆ



ಕಂಡ ಕಂಡಲ್ಲಿ ಕಸ ಹಾಕುವ ಜನರಿಗೆ ಈಗ ಸಂತೋಷವಾಗಿರಬಹುದು!

ಮೈಸೂರು, ಜ.11(ಎಸ್‌ಬಿಡಿ)– ದೇಶದ ನಂ.1 ಸ್ವಚ್ಛ ನಗರ ಬಿರುದಿಗೆ ಪಾತ್ರವಾಗಿದ್ದ ಮೈಸೂರು, 2023ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆಯಲ್ಲಿ 27ನೇ ಸ್ಥಾನಕ್ಕೆ ಕುಸಿದಿದ್ದು, ಈ ಬಾರಿ ಹಿನ್ನಡೆಯಿಂದ ಕಂಡ ಕಂಡಲ್ಲಿ ಕಸ ತಂದು ಹಾಕುವ ಜನರಿಗೆ ಪರಮಾನಂದವಾಗಿರಬಹುದು. ನಮ್ಮ ಸುಂದರ ನಗರಿಯ ಪರಿಸರದ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಜನ ಹಾಗೂ ಜಡ್ಡುಗಟ್ಟಿರುವ ಅಧಿಕಾರಿ ವರ್ಗದ ಕಾರ್ಯವೈಖರಿ ಬದಲಾಗದ ಹೊರತು ಇನ್ನೆಂದೂ ಮೈಸೂರು ಸ್ವಚ್ಛ ನಗರಿಯಾಗಿ ಹೊರಹೊಮ್ಮಲು ಸಾಧ್ಯವೇ ಇಲ್ಲ. ಅಲ್ಲದೆ, ನಗರದ ಸ್ವಚ್ಛತೆಗೆ ಕೈಕಾಲು ಕೊಳಕು ● 9ನೇ ಪುಟಕ್ಕೆ



ಮತ್ತೆ ಕಾಡಾನೆ ಸೆರೆ 'ಆಪರೇಷನ್ ಜಂಬೋ'



ಬೆಂಗಳೂರು, ಜ.11– ಕಳೆದ ತಿಂಗಳು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮೈಸೂರು ದಸರಾ ಆನೆ ಅರ್ಜುನ ಆನೆಯೊಂದಿಗೆ ಕಾದಾಟದಲ್ಲಿ ಸಾವನ್ನಪ್ಪಿದ ನಂತರ ಸ್ಥಗಿತಗೊಂಡಿದ್ದ ಆಪರೇಷನ್ ಜಂಬೋ ಗುರುವಾರ ಪುನರಾರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

50ಕ್ಕೂ ಹೆಚ್ಚು ಕಾಡಾನೆಗಳು ಮಲೆನಾಡು ಪ್ರದೇಶಕ್ಕೆ ನುಗ್ಗಿ ಅನಾಹುತ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲೂಕು ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಗಿದ್ದು, ಇದರಲ್ಲಿ ಎಂಟು ಆನೆಗಳು ಭಾಗವಹಿಸಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಾಡಾನೆ ಸೆರೆ ಹಿಡಿಯುವ ಕಾರ್ಯಾಚರಣೆಯನ್ನು ಪುನರಾರಂಭಿಸಿದ್ದೇವೆ. ನಮ್ಮ ಎಂಟು ಉತ್ತಮ ಆನೆಗಳು ಈ ಬಾರಿ ಕಾರ್ಯಾಚರಣೆಯ ಭಾಗವಾಗಿವೆ ಎಂದು ಅರಣ್ಯ ● 9ನೇ ಪುಟಕ್ಕೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಂಬುದಿ ಗ್ರಾಮದ ಜಮೀನಿನ ಸರ್ವೆ ನಂ.62/1, 62/2, 63/1, 63/2 ರಲ್ಲಿರುವ ಉದ್ದೇಶಿತ ಬಡಾವಣೆಯು ನನ್ನ ಕಕ್ಷಿದಾರರಾದ ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘದ (ರಿ) ಆಸ್ತಿಯಾಗಿರುತ್ತದೆ. ಸದರಿ ಜಮೀನಿನ ಬಗ್ಗೆ ಮೈಸೂರಿನ 3ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.22/2014 ರಲ್ಲಿ ರಾಜಿ ಸಂಧಾನದಲ್ಲಿ ನನ್ನ ಕಕ್ಷಿದಾರರ ಪರ ಡಿಕ್ರೀಯಾಗಿರುತ್ತದೆ ಸದರಿ ಡಿಕ್ರಿ ಮೈಸೂರಿನ 7ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಮಲ್ದಾರಿ ಸಂಖ್ಯೆ.279 / 2018 ರಲ್ಲಿ ಬಾಕಿ ಇರುತ್ತದೆ. ಈ ಕೆಳಕಂಡ ನಿವೇಶನಗಳನ್ನು ಸಾರ್ವಜನಿಕರು ಶ್ರೀ ಸೈಯದ್ ನಿಜಾಮ್ ಆಲಿ ಸನ್ ಆಫ್ ತಾಹೇರ್ ಆಲಿ ರವರಿಂದ ಕ್ರಯಕ್ಕೆ ಕೊಂಡುಕೊಳ್ಳಬಾರದಾಗಿ ಅಥವಾ ವ್ಯವಹರಿಸಬಾರದಾಗಿ ಸೂಚಿಸಿದೆ.

ದಿನಾಂಕ 15/11/2014 ಮೂಡಾ ನಕ್ಷೆ ಅನುಮೋದನೆಯಂತೆ ಮೇಲ್ಕಂಡ ಜಮೀನಿನ ಸರ್ವೆ ನಂ.62/1, 62/2, 63/1, 63/2 ರಲ್ಲಿ 109 ನಿವೇಶನಗಳನ್ನು ರಚಿಸಲಾಗಿದೆ. ಸದರಿ ನಿವೇಶನಗಳ ಪೈಕಿ ಸಂಖ್ಯೆ, 1, 3, 21, 28, 49, 60, 61, 62, 63, 72, 74, 78, 79, 80, 81, 82, 83, 84, 85, 86, 88, 89, 97, 102, 103 ನಿವೇಶನಗಳನ್ನು ಮೇಲ್ಕಂಡ ಶ್ರೀ ಸೈಯದ್ ನಿಜಾಮ್ ಆಲಿ ಸನ್ ಆಫ್ ತಾಹೇರ್ ಆಲಿ ಕಾನೂನು ಬಾಹಿರವಾಗಿ ಮಾರಾಟ ಮಾಡಲು ಹುನ್ನಾರ ಮಾಡುತ್ತಿದ್ದಾರೆ. ಸಾರ್ವಜನಿಕರು ಇವರ ಜೊತೆ ಕ್ರಯ, ಕ್ರಯದ ಒಪ್ಪಂದ ಅಥವಾ ಬೇರೆ ಯಾವುದೇ ರೀತಿಯ ಹಸ್ತಾಂತರದ ವ್ಯವಹಾರ ಮಾಡಿದ್ದಲ್ಲಿ ಸದರಿ ವ್ಯವಹಾರವು ಕಾನೂನು ಬಾಹಿರವಾಗಿರುತ್ತದೆ. ಸದರಿ ನಿವೇಶನಗಳ ಬಗ್ಗೆ ಅಮಲ್ದಾರಿ ಪ್ರಕರಣದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಕೋರಿರುವ ಅರ್ಜಿ ಮೇಲೆ ನ್ಯಾಯಾಲಯದಲ್ಲಿ ತೀರ್ಮಾನವಾಗಿ ದಿನಾಂಕ 17/02/2021 ರಂದು ಸದರಿ ನಿವೇಶನಗಳನ್ನು ಮಾರಾಟ ಮಾಡುವುದಾಗಲೀ ಹಾಗೂ ಸದರಿ ನಿವೇಶನಗಳ ಬಗ್ಗೆ ಯಾವುದೆ ವ್ಯವಹಾರ ಮಾಡದಂತೆ ತಡೆಯಾಜ್ಞೆ ಆದೇಶವಾಗಿರುತ್ತದೆ. ಮೇಲ್ಕಂಡ ಸ್ವತ್ತಿನ ಬಗ್ಗೆ ವ್ಯವಹರಿಸಿದ ಪಕ್ಷದಲ್ಲಿ ಸದರಿ ವ್ಯವಹಾರಕ್ಕೆ ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘವು ಜವಾಬ್ದಾರಿಯಲ್ಲ ಮತ್ತು ನಮ್ಮ ಕಕ್ಷಿಗಾರರ ಹಕ್ಕುಗಳಿಗೆ ಯಾವುದೇ ಚ್ಯುತಿ ಬರುವುದಿಲ್ಲ. ಸದರಿ ವ್ಯವಹಾರವು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ.

ಸಹಿ/– ಶ್ರೀ.ಎ.ಎಸ್.ನಟರಾಜ್, ಬಿಎಸ್‌ಸಿ, ಎಲ್.ಎಲ್.ಎಂ, ವಕೀಲರು. ನಂ.116, 1ನೇ ಮಹಡಿ, ಬನುಮಯ್ಯ ಚೌಕ, ಮೈಸೂರು. ಫೋನ್ : 98451 10636

ಸಂಸತ್ ಭವನದೊಳಗೆ ನುಗ್ಗಿ ಭಾರಿ ಭದ್ರತಾ ಲೋಪ ಪ್ರಕರಣ

ಗುಜರಾತ್‌ನ ಗಾಂಧಿನಗರದ ಫೋರೆನ್ಸಿಕ್ ಲ್ಯಾಬ್‌ನಲ್ಲಿ ಮೈಸೂರಿನ ಮನೋರಂಜನ್, ಸಾಗರ್ ಶರ್ಮಾಗೆ ಬ್ರೈನ್ ಮ್ಯಾಪಿಂಗ್, ನಾರ್ಕೋ ಅನಾಲಿಸಿಸ್

● ಬೆಳಗ್ಗೆಯಿಂದ ಪರೀಕ್ಷಾ ಪ್ರಕ್ರಿಯೆ ಆರಂಭ ● ಶುಕ್ರವಾರ ಪೂರ್ಣಗೊಳ್ಳುವ ಸಾಧ್ಯತೆ ● ಉಳಿದ ಮೂವರಿಗೆ ಪಾಲಿಗ್ರಾಫ್ ಟೆಸ್ಟ್



ಮನೋರಂಜನ್ ಸಾಗರ್ ಶರ್ಮಾ ನೀಲಂದೇವಿ ಅಮೋಲ್‌ಶಿಂಧೆ ಲಲಿತ್ ಜಾ ಮಹೇಶ್

ಮೈಸೂರು, ಜ.11(ಬಿಎಲ್‌ಯು)– ಸಂಸತ್ ಭವನದಲ್ಲಿ ಲೋಕಸಭೆಯ ಕಲಾಪದೊಳಗೆ ನುಗ್ಗಿ ಕಲರ್ ಸ್ಮೋಕ್ ಸ್ಫೋಟಿಸಿದ ಮೈಸೂರಿನ ಮನೋರಂಜನ್ ಹಾಗೂ ಸಾಗರ್ ಶರ್ಮಾ ಅವರನ್ನು ಇಂದು (ಮೆದುಳು, ಮಂಪರು) ಬ್ರೈನ್ ಮ್ಯಾಪಿಂಗ್ ಹಾಗೂ ನಾರ್ಕೋ ಅನಾಲಿಸಿಸ್ ಪರೀಕ್ಷೆಗೆ ಒಳಪಡಿಸಲಾಗಿದೆ.

ಸಂಸತ್ ಭವನದೊಳಗೆ ನುಗ್ಗಿದ ಪ್ರಕರಣದಲ್ಲಿ ದೆಹಲಿ ಪೊಲೀಸರ ತಂಡದ ತನಿಖೆಯಲ್ಲಿ ಮನೋರಂಜನ್ ಹಾಗೂ ಸಾಗರ್ ಶರ್ಮಾ ಬಾಯ್ಬಿಟ್ಟಿರಲಿಲ್ಲ. ಹಾಗಾಗಿ ಅಂತಿಮವಾಗಿ ಮನೋರಂಜನ್ ಹಾಗೂ ಸಾಗರ್ ಶರ್ಮಾ ಅವರನ್ನು ಪರೀಕ್ಷೆಗೆ ಒಳಪಡಿಸುವುದರ ಜೊತೆಗೆ ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಮೋಲ್ ಶಿಂಧೆ, ಲಲಿತ್ ಝಾ ಹಾಗೂ ಮಹೇಶ್ ಕುಮಾವತ್ ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲು ಅನುಮತಿ ನೀಡುವಂತೆ ಪೊಲೀಸರು ದೆಹಲಿಯ ಪಾಟಿಯಾಲ ಹೌಸ್ ಕೋರ್ಟ್ ಅನುಮತಿ ಕೋರಿದ್ದರು.

ಮೈಸೂರಿನಲ್ಲೇ ಕಾದು ಕುಳಿತಿರುವ ದೆಹಲಿ ಪೊಲೀಸರು

ಮನೋರಂಜನ್ ಕುಟುಂಬ, ಸ್ನೇಹಿತರ ತನಿಖೆಗೆ ಆಗಮಿಸಿರುವ ದೆಹಲಿ ವಿಶೇಷ ದಳದ ನಾಲ್ವರು ಪೊಲೀಸ್ ಅಧಿಕಾರಿಗಳು ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ.

ಮನೋರಂಜನ್ ಹಾಗೂ ಸಾಗರ್ ಶರ್ಮಾರನ್ನು ಬ್ರೈನ್ ಮ್ಯಾಪಿಂಗ್ ಹಾಗೂ ನಾರ್ಕೋ ಅನಾಲಿಸಿಸ್ ಪರೀಕ್ಷೆಗೆ ಒಳಡಿಸಿದ ವೇಳೆ ಅವರಿಂದ ದೊರೆಯುವ ಮಾಹಿತಿ ಮೇರೆಗೆ ಈ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನಿತರರ ಪತ್ತೆ ತನಿಖೆಗಾಗಿ ದೆಹಲಿ ಪೊಲೀಸರು ಮೈಸೂರಿನಲ್ಲೇ ಇದ್ದಾರೆ. ಮನೋರಂಜನ್ ಹಾಗೂ ಸಾಗರ್ ಶರ್ಮಾ ಈ ವೇಳೆ ಕೆಲವು ರಹಸ್ಯ ಮಾಹಿತಿಗಳನ್ನು ಬಾಯ್ಬಿಟ್ಟರೆ ಈ ಪ್ರಕರಣ ಮತ್ತೊಂದು ತಿರುವು ಪಡೆಯಲಿದೆ.




ಮೈಸೂರಿನ ಮನೋರಂಜನ್ ಹಾಗೂ ಸಾಗರ್ ಶರ್ಮಾರನ್ನು ಬ್ರೈನ್ ಮ್ಯಾಪಿಂಗ್ ಹಾಗೂ ನಾರ್ಕೋ ಅನಾಲಿಸಿಸ್ ಪರೀಕ್ಷೆಗೆ ಒಳಪಡಿಸಲು ಕರೆದೊಯ್ಯುತ್ತಿರುವುದು.

ಈ ಬಗ್ಗೆ ಮನೋತಜ್ಞರ ವರದಿ ಆಧರಿಸಿ ದೆಹಲಿಯ ಪಾಟಿಯಾಲ ಹೌಸ್ ಕೋರ್ಟ್‌ನ ಹೆಚ್ಚುವರಿ ಸೆಷನ್ ನ್ಯಾಯಾಲಯದ ನ್ಯಾಯಾಧೀಶ ಹರ್ದೀಪ್ ಕೌರ್ ಪೊಲೀಸರ ಮನವಿಯನ್ನು ಪುರಸ್ಕರಿಸಿದ್ದರು. ಈ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರ ವಿಶೇಷ ತಂಡ ಗುಜರಾತ್‌ನ ಗಾಂಧಿನಗರದಲ್ಲಿರುವ ಫೋರೆನ್ಸಿಕ್ ಲ್ಯಾಬ್(ವಿಧಿ ವಿಜ್ಞಾನ ಪ್ರಯೋಗಾಲಯ)ಗೆ ನಿನ್ನೆ ರಾತ್ರಿಯೇ ಐವರನ್ನು ಕರೆ ತಂದರು. ಇಂದು ಬೆಳಿಗ್ಗೆ ಮನೋ ರಂಜನ್ ಹಾಗೂ ಸಾಗರ್ ಶರ್ಮಾರನ್ನು ನಾರ್ಕೋ ಅನಾಲಿಸಿಸ್, ಬ್ರೈನ್ ಮ್ಯಾಪಿಂಗ್ ಹಾಗೂ ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸುವ ಪ್ರಕ್ರಿಯೆ ಆರಂಭಿಸಲಾಯಿತು. ಮೊದಲಿಗೆ ಇಬ್ಬರನ್ನು ಪ್ರಾಥಮಿಕ ಹಂತದ ವೈದ್ಯಕೀಯ ● 9ನೇ ಪುಟಕ್ಕೆ

ಕಾರು-ಬೈಕ್ ಡಿಕ್ಕಿ: ಪುತ್ತೂರಿನ ಪಿಡಬ್ಲ್ಯೂಡಿ ಇಂಜಿನಿಯರ್ ಸೇರಿ ಇಬ್ಬರಿಗೆ ಗಾಯ

ಮೈಸೂರಿನ ದಟ್ಟಗಳ್ಳಿ ಕೆಇಬಿ ಜಂಕ್ಷನ್ ಬಳಿ ಬುಧವಾರ ರಾತ್ರಿ ಘಟನೆ



ಮೈಸೂರು, ಜ. 11(ಆರ್‌ಕೆ)– ಕಾರು-ಬೈಕ್ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಪುತ್ತೂರಿನ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಸೇರಿ ಇಬ್ಬರು ಗಾಯಗೊಂಡಿರುವ ಘಟನೆ ಬುಧವಾರ ರಾತ್ರಿ ಮೈಸೂರಿನ ದಟ್ಟಗಳ್ಳಿ ಕೆಇಬಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸಂಭವಿಸಿದೆ.

ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರಿನ ಹರ್ಷಿತ್ (26) ಹಾಗೂ ಸುಳ್ಯದ ಉಜ್ವಲ್ (25) ಗಾಯಗೊಂಡವರಾಗಿದ್ದು, ಅವರನ್ನು ಕುವೆಂಪುನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತನ್ನ ತಂಗಿ ಮದುವೆ ಆಹ್ವಾನ ಪತ್ರಿಕೆ ಹಂಚಲು ಸ್ನೇಹಿತ ಉಜ್ವಲ್ ನೊಂದಿಗೆ ರಾಯಲ್ ಎನ್‌ಫೀಲ್ಡ್ ಹಿಮಾಲಯ (ಕೆಎ-21, ಇಬಿ 3003) ಬೈಕಿನಲ್ಲಿ ಮೈಸೂರಿಗೆ ಬಂದಿದ್ದ ಹರ್ಷಿತ್, ಬೋಗಾದಿಯಿಂದ ದಟ್ಟಗಳ್ಳಿ ಕಡೆಗೆ ಬರುತ್ತಿದ್ದಾಗ ರಾಮಕೃಷ್ಣ ಪರಮಹಂಸ ಸರ್ಕಲ್ ಕಡೆಯಿಂದ ಬಂದ ಮಾರುತಿ ಸ್ವಿಫ್ಟ್ ಡಿಸೈರ್ (ಕೆಎ-09-ಎಂಡಿ 0991) ಕಾರು ಡಿಕ್ಕಿ ಹೊಡೆದಿದೆ.

ಅಪಘಾತದಲ್ಲಿ ಬೈಕ್ ಓಡಿಸುತ್ತಿದ್ದ ಹರ್ಷಿತ್ ತಲೆಗೆ ತೀವ್ರ, ಹಿಂಬದಿ ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸ್ಥಳಕ್ಕೆ ಧಾವಿಸಿದ ಕೆ.ಆರ್.ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಮದನ್ ಹಾಗೂ ಸಿಬ್ಬಂದಿ ಗಾಯಗೊಂಡ ಯುವಕರನ್ನು ಆಸ್ಪತ್ರೆಗೆ ದಾಖಲಿಸಿದರು. ಪುತ್ತೂರಿನಲ್ಲಿ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಹರ್ಷಿತ್, ಹೆಲ್ಮೆಟ್ ಧರಿಸದಿದ್ದರಿಂದ ಅಪಘಾತದಲ್ಲಿ ತಲೆಗೆ ತೀವ್ರ ಗಾಯಗಳಾಗಿವೆ. ಹೆಲ್ಮೆಟ್ ಧರಿಸಿದ್ದ ಕಾರಣ ಬೈಕ್ ಹಿಂಬದಿ ಸವಾರ ಉಜ್ವಲ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಸ್ಥಳ ಮಹಜರು ನಡೆಸಿದ ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಸಂಚಾರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕಾರಿಗೆ ಸಾರಿಗೆ ಬಸ್ ಡಿಕ್ಕಿ: ವ್ಯಕ್ತಿ ಸಾವು

ಮೈಸೂರು, ಜ.11(ಆರ್‌ಕೆ)– ಕಾರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಒಬ್ಬರು ಸಾವನ್ನಪ್ಪಿರುವ ದುರಂತ ಮೈಸೂರು ತಾಲೂಕು, ವರುಣ ಗ್ರಾಮದ ಕೆರೆ ಬಳಿ ತಿ.ನರಸೀಪುರ ರಸ್ತೆಯಲ್ಲಿ ಗುರುವಾರ ಮಧ್ಯಾಹ್ನ ಸಂಭವಿಸಿದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಕೊಪ್ಪ ಗ್ರಾಮದ ಬಿಳೀಗೌಡ ಸಾವನ್ನಪ್ಪಿದವರು. ಮೈಸೂರಿನಲ್ಲಿ ವಾಸವಿದ್ದ ಅವರು ತಲಕಾಡು ಬಳಿ ಇರುವ ತಮ್ಮ ಜಮೀನಿಗೆ ಹೋಗಿ ಪುಂಟೋ (ಕೆಎ11, ಎಂ. 4260) ಕಾರಿನಲ್ಲಿ ಮೈಸೂರಿಗೆ ಹಿಂದಿರುಗುತ್ತಿದ್ದಾಗ ಎದುರಿನಿಂದ ಬಂದ ಕೆಎಸ್ ಆರ್‌ಟಿಸಿ ಬಸ್ (ಕೆಎ-10, ಎಫ್ 0343) ವರುಣ ಗ್ರಾಮದ ಕೆರೆ ಬಳಿ ತಿ.ನರಸೀಪುರ ರಸ್ತೆಯಲ್ಲಿ ಡಿಕ್ಕಿ ಹೊಡೆದಿದೆ.

ಅಪಘಾತದಲ್ಲಿ ಕಾರು ತೀವ್ರ ಜಖಂಗೊಂಡಿದ್ದು, ಅದರಲ್ಲಿದ್ದ ಬಿಳೀಗೌಡ ಅವರು ಸ್ಥಳದಲ್ಲೇ ಅಸುನೀಗಿ, ದೇಹ ಕಾರಿನಲ್ಲಿ ಸಿಲುಕಿಕೊಂಡಿತ್ತು. ಸ್ಥಳಕ್ಕೆ ಧಾವಿಸಿದ ವರುಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಚೇತನ್ ಹಾಗೂ ಸಿಬ್ಬಂದಿ, ತೀವ್ರವಾಗಿ ಜಖಂಗೊಂಡ ಕಾರಿನಲ್ಲಿ ಸಿಲುಕಿಕೊಂಡಿದ್ದ ಬಿಳೀಗೌಡರ ಮೃತದೇಹವನ್ನು ಹೊರ ತೆಗೆದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು, ಇಂದು ಸಂಜೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಕಾರು, ಬಸ್ಸನ್ನು ವಶಕ್ಕೆ ಪಡೆದು ಚಾಲಕನ ವಿಚಾರಣೆ ನಡೆಸುತ್ತಿದ್ದಾರೆ.

ಮಹೇಶ್ವರ್‌ರಾವ್ ಬಿಎಂಆರ್‌ಸಿಎಲ್ ನೂತನ ವ್ಯವಸ್ಥಾಪಕ ನಿರ್ದೇಶಕ

ಬೆಂಗಳೂರು: ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್)ನ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಹಿರಿಯ ಐಎಎಸ್ ಅಧಿಕಾರಿ ಮಹೇಶ್ವರ್‌ರಾವ್ ಎಂ.ಅವರನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮೆಟ್ರೋಗೆ ಪೂರ್ಣಾವಧಿ ಎಂಡಿ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಅಲ್ಲದೆ ಇದೇ ವಿಚಾರವಾಗಿ ಕೇಂದ್ರ ಸಚಿವ ಹರ್ದೀಪ್ ಸಿಂಗ್‌ಪುರಿರನ್ನು ಭೇಟಿ ಮಾಡಿದ್ದರು. ಇದರ ಬೆನ್ನಲ್ಲೇ ಬಿಎಂಆರ್‌ಸಿಎಲ್ ನೂತನ ಎಂಡಿ ಆಗಿ ಮಹೇಶ್ವರ್ ರಾವ್‌ರನ್ನು ನೇಮಕ ಮಾಡಲಾಗಿದೆ.

ಮಂಜುಳಾ ಉಮೇಶ್ ನಿಧನ



ಮೈಸೂರು,ಜ.11–ಮೈಸೂರಿನ ಕುವೆಂಪುನಗರ ನ್ಯೂ ಕಾಂತರಾಜ ಅರಸ್ ರಸ್ತೆ ನಿವಾಸಿ, ರಾಜ್ಯ ಮಹಿಳಾ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷೆ ಹಾಗೂ ಕುಟುಂಬ ರಕ್ಷಣಾ ವೇದಿಕೆ ಅಧ್ಯಕ್ಷೆಯಾಗಿದ್ದ ಶ್ರೀಮತಿ ಮಂಜುಳಾ ಉಮೇಶ್(68) ಗುರುವಾರ ನಿಧನರಾದರು.

ಬೆಂಗಳೂರು ಮಹಾನಗರಪಾಲಿಕೆಯ ಪ್ರಥಮ ಮೇಯರ್ ದಿ.ಆರ್. ಸುಬ್ಬಣ್ಣ ಅವರ ಸೊಸೆಯಾಗಿರುವ ಇವರು ಪತಿ ಆರ್.ಉಮೇಶ್, ಪುತ್ರ ಪವನ್, ಪುತ್ರಿಯರಾದ ಸ್ವರ್ಣಗೌರಿ, ಶ್ರೀಪ್ರಿಯ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಶುಕ್ರವಾರ) ಮಧ್ಯಾಹ್ನ 1 ಗಂಟೆಗೆ ವಿಜಯನಗರ 4ನೇ ಹಂತದಲ್ಲಿರುವ ಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಕಾರ್ಪೊರೇಟರ್ ಗೋಪಿ, ಮುಖಂಡರಾದ ಬಿ.ಎಂ.ರಘು, ಜೆ.ಜಯಂತ್ ಮುಂತಾದವರು ಸಂತಾಪ ಸೂಚಿಸಿದ್ದಾರೆ.

ಶೈಕ್ಷಣಿಕ ಸಾಧನೆಗೆ ಮಾತ್ರ ಮೊಬೈಲ್ ಬಳಸಿ

ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸಲಹೆ

ಮೈಸೂರು,ಜ.11(ಜಿಎ)– ವಿದ್ಯಾರ್ಥಿಗಳಿಗೆ ಮೊಬೈಲ್ ಧನಾತ್ಮಕ ಮತ್ತು ಋಣಾತ್ಮಕ ಚಿಂತನೆಗೂ ಕಾರಣವಾಗಿದೆ. ಮೊಬೈಲ್ ಎನ್ನುವುದು ವರವೋ ಅಥವಾ ಶಾಪವೋ ಅಲ್ಲ, ಚಾಕನ್ನು ತರಕಾರಿ ಹಚ್ಚಲು ಮಾತ್ರ ಬಳಸುವಂತೆ ಮೊಬೈಲನ್ನು ಶೈಕ್ಷಣಿಕ ಸಾಧನೆಗೆ ಬಳಸುವ ಮೂಲಕ ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ನಡೆದ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್ ಅನ್ನು ಶೈಕ್ಷಣಿಕ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಿ. ಪೋಷಕರು ತಮ್ಮ ಮಕ್ಕಳ ಬಗ್ಗೆ ಅಪಾರವಾದ ಕನಸು ಕಟ್ಟಿ ಶಿಕ್ಷಣಕ್ಕೆ ಹಣ ವ್ಯಯ ಮಾಡುತ್ತಾರೆ. ಅವರ ಅತ್ಯುನ್ನತ ಆಶಯವನ್ನು ಪೂರೈಸುವ ಕಡೆಗೆ ವಿದ್ಯಾರ್ಥಿನಿಯರು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.



ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭದಲ್ಲಿ 'ಸಿಂಚನ' ಮ್ಯಾಗಜಿನ್ ಅನ್ನು ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಬಿಡುಗಡೆಗೊಳಿಸಿದರು.

ಏಕಲವ್ಯ ಪ್ರಶಸ್ತಿ ಪುರಸ್ಕೃತ ಅಂತಾರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಕ್ರೀಡಾಪಟು ಡಾ.ಎಂ.ಆರ್.ಸವಿತ ಪ್ರಶಾಂತ್ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಆಲೋಚನಾ ಶಕ್ತಿಯನ್ನು ವೃದ್ಧಿಸಿಕೊಳ್ಳುವುದು ಮುಖ್ಯವಾಗಿದೆ. ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಕ್ರೀಡೆ ಅತ್ಯುತ್ತಮ ಸಾಧನವಾಗಿದೆ. ಸಂವಹನ ಕೌಶಲ್ಯ ಉತ್ತಮಪಡಿಸಿಕೊಂಡರೇ ಅದು ವೃತ್ತಿ ಜೀವನಕ್ಕೆ ಸಹಾಯಕವಾಗುತ್ತದೆ, ಕ್ರೀಡೆಯು ಮಧು ಮೇಹ ಹಾಗೂ ರಕ್ತದ ಒತ್ತಡದಂತಹ ಕಾಯಿಲೆಗಳನ್ನು ನಿಯಂತ್ರಿಸುವುದರಲ್ಲಿ ಸಹಕಾರಿಯಾಗಿದೆ. ಕ್ರೀಡೆಯು ತಾಳ್ಮೆ, ಸಂಯಮವನ್ನು ಕಲಿಸಿ ಹೇಗೆ ಧೈರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂಬುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣ, ಉದ್ಯೋಗ, ವಿವಾಹ ವಿಷಯಗಳಲ್ಲಿ ಆಯ್ಕೆ ಬಹಳ ಪ್ರಮುಖವಾದದ್ದು. ಅದು ಸುಂದರ ಬದುಕನ್ನು ರೂಪಿಸಲು ಮುಖ್ಯ ಪಾತ್ರ ವಹಿಸುತ್ತದೆ. ಸದೃಢ ಭಾರತವನ್ನು ಕಟ್ಟಲು ಸದೃಢ ವ್ಯಕ್ತಿಗಳ ಅವಶ್ಯಕತೆ ಇರುವುದರಿಂದ ಭಾರತೀಯ ಸನಾತನ ಸಂಸ್ಕೃತಿ ನಮಗೆ ಇದನ್ನು ಕಲಿಸುತ್ತದೆ ವಿದ್ಯಾರ್ಥಿಗಳು ಸಂಸ್ಕೃತಿ ಸಂಸ್ಕಾರದೊಂದಿಗೆ ಹೊರಹೊಮ್ಮಿ ಸಾರ್ಥಕ ಬದುಕಿನೆಡೆಗೆ ಸಾಗಬೇಕೆಂದು ತಿಳಿಸಿದರು.

> “ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪತ್ರಿಕಾ ಮಾಧ್ಯಮ ಅತ್ಯುತ್ತಮ ಸಾಧನವಾಗಿದ್ದು, ವಿದ್ಯಾರ್ಥಿ ದೆಸೆಯಲ್ಲೇ ಪ್ರತಿನಿತ್ಯ ಪತ್ರಿಕೆಗಳನ್ನು ಓದುವುದನ್ನು ರೂಢಿಸಿಕೊಳ್ಳಿ.
> –ಡಾ.ಎಂ.ಡಿ.ಸುದರ್ಶನ್.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಎಂ.ಪಿ.ರಾಜೇಶ್ವರಿ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವೇದಿಕೆ ಸಂಚಾಲಕ ಎಂ.ವಿ. ಯೋಗೀಶ್‌ಕುಮಾರ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಶಿವಕುಮಾರಸ್ವಾಮಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಎಚ್.ಬಿ.ಶ್ರೀಧರ್, ಉಪನ್ಯಾಸಕರಾದ ಕೆ.ಜ್ಯೋತಿಪ್ರಕಾಶ್, ದಿವ್ಯಶ್ರೀ, ಗುರುಸ್ವಾಮಿ, ಡಾ.ಮಹೇಂದ್ರ ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಸಾಲಿಗ್ರಾಮ ಗಣೇಶ್ ಶೆಣೈ ಸಾಧಕ ಶ್ರೇಷ್ಠ ರಾಜ್ಯ ಪ್ರಶಸ್ತಿಗೆ ಆಯ್ಕೆ

ದಾವಣಗೆರೆ, ಜ.11–ಹುಬ್ಬಳ್ಳಿಯ 'ಭಾವ ಸಂಗಮ'ದ ದಶಮಾನೋತ್ಸವ ಸಂಭ್ರಮಾಚರಣೆ ಪ್ರಯುಕ್ತ ದಾವಣಗೆರೆ ಸಾಂಸ್ಕೃತಿಕ ರಾಯಭಾರಿ ಎಂದೇ ಖ್ಯಾತರಾದ ಸಾಲಿಗ್ರಾಮ ಗಣೇಶ್ ಶೆಣೈಯವರನ್ನು 'ಸಾಧಕ ಶ್ರೇಷ್ಠ' ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ರಾಜೇಂದ್ರ ಪಾಟೀಲ್ ತಿಳಿಸಿದ್ದಾರೆ.



ಗಣೇಶ್ ಶೆಣೈ

ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಯಕ್ಷಗಾನ, ಅಧ್ಯಾತ್ಮ ಹೀಗೆ ಲಲಿತ ಕಲೆಗಳ ಎಲ್ಲಾ ಪ್ರಕಾರಗಳಲ್ಲಿ ಕಳೆದ ನಾಲ್ಕು ದಶಕಗಳಿಂದ ದಾವಣಗೆರೆಯಲ್ಲಿ ಸಾಧನೆ ಮಾಡಿದ ಸಾಹಿತಿಗಳು, ಕವಿಗಳು, ಅಂಕಣಕಾರರು, ಪತ್ರಕರ್ತರಾಗಿ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾದ ಶೆಣೈಯವರ ಸಾಧನೆ ಗುರುತಿಸಿ ಮಾರ್ಚ್ 10 ರಂದು ಹುಬ್ಬಳ್ಳಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಪಾಟೀಲ್ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು, ಜ.11–ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ–1ರ ಅರೆ ಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಂದ 2023–24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನೀಡಲಾಗುತ್ತಿರುವ ಮೆಟ್ರಿಕ್ ನಂತರದ 'ವಿದ್ಯಾರ್ಥಿ ವೇತನ', 'ಶುಲ್ಕ ವಿನಾಯಿತಿ' 'ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ' ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು https://ssp.postmatric.karnataka.gov.in ಮೂಲಕ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜ.15ರವರೆಗೆ ಮುಂದೂಡಲಾಗಿದೆ. ಮಾಹಿತಿಗಾಗಿ bcwdhelpline@gmail.com ಮತ್ತು ಸಹಾಯವಾಣಿ ಸಂಖ್ಯೆ 8050770005 ಸಂಪರ್ಕಿಸಿ.

ಸುಳ್ಳು ಕ್ರಿಮಿನಲ್ ಕೇಸ್ ದಾಖಲಿಸಿದ ಆರೋಪ: ಶಿಕ್ಷೆ ಎತ್ತಿ ಹಿಡಿದ ಮೈಸೂರು ಸೆಷನ್ಸ್ ಕೋರ್ಟ್

ಮೈಸೂರು, ಜ.11–ಬೆಂಗಳೂರಿನ ವಿವಿ ಪುರಂ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಎಂ.ಸಿದ್ದರಾಮೇಗೌಡರ ವಿರುದ್ಧ ಸುಳ್ಳು ಕ್ರಿಮಿನಲ್ ಕೇಸ್‌ಗಳನ್ನು ದಾಖಲಿಸಿದ್ದ ಆರೋಪದ ಮೇರೆಗೆ ಜೆಎಂಎಫ್‌ಸಿ ನ್ಯಾಯಾಲಯವು ಮೈಸೂರು ತಾಲೂಕು ಆನಂದೂರು ಗ್ರಾಮದ ಶಂಕರೇಗೌಡ ಎಂಬುವರಿಗೆ ವಿಧಿಸಿದ್ದ ಶಿಕ್ಷೆಯನ್ನು ಸೆಷನ್ಸ್ ನ್ಯಾಯಾಲಯ ಎತ್ತಿ ಹಿಡಿದಿದೆ.

ವಿವರ: ಪ್ರೊ.ಎಂ.ಸಿದ್ದರಾಮೇಗೌಡರ ವಿರುದ್ಧ ಆನಂದೂರಿನ ಶಂಕರೇಗೌಡ ಎಂಬುವರು ಎರಡು ಕೊಲೆ ಸೇರಿದಂತೆ ನಾಲ್ಕು ಸುಳ್ಳು ಕೇಸ್‌ಗಳನ್ನು ದಾಖಲಿಸಿದ್ದರು. ಈ ಕೇಸ್‌ಗಳಿಂದ ಆರೋಪ ಮುಕ್ತರಾದ ನಂತರ ಸಿದ್ದರಾಮೇಗೌಡರು ಹೂಡಿದ್ದ ಮಾನನಷ್ಟ ಮೊಕದ್ದಮೆಯ ವಿಚಾರಣೆ ನಡೆಸಿದ್ದ ಮೈಸೂರಿನ 2ನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಸಿ.ಎನ್.ಮುನಿರತ್ನಂ ಅವರು ಶಂಕರೇಗೌಡರಿಗೆ ಎರಡು ವರ್ಷ ಜೈಲು ಮತ್ತು 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದರು.

ಈ ತೀರ್ಪನ್ನು ಪ್ರಶ್ನಿಸಿ ಶಂಕರೇಗೌಡರು ಮೇಲ್ಮನವಿ ಸಲ್ಲಿಸಿದ್ದು, ಅದರ ವಿಚಾರಣೆ ನಡೆಸಿದ ಮೈಸೂರಿನ 3ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಭಾಗ್ಯ ಅವರು ಜೆಎಂಎಫ್‌ಸಿ ನ್ಯಾಯಾಲಯ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿದ್ದಾರೆ.

ರಾಜ್ಯದ ಸಚಿವರಿಗೆ ದೆಹಲಿಯಲ್ಲಿ ವರಿಷ್ಠರ ಪಾಠ

- **ಲೋಕಸಭೆ ಚುನಾವಣೆ ಕಾರ್ಯತಂತ್ರ ಕುರಿತು ಚರ್ಚೆ**
- **ರಾಮಮಂದಿರ ಸಮಸ್ಯೆ ಬಗ್ಗೆಯೂ ಪ್ರಸ್ತಾಪ**

ನವದೆಹಲಿ: ಮುಂಬರುವ ಲೋಕಸಭೆ ಚುನಾವಣೆಯ ಕಾರ್ಯತಂತ್ರಗಳ ಕುರಿತು ಕಾಂಗ್ರೆಸ್ ವರಿಷ್ಠರು ಇಂದು ಪ್ರಮುಖ ಸಚಿವರಿಗೆ ಪಾಠ ಮಾಡಿದರು.



ಸಚಿವರಾದ ಕೆ. ಎನ್ ರಾಜಣ್ಣ, ಕೆಜೆ ಜಾರ್ಜ್, ಬಿ ಝಡ್ ಜಮೀರ್ ಅಹಮದ್ ಖಾನ್, ಡಾ. ಜಿ. ಪರಮೇಶ್ವರ್, ಲಕ್ಷ್ಮಿ ಹೆಬ್ಬಾಳ್ಕರ್, ಎನ್ ಎಸ್ ಬೋಸರಾಜು ಮತ್ತು ಆರ್ ಬಿ ತಿಮ್ಮಾಪುರ್ ಸೇರಿದಂತೆ 29 ಸಚಿವರನ್ನು ದೆಹಲಿಗೆ ಕರೆಸಿಕೊಂಡು ಲೋಕಸಭೆ ಚುನಾವಣೆ ಕಾರ್ಯತಂತ್ರಗಳ ಕುರಿತು ಚರ್ಚಿಸಲಾಗಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಸರಿಯಾದ ಅಭ್ಯರ್ಥಿಗಳನ್ನು ಗುರುತಿಸುವುದು, ರಾಮ ಮಂದಿರ ಸಮಸ್ಯೆ ಎದುರಿಸಲು ಮಾರ್ಗಗಳನ್ನು ಕಂಡುಕೊಳ್ಳುವುದು, ಅದು ಕರ್ನಾಟಕದಲ್ಲಿ ಪಕ್ಷದ ಚುನಾವಣಾ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ನೋಡಿಕೊಳ್ಳುವುದು ಸಭೆಯ ಪ್ರಮುಖ ಅಂಶಗಳಾಗಿವೆ ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳು ಮತ್ತಿತರ ಹಲವಾರು ಕಲ್ಯಾಣ ಯೋಜನೆಗಳನ್ನು ಪ್ರಚಾರ ಮಾಡಲು ಮಂತ್ರಿಗಳಿಗೆ ಸೂಚಿಸಲಾಗಿದೆ. ಐದು ಗ್ಯಾರಂಟಿಗಳೇ ಲೋಕಸಭೆ ಚುನಾವಣೆಯಲ್ಲಿ ನಮ್ಮ ಪ್ರಮುಖ ಶಕ್ತಿ. ಇದು ಬೇರೆ ಯಾವುದೇ ರಾಜ್ಯಗಳು ಜಾರಿಗೆ ತಂದಿಲ್ಲ. ರಾಮ ಮಂದಿರ ಚರ್ಚೆಗೆ ಬರಬಹುದಾದರೂ, ಪಕ್ಷವು ಅದರ ಬಗ್ಗೆ ಅನಗತ್ಯವಾಗಿ ಚಿಂತಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ಜನವರಿ 22 ರಂದು ಅಯೋಧ್ಯೆಯಲ್ಲಿ ನಡೆಯಲಿರುವ ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ನಾಲ್ವರು ಶಂಕರಾಚಾರ್ಯರು ಹಾಜರಾಗದಿರುವ ಹಿನ್ನೆಲೆಯಲ್ಲಿ ಹಿಂದೂ ಸಮುದಾಯವೇ ವಿಭಜನೆಗೊಂಡಿರುವುದರಿಂದ ರಾಮಮಂದಿರದ ವಿಚಾರದ ಬಗ್ಗೆ ಹೆಚ್ಚು ಯೋಚಿಸುತ್ತಿಲ್ಲ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಮೂವರು ಉಪಮುಖ್ಯಮಂತ್ರಿಗಳನ್ನು ನೇಮಿಸಬೇಕು ಎಂಬ ಕೆಲವು ಸಚಿವರ ಬೇಡಿಕೆ ಸಭೆಯಲ್ಲಿ ಚರ್ಚೆಗೆ ಬರಲಿಲ್ಲ. ಚುನಾವಣೆ ಮುಗಿಯುವವರೆಗೆ ಈ ವಿಷಯವನ್ನು ಪ್ರಸ್ತಾಪಿಸಬೇಡಿ ಎಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಟ್ಟುನಿಟ್ಟಾಗಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕರ್ನಾಟಕದಲ್ಲಿ 2019 ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಒಟ್ಟು 28 ಕ್ಷೇತ್ರದ ಪೈಕಿ ಕೇವಲ 1 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ನೀರಸ ಪ್ರದರ್ಶನ ನೀಡಿತ್ತು.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜ.11–2023–24ನೇ ಸಾಲಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು, www.ssp.postmatric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಫೆ.14 ಕೊನೇ ದಿನ. ಮಾಹಿತಿಗೆ ಪಡುವಾರಹಳ್ಳಿಯಲ್ಲಿರುವ ಡಾ.ಬಾಬು ಜಗಜೀವನರಾಂ ಭವನದ ಕಟ್ಟಡ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಕಚೇರಿ ದೂ.ಸಂಖ್ಯೆ–0821–2520910 ಅನ್ನು ಸಂಪರ್ಕಿಬಹುದು.



ತಮಿಳುನಾಡಿಗೆ ಬಿಡುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ನೇತೃತ್ವದಲ್ಲಿ ಮೈಸೂರಿನ ಪುರಭವನದ ಆವರಣದಲ್ಲಿ ನಡೆಯುತ್ತಿರುವ 66ನೇ ದಿನದ ಧರಣಿ ಗುರುವಾರವೂ ನಡೆಯಿತು. ಈ ವೇಳೆ ಬಿಜೆಪಿ ಮುಖಂಡ ರಂಗಪ್ಪ, ಅರುಣ್ ದಳ್ಳಾಳ್, ನಾಗರಾಜು, ಕೆಆರ್ ಮಿಲ್ ಕಾಂತರಾಜು, ಭಾಗ್ಯಮ್ಮ, ವಾಟಾಳ್ ಪ್ರಕಾಶ್, ಮದ್ದೂರು ಮಹದೇವ ಸ್ವಾಮಿ, ಅಂಬಾ ಅರಸ್, ಮಂಗಳ, ಮಂಜುಳಾ ದೇವಿ ಇನ್ನಿತರರಿದ್ದರು.



ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕ್‌ಗಳ ನಿರ್ದೇಶಕರಾಗಿ ನೇಮಕಗೊಂಡ ಎಸ್.ಬಿ.ಎಂ. ಮಂಜು ಅವರನ್ನು ಜೆಡಿಎಸ್ ಕಚೇರಿಯಲ್ಲಿ ಜೆಡಿಎಸ್ ನಗರ ಅಧ್ಯಕ್ಷ ಕೆ.ಟಿ.ಚೆಲುವೇಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮುಖಂಡರಾದ ಆರ್.ಲಿಂಗಪ್ಪ, ಫಾಲ್ಕನ್ ಬೋರೇಗೌಡ, ಸತ್ಯನಾರಾಯಣ, ಗಂಗಾಧರ್, ಎಸ್.ಪ್ರಕಾಶ್, ಹೇಮಲತಾ, ದೇವರಾಜು, ಸತೀಶ್, ಕೋದಂಡ, ಸಿ.ಆರ್.ಮಂಜುನಾಥ್ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಭವಾನಿ ಅಸೋಸಿಯೇಟ್ಸ್:** ವೇತನ ಮತ್ತು ಆದಾಯ ತೆರಿಗೆ ಮೇಲೆ ಟಿಡಿಎಸ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಹೆಚ್ಚುವರಿ ಆದಾಯ ತೆರಿಗೆ ಆಯುಕ್ತರಾದ ಕಲ್ಪಲತಾ ರಾಜನ್, ಭವಾನಿ ಅಸೋಸಿಯೇಟ್ಸ್‌ನ ಎನ್.ಡಿ.ಶ್ರೀನಿವಾಸ್ ಅವರಿಂದ ಉಪನ್ಯಾಸ, ಸ್ಥಳ: ರೋಟರಿ ಚಿಲ್ಡ್ರನ್ ಲೈಬ್ರರಿ–ಡಿ.ಜಿ.ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್, ಟಿಟಿಎಲ್ ಸ್ವತಂತ್ರ ಪದವಿಪೂರ್ವ ಕಾಲೇಜು:** ಬೆ.10ಕ್ಕೆ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ವಿವೇಕ ಕಲಾಹಬ್ಬ ಚಿತ್ರಕಲಾ ಸ್ಪರ್ಧೆ, ಮ. 1.30ಕ್ಕೆ ಬಹುಮಾನ ವಿತರಣಾ ಕಾರ್ಯಕ್ರಮ, ಅಧ್ಯಕ್ಷತೆ: ಟಿಟಿಎಲ್ ಟ್ರಸ್ಟ್ ಸಿಇಓ ಚೇತನ ರಾಮದಾಸ್, ಮುಖ್ಯ ಅತಿಥಿಗಳು: ಬಿಜೆಪಿ ರಾಜ್ಯ ಹಿಂದುಳಿದ ವರ್ಗದ ಅಧ್ಯಕ್ಷ ಆರ್. ರಘು ಕೌಟಿಲ್ಯ, ಡಿಆರ್‌ಎಂ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ. ರಘುರಾಮ್ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಡಾ.ಎಂ.ಎನ್. ರವಿ, ಎಂ.ಎನ್.ಸಂಜಯ್, ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ವಿ.ಪ್ರಶಾಂತ್, ಎಸ್.ಎಸ್.ಭ್ರಮರಾಂಭ, ಸ್ಥಳ: ಕಾಲೇಜು ಆವರಣ.

■ **ಮೈಸೂರು ವಿಶ್ವವಿದ್ಯಾಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ.ಬಾಬು ಜಗಜೀವನರಾಂ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಆರ್. ತಿಮ್ಮರಾಯಪ್ಪ ಅವರಿಂದ ವ್ಯಾಪಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಲ್ಲಿ ಸಂವಿಧಾನದ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ: ಎಂಐಟಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಚಂದ್ರಜೀತ್, ಸ್ಥಳ: ಎಂಐಟಿ ಕಾಲೇಜು, ಮಾನಂದವಾಡಿ ರಸ್ತೆ, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಕಾಲೇಜು:** ವಿದ್ಯಾರ್ಥಿ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಎಡಿಸಿ ಆರ್.ಲೋಕನಾಥ್, ವಿಶೇಷ ಆಹ್ವಾನಿತರು: ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಅಧ್ಯಕ್ಷತೆ: ಕಾಲೇಜಿನ ಪ್ರಾಂಶುಪಾಲ ಸಿ.ಕೆ. ಅಶೋಕಕುಮಾರ್, ಸ್ಥಳ: ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

12.1.2024 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30ರಿಂದ 12 ರವರೆಗೆ

■ **ನೆಹರೂ ಯುವ ಕೇಂದ್ರ, ಮೈಸೂರು ನಗರ ಸಂಚಾರ ಪೊಲೀಸ್, ಮಹಾರಾಜ ಪದವಿಪೂರ್ವ ಕಾಲೇಜು :** ಸ್ವಾಮಿ ವಿವೇಕಾನಂದರ 161ನೇ ಜಯಂತಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ವಿಶೇಷ ಉಪನ್ಯಾಸ: ಪೊಲೀಸ್ ನಿರೀಕ್ಷಕ ಮೊಹಮ್ಮದ್ ಇರ್ಷಾದ್, ಮುಖ್ಯ ಅತಿಥಿಗಳು: ಪ್ರಾಂಶುಪಾಲ ಉದಯ್ ಶಂಕರ್, ಉಪ ಪ್ರಾಂಶುಪಾಲ ಡಾ. ಡಿ.ಮಹೇಶ್, ಗುರುಪ್ರಸಾದ್, ಸ್ಥಳ: ಮಹಾರಾಜ ಪದವಿಪೂರ್ವ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು:** ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಮತ್ತು ಯುವ ಸಪ್ತಾಹ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಎನ್‌ಎಸ್‌ಎಸ್–ಇಟಿಐನ ಪ್ರೊ.ಬಿ.ಚಂದ್ರಶೇಖರ, ಮುಖ್ಯ ಅತಿಥಿಗಳು: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಪುಟ್ಟಸ್ವಾಮಿ, ಕಾರ್ಯದರ್ಶಿ ಕುಬೇರ್ ಪಿ. ಗೌಡ, ಪಿ.ಗೀತಾಂಜಲಿ, ಶ್ರೀಮತಿ ಎಸ್.ಪ್ರಭಾ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.45ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಕನ್ನಡ ನಿತ್ಯೋತ್ಸವ ಕಾರ್ಯಕ್ರಮ, ವಿ.ಕೃ. ಗೋಕಾಕ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪ್ರಧಾನ ಭಾಷಣ: ಹಿರಿಯ ಪತ್ರಕರ್ತ ಗೌರಿಸತ್ಯ, ಸನ್ಮಾನಿಸುವವರು: ಡಾ.ಶುಶ್ರೂತ್‌ಗೌಡ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಉಪಸ್ಥಿತರು: ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ನಾಲಾ ಬೀದಿ ರವಿ, ಮನೋಹರ್, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆ. 11.30ಕ್ಕೆ.

■ **ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಗೋಪಾಲಸ್ವಾಮಿ ಶಿಶು ವಿಹಾರ:** ಬೆಳಗ್ಗೆ 10ಕ್ಕೆ ಸ್ವಾಮಿ ವಿವೇಕಾನಂದರ 161ನೇ ಜಯಂತಿ ಪ್ರಯುಕ್ತ ರಥ ಯಾತ್ರೆ, ಮ.12ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್, ಪ್ರಾಸ್ತಾವಿಕ ನುಡಿ: ಪ್ರಾಂತ ಕಾರ್ಯದರ್ಶಿ ಹೆಚ್.ಕೆ. ಪ್ರವೀಣ್, ಅಧ್ಯಕ್ಷತೆ: ಶಿಶುವಿಹಾರ ಕರೆಸ್ಪಾಂಡೆಂಟ್ ಮಂಜುನಾಥ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ಮಧ್ಯಾಹ್ನ 12ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಏಖಓಗ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುವವರು ಡಾ. ಶರಣಪ್ಪ ವಿ.ಹಲಸೆ, ಕುಲಪತಿಗಳು, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಚೆಪ್ಪಡ್ ಎ.ಇ. ವಾಮನನ್ ನಂಬೂದರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಅಮೃತಾ ನಿತಿನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಡಾ.ಎನ್.ರಮಣಿ–ವೇಣುವಾದನ, 4.00 ಮಹಿಳಾ ರಂಗ, 4.30 ವೃತ್ತಿ ಮಾರ್ಗದರ್ಶನ– ಸ್ವಉದ್ಯೋಗದ ಪ್ರಾಮುಖ್ಯತೆ ಕುರಿತು ಚಾಮರಾಜನಗರದ ಎಸ್.ಬಿ.ಐ. ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ರಾಕೇಶ್ ಅಕುಲ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುವವರು ಬೇದ್ರೆ ಮಂಜುನಾಥ್, 5.45 ಏಖಓಗ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣೀ. ಭಾಗವಹಿಸುವವರು ಡಾ.ಶರಣಪ್ಪ ವಿ.ಹಲಸೆ, ಕುಲಪತಿಗಳು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ಕೃಷಿರಂಗ–ಕೃಷಿ ಲೋಕ, ಪ್ರಸುತಿ–ಆರ್.ಲೋಕೇಶವರಿ, 8.00 ಕನ್ನಡ ಭಾರತಿ–ಕವಿ ಪ್ರಸ್ತುತವಾದುವ ಬಗ್ಗೆ ಮಾತನಾಡುತ್ತಾರೆ ಡಾ.ಸಂತೋಷ್ ಚೊಕ್ಕಾಡಿ, ಕಾವ್ಯಧಾರೆ–ದೊ.ಚಿ. ಗೌಡ ಅವರಿಂದ ಸ್ವರಚಿತ ಕವನಗಳ ವಾಚನ, 9.30 ಬಿ.ವಿ ದುರ್ಗಾ ಭವಾನಿ–ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವ ಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ:** ಮೈಸೂರು ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಪ್ರೊ.ಎಸ್.ಮದಿಯಲಗನ್ ಅವರಿಂದ ಯೋಗದಿಂದ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ, ಅಧ್ಯಕ್ಷತೆ: ಗ್ರಂಥಾಲಯ–ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಚಂದ್ರ ಶೇಖರ, ಸ್ಥಳ: ಡಾ.ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮ. 3.30ಕ್ಕೆ

■ **ಮೈಸೂರು ವಿವಿ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ:** ವಿಶೇಷ ಸರಣಿ ಉಪನ್ಯಾಸ ಮಾಲಿಕೆ, ಉದ್ಘಾಟನೆ: ಕರ್ನಾಟಕ ವಿವಿ ಮಾಜಿ ಕುಲಪತಿ ಪ್ರೊ.ಸೈದಾಪುರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಲೋಕನಾಥ್, ಉಪಸ್ಥಿತರು: ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಬಸವರಾಜಪ್ಪ, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಡಾ. ಮಂಜುನಾಥ್, ವಿಜಯಕುಮಾರ್, ಡಾ.ಎಲ್.ಕುಸುಮ, ಸ್ಥಳ: ಪ್ರೊ. ರಾಜಶೇಖರ ಶೆಟ್ಟಿ ಮೆಮೋರಿಯಲ್ ಹಾಲ್, ಬೆಳಗ್ಗೆ 10 ರಿಂದ.

■ **ಕಲಾ ಸಂದೇಶ ಪ್ರತಿಷ್ಠಾನ:** 20ನೇ ವರ್ಷದ ಸಂಭ್ರಮದ ಅಂಗವಾಗಿ ಕಲಾಭಿವರ್ಧನ 2024 ಭಾರತೀಯ ಕಲೆಗಳ ಆರಾಧನಾ ಪರ್ವ, ವೈಣಿಕ, ಗಾಯಕ, ಶಾಸ್ತ್ರಜ್ಞ ಮತ್ತು ವಾಗ್ಗೇಯಕಾರ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರಿಗೆ ವೀಣಾ ವಾಗ್ಗೇಯ ವಿಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಂಗೀತ ವಿದ್ವಾಂಸ ಡಾ. ನಾಗಮಣಿ ಶ್ರೀನಾಥ್, ಅತಿಥಿಗಳು: ವಿದ್ವಾನ್ ಡಾ.ರಾ.ಸ.ನಂದಕುಮಾರ್, ವಿದುಷಿ ಡಾ.ಸುಕನ್ಯಾ ಪ್ರಭಾಕರ್, ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ, ವಿದ್ವಾನ್ ಎ.ಪಿ. ಶ್ರೀನಿವಾಸ್, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ, ವಿದ್ವಾನ್ ಜಿ.ಎಸ್. ರಾಮಾನುಜಂ, ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ, ವಿದುಷಿ ಡಾ. ತುಳಸಿ ರಾಮಚಂದ್ರ, ವಿದುಷಿ ಡಾ.ಶೀಲಾ ಶ್ರೀಧರ್, ವಿದ್ವಾನ್ ಆರ್. ಕಣ್ಣನ್, ವಿದ್ವಾನ್ ರಾಮಮೂರ್ತಿರಾವ್, ವಿದುಷಿ ಡಾ.ಕೃಪಾ ಫಡ್ಕೆ, ವಿದುಷಿ ಡಾ.ರಾಧಿಕಾ ನಂದಕುಮಾರ್, ವಿದುಷಿ ರೋಹಿಣಿ ಸುಬ್ಬರತ್ನಂ, ವಿದುಷಿ ಡಾ.ಜ್ಯೋತಿಶಂಕರ್, ವಿದುಷಿ ಡಾ.ರಮಾ ವಿ.ಬೆಣ್ಣೂರು, ವಿದ್ವಾನ್ ಆರ್.ಕೆ.ಪದ್ಮನಾಭ, ಅಧ್ಯಕ್ಷತೆ : ವಿದುಷಿ ಡಾ.ವಸುಂಧರಾ ದೊರೆಸ್ವಾಮಿ, ಸಂಜೆ 7ರಿಂದ ವೀಣಾ ವಾಗ್ಗೇಯ ವಿಭೂಷಣ ಡಾ.ರಾ.ವಿಶ್ವೇಶ್ವರನ್ ಅವರಿಂದ ಅಮೋಘ ವೀಣಾ ವಾದನ, ವಿದ್ವಾನ್ ಆನೂರು ಅನಂತ ಕೃಷ್ಣ ಶರ್ಮ–ಮೃದಂಗ, ಸ್ಥಳ:ಗಾನಭಾರತೀಯ ಶ್ರೀಮತಿ ರಮಾಬಾಯಿ ಗೋವಿಂದರಾವ್ ರಂಗಮಂದಿರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಡಿಜಿಟಿಎಂ ಇಂಗ್ಲೀಷ್ ಮಾಧ್ಯಮ ಸ್ಕೂಲ್ :** ಡಿಜಿಟಿಎಂ ಸಾಂಸ್ಕೃತಿಕ ವೈಭವ, ಉದ್ಘಾಟನೆ: ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಅಧ್ಯಕ್ಷತೆ: ಡಿಜಿಟಿಎಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಂ.ವಿ.ತ್ಯಾಗರಾಜ್, ಮುಖ್ಯ ಅತಿಥಿಗಳು: ನಗರ ಪಾಲಿಕೆ ಮಾಜಿ ಸದಸ್ಯರಾದ ಶೋಭಾ ಸುನೀಲ್, ಎಂ.ಸುನೀಲ್, ಸಂಸ್ಥೆ ಆಡಳಿತಾಧಿಕಾರಿ ಹೆಚ್.ಆರ್. ಪಾಂಡುರಂಗ, ಮುಖ್ಯೋಪಾಧ್ಯಾಯ ಎಂ.ಆರ್. ಮಹೇಶ್, ಸ್ಥಳ:ಶ್ರೀ ಶಾರದಾ ರಂಗ ಮಂಟಪ, ಡಿಜಿಟಿಎಂ ಶಾಲೆ ಆವರಣ, ಸಂಜೆ 5ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು):** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ, ಸಂಜೆ 6.15ರಿಂದ.

ಮೈಸೂರು ಮಿತ್ರ

ಶುಕ್ರವಾರ 12 ಜನವರಿ 2024

ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕ ಸ್ತಬ್ಧಚಿತ್ರ ನಿರಾಕರಣೆ

ರಕ್ಷಣಾ ಸಚಿವ ರಾಜನಾಥ್‌ಸಿಂಗ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ

ಬೆಂಗಳೂರು, ಜ.11–ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ನಿರಾಕರಣೆ ಕುರಿತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪತ್ರವನ್ನು ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, 7 ಕೋಟಿ ಕನ್ನಡಿಗರ ಆಳವಾದ ಭಾವನೆಯನ್ನು ವ್ಯಕ್ತಪಡಿಸಿದ್ದೇನೆ. ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರವನ್ನು ನಿರಾಕರಿಸುವುದು ಕೇವಲ ಪ್ರಮಾದವಲ್ಲ; ಇದು ನಮ್ಮ ರಾಜ್ಯದ ಹೆಮ್ಮೆಗೆ ಧಕ್ಕೆಯಾಗಿದೆ. ನಮ್ಮ ಸಾಧನೆಗಳು ರಾಷ್ಟ್ರೀಯ ವೇದಿಕೆಗೆ ಅರ್ಹವಾಗಿವೆ ಎಂದು ಹೇಳಿರುವುದಾಗಿ ತಿಳಿಸಿದ್ದಾರೆ.

ಸತತವಾಗಿ ಕಳೆದ 14 ವರ್ಷಗಳಿಂದ ದೆಹಲಿಯ ಕರ್ತವ್ಯ ಪಥದಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕ ಪಾಲ್ಗೊಂಡು ಹಲವಾರು ಪ್ರಶಸ್ತಿಗಳನ್ನು ಗೆದ್ದಿದೆ. 2005ರಲ್ಲಿ ಭಗವಾನ್ ಬಾಹುಬಲಿ ಮಸ್ತಾಭಿಷೇಕ, 2008ರಲ್ಲಿ ಹೊಯ್ಸಳ, 2011ರಲ್ಲಿ ಬೀದರ್‌ನ ಬಿದರಿ ಕಲೆ, 2012ರಲ್ಲಿ ಭೂತಾರಾಧನೆ, 2015ರಲ್ಲಿ ಚನ್ನಪಟ್ಟಣದ ಆಟಿಕೆಗಳು, 2022ರಲ್ಲಿ ಸಾಂಪ್ರದಾಯಿಕ ಕಲೆಗಳ ಸ್ತಬ್ಧಚಿತ್ರಗಳಿಗೆ ಪ್ರತಿಷ್ಠಿತ ಬಹುಮಾನ ಸಿಕ್ಕಿದೆ. ಪ್ರತಿಯೊಂದು ಸ್ತಬ್ಧಚಿತ್ರವೂ ನಾಡಿನ ಶ್ರೀಮಂತ ಸಂಸ್ಕೃತಿ, ಸಂಪ್ರದಾಯವನ್ನು ತೋರಿಸುವುದಾಗಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಬಾರಿ (2024) ಬ್ರ್ಯಾಂಡ್ ಬೆಂಗಳೂರು ಥೀಮ್ ನಮ್ಮದಾಗಿತ್ತು. ರಕ್ಷಣಾ ಸಚಿವಾಲಯ ಕರೆದ ಎಲ್ಲ ಸಭೆಗಳಲ್ಲಿ ಕರ್ನಾಟಕದ ಪ್ರತಿನಿಧಿಗಳು ಭಾಗಿಯಾಗಿದ್ದರು. ಕೊನೆಯ ಸುತ್ತಿನ ಸಭೆ ಬಳಿಕ ಕರ್ನಾಟಕದ ಸ್ತಬ್ಧಚಿತ್ರ ಪರಿಗಣಿಸಿಲ್ಲ. ಸ್ತಬ್ಧ ಚಿತ್ರದ ಧ್ಯೇಯ ಅಪ್ರತಿಮ ನಗರ ಬೆಂಗಳೂರು ಹೇಗೆ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿದೆ ಮತ್ತು ಸಂಸ್ಕೃತಿ, ಸಂಪ್ರದಾಯದಲ್ಲಿ ದೃಢವಾಗಿ ಬೇರೂರಿದೆ ಎಂಬುದನ್ನು ಚಿತ್ರಿಸುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಅಯೋಧ್ಯೆ ರಾಮಮಂದಿರ: ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಕೆಲ ಹಿಂದೂ ಸ್ವಾಮೀಜಿಗಳ ನಿರ್ಧಾರ!

ನವದೆಹಲಿ,ಜ.11–ಅಯೋಧ್ಯೆಯಲ್ಲಿನ ನೂತನ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮದ ಬಗ್ಗೆ ಹಲವು ಹಿಂದೂ ಸ್ವಾಮೀಜಿಗಳು ಅಸಮಾಧಾನ ವ್ಯಕ್ತಪಡಿಸಿದ್ದು, ಅವರ ವಿಭಿನ್ನ ದೃಷ್ಟಿಕೋನ ಮತ್ತು ನಂಬಿಕೆಗಳನ್ನು ಒತ್ತಿ ಹೇಳಿದ್ದಾರೆ.

ಜ.22ರಂದು ಅಯೋಧ್ಯೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಶಂಕರಾಚಾರ್ಯರ ಕೆಲ ಮಠಗಳ ಸ್ವಾಮೀಜಿಗಳು ನಿರ್ಧರಿಸಿದ್ದಾರೆ ಎಂದು ವರದಿಗಳು ಹೇಳಿವೆ. ಸನಾತನ ಧರ್ಮದ ಅನುಸಾರ ಸಮಾರಂಭ ನಡೆಯುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ಪುರಿಯ ಗೋವರ್ಧನ ಪೀಠದ ಸ್ವಾಮೀಜಿ ನಿಶ್ಚಲಾನಂದ ಸರಸ್ವತಿ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ ಎಂದು ನಮ್ಮ ಶಾಸ್ತ್ರಗಳ ಅನುಸಾರ ದೇವಸ್ಥಾನದಲ್ಲಿ ರಾಮಲಾಲ ವಿಗ್ರಹವನ್ನು ಪ್ರತಿಷ್ಠಾಪಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದ್ದರು.

ಗುರುವಾರ ಅವರು ರಾಮನ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ ಮತ್ತು ಪೂಜೆಯು ಸಾಂಪ್ರದಾಯಿಕ ಆಚರಣೆಗಳೊಂದಿಗೆ ನಡೆಯಬೇಕು ಎಂದು ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದ ತಮ್ಮ ದೃಢ ನಿಲುವನ್ನು ಪುನರುಚ್ಚರಿಸಿರುವ ನಿಶ್ಚಲಾನಂದ್ ಸ್ವಾಮೀಜಿ, 'ಪ್ರಾಣ ಪ್ರತಿ ಷ್ಠಾಪನೆ' ಸಮಾರಂಭಕ್ಕೆ ರಾಜಕೀಯ ಛಾಯೆ ನೀಡಲಾಗಿದೆ ಎಂದು ಪ್ರತಿಪಾದಿಸಿದರು.

ಶೃಂಗೇರಿ ಶಾರದಾ ಪೀಠ ಸ್ಪಷ್ಟನೆ

ಈ ಮಧ್ಯೆ ಕೆಲ ಧರ್ಮದ್ವೇಷಿಗಳು ಸಾಮಾಜಿಕ ಜಾಲತಾಣದಲ್ಲಿ ಶೃಂಗೇರಿ ಶಾರದಾಪೀಠದ ಭಾರತೀತೀರ್ಥ ಸ್ವಾಮಿಗಳ ಫೋಟೋದ ಜೊತೆಗೆ ಶ್ರೀಗಳು ಪ್ರಾಣಪ್ರತಿಷ್ಠಾ ಕಾರ್ಯಕ್ರಮವನ್ನು ವಿರೋಧಿಸುತ್ತಿದ್ದಾರೆ ಎಂಬ ಅರ್ಥ ಬರುವಂತೆ ಸಂದೇಶವನ್ನು ಹಾಕಿ ಪ್ರಚಾರ ಮಾಡುತ್ತಿದ್ದಾರೆ. ಆದರೆ ಶ್ರೀಗಳು ಆ ರೀತಿಯ ಯಾವುದೇ ಸಂದೇಶ ನೀಡಿಲ್ಲ ಎಂದು ಪೀಠ ಸ್ಪಷ್ಟನೆ ನೀಡಿದೆ.

ದೇಶದ ಪ್ರಧಾನಿಯವರು ಗರ್ಭಗುಡಿಯಲ್ಲಿದ್ದು, ವಿಗ್ರಹವನ್ನು ಸ್ಪರ್ಶಿಸುತ್ತಾರೆ ಮತ್ತು 'ಪ್ರಾಣ ಪ್ರತಿಷ್ಠಾಪನೆ' ಸಮಾರಂಭ ಉದ್ಘಾಟಿಸುತ್ತಾರೆ. ಇದಕ್ಕೆ ರಾಜಕೀಯ ರಂಗು ನೀಡಲಾಗಿದೆ. ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಆಗಬೇಕಾದರೆ, ಅದು ನಿಯಮ ಪ್ರಕಾರವಾಗಿರಬೇಕು. ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಅರ್ಧ–ಸತ್ಯ ಮತ್ತು ಅರ್ಧ–ಸುಳ್ಳನ್ನು ಬೆರೆಸಬಾರದು; ಎಲ್ಲವೂ ಧರ್ಮಗ್ರಂಥದ ಜ್ಞಾನದೊಂದಿಗೆ ಹೊಂದಿಕೊಳ್ಳಬೇಕು ಎಂದರು.

ಮತ್ತೊಂದೆಡೆ, ಜ.22ರಂದು ರಾಮಮಂದಿರಕ್ಕೆ ಭೇಟಿ ನೀಡುವುದಿಲ್ಲ ಎಂದು ಪ್ರತಿಪಾದಿಸಿದ ಶಂಕರಾಚಾರ್ಯ ಜ್ಯೋತಿಶ್ ಪೀಠದ ಸ್ವಾಮೀಜಿ ಅವಿಮುಕ್ತೇಶ್ವರಾನಂದ, ಮಂದಿರ ನಿರ್ಮಾಣ ಸನಾತನ ಧರ್ಮದ ವಿಜಯವನ್ನು ಸೂಚಿಸುವುದಿಲ್ಲ ಎಂದು ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಬಹು ಸಂಗೀತ ಪರಿಕರಗಳ ನಾದ, ಗಾಯನದ ಹೊನಲು

ಮಂತ್ರಮುಗ್ಧರಾದ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಸಂಗೀತಾಭಿಮಾನಿಗಳು





ಮೈಸೂರಿನ ಅವಧೂತ ದತ್ತ ಪೀಠಂನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಗುರುವಾರ ನಡೆದ ಬೃಹತ್ ಸಂಗೀತ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕಿ ಕವಿತಾ ಕೃಷ್ಣಮೂರ್ತಿ ಗಾಯನ ಪ್ರಸ್ತುತಪಡಿಸಿದರೆ, ಡಾ.ಎಲ್.ಸುಬ್ರಮಣಿಯಂ ಅವರು ಪಿಟೀಲು ವಾದನ ಉಣಬಡಿಸಿದರು.

ಮೈಸೂರು,ಜ.11(ಪಿಎಂ)– ವೈವಿಧ್ಯಮಯ ಸಂಗೀತ ಶೈಲಿಯ ಝೇಂಕಾರದಲ್ಲಿ ನಾದಮಂಟಪವೆಲ್ಲಾ ಅಕ್ಷರಶಃ ನಾದಮಯವೇ ಆಗಿತ್ತು. ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತ ಪೀಠಂನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನೆಲದ ಶಾಸ್ತ್ರೀಯ ಸಂಗೀತವೂ ಸೇರಿದಂತೆ ವಿವಿಧ ಸಂಗೀತ ಶೈಲಿಯ ಸಮ್ಮಿಲನವು ಸಂಗೀತಾಸಕ್ತರ ಮನಸೂರೆಗೊಂಡಿತು.

ಇಲ್ಲಿ ಗುರುವಾರ ನಡೆದ ಲಕ್ಷ್ಮೀನಾರಾಯಣ ಗ್ಲೋಬಲ್ ಮ್ಯೂಸಿಕ್ ಫೆಸ್ಟಿವಲ್‌ನ 33ನೇ ಆವೃತ್ತಿಯ ಬೃಹತ್ ಸಂಗೀತ ಕಾರ್ಯಕ್ರಮದ ಸಂಗೀತ ಸುಧೆಗೆ ಕಿಕ್ಕಿರಿದು ನೆರೆದಿದ್ದ ಸಭಿಕರು ತಲೆದೂಗಿದರಲ್ಲದೆ, ಚಪ್ಪಾಳೆಯ ಮಳೆ ಸುರಿಸಿದರು. ಅವಧೂತ ದತ್ತ ಪೀಠಂನ ಸಹಯೋಗದಲ್ಲಿ ಅವಧೂತ ದತ್ತ ಪೀಠಂನ 'ನಾದ ಚಕ್ರವರ್ತಿ' ಪುರಸ್ಕೃತ ಪಿಟೀಲು ಮಾಂತ್ರಿಕ ಡಾ.ಎಲ್.ಸುಬ್ರಮಣಿಯಂ ಅವರು ಭಾರತ ಸಿಂಫನಿ ಮತ್ತು ದತ್ತ ಸಿಂಫನಿ ಒಳಗೊಂಡ ಸಂಗೀತ ಸಮ್ಮಿಲನದ ಹೊನಲು ಹೊಮ್ಮಿಸಿ, ಶ್ರೋತೃಗಳ ಮನ ತಣಿಸಿದರು.

ಆ ಮೂಲಕ ವಿಶ್ವವಿಖ್ಯಾತ ದಸರಾದಲ್ಲಿ ಸರಣಿ ಸಂಗೀತ ಕಾರ್ಯಕ್ರಮಗಳ ಸವಿಯಲ್ಲಿ ಸಂಭ್ರಮಿಸಿದ್ದ ಸಂಗೀತಾಸಕ್ತರು, ಮತ್ತೊಮ್ಮೆ ಜಾಗತಿಕ ಸಂಗೀತ ಉತ್ಸವಕ್ಕೆ ಸಾಕ್ಷಿಯಾಗಿ ಸಂಗೀತದ ಅಲೆಯಲ್ಲಿ ತೇಲಿದರು. ಇದರಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಉತ್ತರ ಕಝಾಕಿಸ್ತಾನ್‌ನ ಸಿಂಫೋನಿಕ್ ಆರ್ಕೆಸ್ಟ್ರಾ ತಂಡದ ಸಂಗೀತ ಕಲಾವಿದರು ತಮ್ಮ ಕಲಾ ಕೌಶಲ್ಯ ಮೆರೆದು, ಸಭಿಕರು ಮೈಮರೆಯುವಂತೆ ಮಾಡಿದರು.



ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು ಹಾಗೂ ಸಭಿಕರು ಕಾರ್ಯಕ್ರಮ ವೀಕ್ಷಿಸುತ್ತಿರುವುದನ್ನು ಕಾಣಬಹುದು.

ಡಾ.ಎಲ್.ಸುಬ್ರಮಣಿಯಂ ಅವರ ಮನಮೋಹಕ ಪಿಟೀಲು ವಾದನ, ಕವಿತಾ ಕೃಷ್ಣಮೂರ್ತಿ ಅವರ ಗಾಯನ ಮೋಡಿ ಜೊತೆಗೆ 100ಕ್ಕೂ ಹೆಚ್ಚು ಸಂಗೀತಗಾರರು ಒಂದೇ ವೇದಿಕೆಯಲ್ಲಿ ತಮ್ಮ ಕಲಾ ನೈಪುಣ್ಯ ಹೊಮ್ಮಿಸಿ ಸಂಗೀತದ ಹಿತಾನುಭವ ನೀಡಿದರು. ಸಂಗೀತದ ತರಂಗಗಳು ಸಭಿಕರ ಮೈ ಮನದಲ್ಲಿ ರೋಮಾಂಚನದ ಸಿಂಚನ ಉಂಟುಮಾಡಿದವು. ಇಡೀ ನಾದಮಂಟಪವೇ ಸಂಗೀತದ ಅಲೆಗಳಲ್ಲಿ ತೇಲುವಂತಾಯಿತು.

ಡಾ.ಅಂಬಿ ಸುಬ್ರಮಣಿಯಂ ಅವರ ಪಿಟೀಲು ವಾದನದೊಂದಿಗೆ ಕಝಾಕಿಸ್ತಾನ್‌ನ ಕಲಾವಿದರ ಹತ್ತಾರು ಪಿಟೀಲುಗಳ ನಾದವೂ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ವಿ.ವಿ.ರಮಣಮೂರ್ತಿ (ಮೃದಂಗ) ಮತ್ತು ಪಂಡಿತ್ ತನ್ಮೊಯ್ ಬೋಸ್ (ತಬಲ) ಅವರ ವಾದ್ಯ ಸಂಗೀತ ಹೊನಲಿಗೆ ಸಂಗೀತಾಭಿಮಾನಿಗಳು ತಲೆದೂಗಿದರು.

ಉತ್ತರ ಕಝಾಕಿಸ್ತಾನ್‌ನ ಅಕ್ತತ್ ಗಲೇವ್ ಅವರ ಸಾಂಪ್ರದಾಯಿಕ (ಏಕವ್ಯಕ್ತಿ ಸಂಗೀತ ಕಾರ್ಯಕ್ರಮ) ಕಝಾಕಿಸ್ತಾನ್ ವಾದ್ಯ ಸಂಗೀತವಾದ 'ದೊಂಬ್ರಾ' ನಾದಕ್ಕೆ ಸಭಿಕರು ಪುಳಕಿತರಾದರು. ಬಳಿಕ ಇವರ ತಂಡದವರೇ ನಡೆಸಿಕೊಟ್ಟ ಸಮೂಹ ವಾದ್ಯ ಸಂಗೀತವು ಇಡೀ ಸಭಾಂಗಣದಲ್ಲಿ ಸಂಗೀತ ತರಂಗಗಳನ್ನು ಸೃಷ್ಟಿಸಿತು. ನಂತರ ವೇದಿಕೆಯು ಕಝಾಕಿಸ್ತಾನ್‌ನ ಜಾನಪದ ಸಂಗೀತ–ಗಾಯನಕ್ಕೆ ತೆರೆದು ಕೊಂಡಿದ್ದಲ್ಲದೆ, ಕಝಾಕಿಸ್ತಾನ್ ತಂಡದ ಗಾಯಕಿ 'ಶ್ರೀಮನ್ ನಾರಾಯಣ...' ಗೀತೆ ಸಾದರಪಡಿಸಿ ಸಭಿಕರ ಮನಕ್ಕೆ ಲಗ್ಗೆಯಿಟ್ಟು ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು.

ನಂತರ ಅಸ್ಟ್ರಲ್ ಸಿಂಫನಿಯ ಸ್ವರ ಮೇಳದ ಸಂಯೋಜನೆಗೆ ವೇದಿಕೆ ತೆರೆದುಕೊಂಡಿತು. ಬಳಿಕ ದತ್ತ ಸಿಂಫನಿಯ ಭಕ್ತಿಭಾವದ ಸಂಗೀತ–ಗಾಯನಕ್ಕೆ ವೇದಿಕೆ ತೆರೆದುಕೊಂಡಿತು. ಈ ವೇಳೆ ಕವಿತಾ ಕೃಷ್ಣಮೂರ್ತಿ ಅವರ ಮಾಧುರ್ಯದ ಗಾನಕ್ಕೆ ಸಭಿಕರು ಮನಸೋತರು. 'ಮೆಲೋಡಿ ಕ್ವೀನ್' ಎಂಬ ಬಣ್ಣನೆಗೆ ಭಾಜನರಾದ ಅವರು 'ಶ್ರೀ ಗಣಶಯ ನಮಃ.... ಜೈ ಜೈ ಗಣಪತಿ ಮಂಗಳ ಕಾರಿ... ಗೀತೆಗಳನ್ನು ಸಾದರಪಡಿಸಿದರು. ಮೂರು ಚಲನೆಯುಳ್ಳ ಈ ದತ್ತ ಸಿಂಫನಿಯನ್ನು ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು ರಚಿಸಿದ್ದರೆ, ಡಾ.ಎಲ್. ಸುಬ್ರಮಣಿಯಂ ಸಿಂಫನಿ ಮಾಡಿದ್ದಾರೆ.

ಬಳಿಕ ನಡೆದ ಪ್ಯಾರಿಸ್ ಸಂಗೀತ ಕಛೇರಿಯಲ್ಲಿ ಪಿಟೀಲು ಮಾಂತ್ರಿಕ ಡಾ.ಎಲ್. ಸುಬ್ರಮಣಿಯಂ ನಿರಂತರವಾಗಿ ತಮ್ಮ ವಾದ್ಯ ಸಂಗೀತದ ಹೊನಲು ಹರಿಸಿ ಸಂಗೀತಾಸಕ್ತರ ಮನ ತಣಿಸಿದರು. ವಿವಿಧ ವಾದ್ಯ ಸಂಗೀತದ ಜುಗಲ್‌ಬಂಧಿ ನಾದವೂ ಸಂಗೀತಾಸಕ್ತರಿಗೆ ರಸದೌತಣ ಉಣಬಡಿಸಿತು. ಮೆಸ್ಟ್ರೋ ಅಬ್ಜಲ್ ಮುಖಿದ್ದಿನ್ ಅವರು ಉತ್ತರ ಕಝಾಕಿಸ್ತಾನ್‌ನ ಸಿಂಫೋ ನಿಕ್ ಆರ್ಕೆಸ್ಟ್ರಾ ತಂಡದ ನೇತೃತ್ವ ವಹಿಸಿದ್ದರು. ಸುಮಾರು ಎರಡು ತಾಸು ಸುದೀರ್ಘವಾಗಿ ನಡೆದ ಸಂಗೀತ ಕಾರ್ಯಕ್ರಮ ಸಂಗೀತಾಸಕ್ತರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು.

ಅವಧೂತ ದತ್ತಪೀಠಂನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ ಸಂಗೀತ ಕಾರ್ಯಕ್ರಮ ವೀಕ್ಷಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಅವರ ಧರ್ಮಪತ್ನಿಯವರೂ ಆದ ಅಕಾಡೆಮಿ ನ್ಯೂಸ್ ಪೇಪರ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ರ್‍ಯಾಲಿ ಗಣಪತಿ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು. ಅಪಾರ ಸಂಖ್ಯೆಯಲ್ಲಿ ಸಂಗೀತಾಸಕ್ತರು ನೆರೆದಿದ್ದರು. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು.



ಚಾಮುಂಡೇಶ್ವರಿ ಸನ್ನಿಧಿಯ ಸುತ್ತಮುತ್ತ ಕಸದ ರಾಶಿ; ಭಕ್ತಾದಿಗಳಿಗೆ ಮುಜುಗರ!

- ಗ್ರಾಮ ಪಂಚಾಯ್ತಿಗೆ ಇದೆಲ್ಲದರ ಅರಿವೇ ಇಲ್ಲ
- ಪ್ಲಾಸ್ಟಿಕ್ ವಿರುದ್ಧ ಬೊಬ್ಬಿರಿದ ಅರಣ್ಯ ಇಲಾಖೆ ಮೌನ
- ಬೆಟ್ಟದಲ್ಲೆಲ್ಲಾ ರಾರಾಜಿಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ





ಚಾಮುಂಡಿಬೆಟ್ಟದ ಎಲ್ಲೆಲ್ಲೂ ಪ್ಲಾಸ್ಟಿಕ್ ರಾಶಿಯೇ ಬಿದ್ದಿದೆ. ಕೇವಲ ಪ್ಲಾಸ್ಟಿಕ್ ಮಾತ್ರವಲ್ಲ ಬಿಯರ್ ಬಾಟಲಿಗಳು ಕೂಡ ಕಣ್ಣಿಗೆ ರಾಚುತ್ತಿದೆ. ಪ್ರಮುಖವಾಗಿ ಉತ್ತನಹಳ್ಳಿ ರಸ್ತೆ, ನಂದಿ ರಸ್ತೆಯ ಇಕ್ಕೆಲಗಳಲ್ಲಿ ಪ್ಲಾಸ್ಟಿಕ್ ಮತ್ತು ಬಿಯರ್ ಬಾಟಲ್‌ಗಳು ರಾಶಿ ಬಿದ್ದಿವೆ. ದೇವಿಕೆರೆ ಸುತ್ತಮುತ್ತ ಕೂಡ ಪ್ಲಾಸ್ಟಿಕ್ ಜೊತೆಗೆ ತಿಂದು ಬಿಸಾಡಿದ ಪ್ಲೇಟ್‌ಗಳು ಮತ್ತು ಎಲೆಗಳು ಕಂಡು ಬರುತ್ತಿವೆ. ಅಲ್ಲಿ ಬಿದ್ದಿರುವ ಎಲೆಗಳನ್ನು ಮೇಯಲು ಬರುವ ಜಾನುವಾರುಗಳು ಪ್ಲಾಸ್ಟಿಕ್ ಅನ್ನು ತಿಂದು ಸಾವಿಗೀಡಾಗುವ ಆತಂಕ ಎದುರಾಗಿದೆ. ಚಾಮುಂಡಿ ತಾಯಿಗೆ ಅಭಿಷೇಕಕ್ಕಾಗಿ ನೀರು ಕೊಂಡೊಯ್ಯುವ ದೇವಿಕೆರೆಯು ಕೂಡ ಕಲುಷಿತಗೊಳ್ಳುತ್ತಿದೆ. ವಿಪರ್ಯಾಸವೆಂದರೆ ಸ್ಥಳೀಯ ಗ್ರಾಪಂಗೆ ಇದರ ಅರಿವೆ ಇಲ್ಲವೇ ಎಂಬ ಪ್ರಶ್ನೆ ಕಾಡುತ್ತಿದೆ. ಅರಣ್ಯ ಇಲಾಖೆಯಂತೂ ಕೆಲ ತಿಂಗಳ ಹಿಂದೆ ಪ್ಲಾಸ್ಟಿಕ್ ಮುಕ್ತ ಅಭಿಯಾನವನ್ನು ಭರ್ಜರಿಯಾಗಿ ನಡೆಸಿ ಭಾರಿ ಪ್ರಚಾರ ಪಡೆದ ನಂತರ ನಿದ್ದೆಗೆ ಜಾರಿದಂತಾಗಿದೆ.

ಮೈಸೂರು, ಜ.11– ಪ್ರಸಿದ್ಧ ಧಾರ್ಮಿಕ ಕ್ಷೇತ್ರವೂ, ಪ್ರವಾಸಿ ತಾಣವೂ ಆಗಿರುವ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಹಾಗೂ ಪ್ಲಾಸ್ಟಿಕ್ ರಾಶಿ ರಾರಾಜಿಸುತ್ತಿದ್ದು, ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳು ಹಾಗೂ ಚಾಮುಂಡಿಬೆಟ್ಟದ ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶದಿಂದ ಆಗಮಿಸುವ ಪ್ರವಾಸಿಗರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.

ಚಾಮುಂಡಿಬೆಟ್ಟದಲ್ಲಿ ದೇವರನ್ನು ದರ್ಶನ ಮಾಡುವ ಮುನ್ನಾ ಭಕ್ತಾದಿಗಳು ರಾಶಿ ರಾಶಿ ಬಿದ್ದಿರುವ ಕಸದ ರಾಶಿಯ ದರ್ಶನ ಪಡೆಯುವ ದುಸ್ಥಿತಿ ನಿರ್ಮಾಣವಾಗಿದೆ. ವಿಶೇಷವಾಗಿ ಟೂರಿಸ್ಟ್ ಬಸ್‌ಗಳಲ್ಲಿ ಆಗಮಿಸುವ ಪ್ರವಾಸಿಗರು ಬಸ್ ಇಳಿಯುತ್ತಿದ್ದಂತೆಯೇ ಕಸ ಹಾಗೂ ವಿವಿಧ ತ್ಯಾಜ್ಯಗಳನ್ನು ನೋಡುವಂತಹ ದುಸ್ಥಿತಿ ಉಂಟಾಗಿದೆ. ಇದರ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯಿತಿಯಾಗಲೀ ಅಥವಾ ಅರಣ್ಯ ಇಲಾಖೆಯಾಗಲೀ ಕಿಂಚಿತ್ತು ಗಮನಹರಿಸದೇ ನಿದ್ರಾವಸ್ಥೆಯಲ್ಲಿರುವುದು ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಚಾಮುಂಡಿಬೆಟ್ಟದಲ್ಲಿ ದಿನನಿತ್ಯ ಕನಿಷ್ಠ ಸಾವಿರ ಎಳನೀರು ಮಾರಾಟವಾಗಬಹುದು. ಎಳನೀರು ಮಾರಾಟಗಾರರು ಬೆಟ್ಟದ ಪ್ರವಾಸಿ ವಾಹನಗಳು ನಿಲ್ಲುವ ಪಾರ್ಕಿಂಗ್ ಸ್ಥಳದಲ್ಲಿ ಎಳನೀರು ಬುಂಡೆಗಳನ್ನು ರಾಶಿ ಹಾಕುತ್ತಿದ್ದರು. ಗ್ರಾಪಂ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇದ್ದಾಗ ದೇವಸ್ಥಾನ ಆಡಳಿತ ಮಂಡಳಿಯವರೇ ಇವುಗಳನ್ನೆಲ್ಲಾ ತೆರವುಗೊಳಿಸಿ ಸ್ವಚ್ಛಗೊಳಿಸಿದರೂ ವ್ಯಾಪಾರಸ್ಥರು ಮತ್ತೆ ಮತ್ತೆ ಈ ಸ್ಥಳದಲ್ಲಿ ಎಳನೀರು ಬುಂಡೆಗಳನ್ನು ಹಾಕುವುದನ್ನು ಬಿಟ್ಟಿಲ್ಲ. ಇದು ಮಾತ್ರವಲ್ಲದೇ ಉತ್ತನಹಳ್ಳಿ ರಸ್ತೆ, ನಂದಿ ರಸ್ತೆ ಹಾಗೂ ದೇವಿಕೆರೆ ಬಳಿಯೂ ಕೂಡ ತ್ಯಾಜ್ಯದ ರಾಶಿಯೇ ಬಿದ್ದಿದೆ.

ಕಳೆದ ಸೆ.1ರಂದು ಅರಣ್ಯ ಇಲಾಖೆ ಚಾಮುಂಡಿಬೆಟ್ಟವನ್ನು ಸಂಪೂರ್ಣ ಪ್ಲಾಸ್ಟಿಕ್ ಮುಕ್ತ ಮಾಡುವ ನಿಟ್ಟಿನಲ್ಲಿ ಅಭಿಯಾನ ನಡೆಸಿ, ಇಲ್ಲಿನ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟ ಮಾಡಿದರೆ ಮೊದಲ ಬಾರಿಗೆ ಒಂದು ಸಾವಿರ ರೂ., ಎರಡನೇ ಬಾರಿಗೆ ಐದು ಸಾವಿರ ರೂ., ಮೂರನೇ ಬಾರಿಗೆ ಸಿಕ್ಕಿ ಬಿದ್ದರೇ ಹತ್ತು ಸಾವಿರ ರೂ. ದಂಡ ವಿಧಿಸಲಾಗುವುದು. ಆನಂತರವೂ ಪ್ಲಾಸ್ಟಿಕ್ ಸಿಕ್ಕಿಬಿದ್ದರೆ ಅಂತಹ ಅಂಗಡಿಯ ಲೈಸೆನ್ಸ್ ರದ್ದುಪಡಿಸಿ ಅಂಗಡಿಯನ್ನು ಬಂದ್ ಮಾಡಿಸಲಾಗುವುದು ಎಂದು ಘೋಷಿಸಿತ್ತು. ಸೆ.1ರಿಂದ 5ರವರೆಗೆ ಜಾಗೃತಿ ಅಭಿಯಾನ ನಡೆಸಿತ್ತು ಆ ಸಂದರ್ಭದಲ್ಲಿ ಪ್ಲಾಸ್ಟಿಕ್‌ನೊಂದಿಗೆ ಸಿಕ್ಕಿಬಿದ್ದ ಅಂಗಡಿ ಮಾಲೀಕರಿಗೆ ಶೂನ್ಯ ದಂಡದ ರಶೀದಿಯನ್ನು ನೀಡಿದ್ದಲ್ಲದೇ ಮುಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡಿದರೇ ದಂಡ ಕಟ್ಟಿಟ್ಟಬುತ್ತಿ ಎಂದು ಖಡಕ್ ಎಚ್ಚರಿಕೆ ನೀಡಿತ್ತು. ಅರಣ್ಯ ಇಲಾಖೆಯ ಈ ಅಭಿಯಾನವು ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಭಾರಿ ಪ್ರಚಾರ ಪಡೆದಿತ್ತು. ಅರಣ್ಯ ಇಲಾಖೆಯ ಈ ಪ್ರಚಾರದ ಅಬ್ಬರ ಕಂಡು ಪ್ರವಾಸಿಗರು ಬೆಟ್ಟಕ್ಕೆ ಪ್ಲಾಸ್ಟಿಕ್ ಕೊಂಡೊಯ್ಯಲು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಅರಣ್ಯ ಇಲಾಖೆಯವರು ಅಂಗಡಿಗಳಲ್ಲಿ ಪ್ಲಾಸ್ಟಿಕ್ ದೊರೆತರೆ ಮಾತ್ರ ದಂಡ ವಿಧಿಸುವುದಾಗಿ ಘೋಷಿಸಿದ್ದರು. ಆದರೆ ಚಾಮುಂಡಿಬೆಟ್ಟದ ಎಲ್ಲೆಡೆಯೂ ರಾಶಿ ರಾಶಿ ಪ್ಲಾಸ್ಟಿಕ್ ಬಿದ್ದಿದ್ದರೂ ಯಾಕೆ ಗಮನಿಸುತ್ತಿಲ್ಲ ಎಂಬುದಕ್ಕೆ ಅಂಗಡಿಗಳಲ್ಲಿ ಪ್ಲಾಸ್ಟಿಕ್ ದೊರೆತಿದ್ದರೆ ಮಾತ್ರ ದಂಡ ವಿಧಿಸಲಾಗುತ್ತದೆ. ಅದು ಬಿಟ್ಟು ಎಲ್ಲೆಲ್ಲೂ ರಾಶಿ ರಾಶಿ ಪ್ಲಾಸ್ಟಿಕ್ ಬಿದ್ದಿದ್ದರೇ ಏನು ಕ್ರಮ ಕೈಗೊಳ್ಳುವುದು ಎಂಬುದರ ಬಗ್ಗೆ ಅಭಿಯಾನದಲ್ಲಿ ಅರಣ್ಯ ಇಲಾಖೆ ಹೇಳಿರಲಿಲ್ಲ. ಹೀಗಾಗಿಯೇ ತೆಪ್ಪಗಿದ್ದಾರೆ ಎಂದು ಕೆಲವರು ಕುಹಕವಾಡುತ್ತಿದ್ದಾರೆ.

ಪವಿತ್ರ ಧಾರ್ಮಿಕ ಕ್ಷೇತ್ರವೂ ಪ್ರವಾಸಿ ತಾಣವೂ ಆಗಿರುವ ಚಾಮುಂಡಿಬೆಟ್ಟವನ್ನು ಈ ತ್ಯಾಜ್ಯಗಳಿಂದ ಮುಕ್ತಗೊಳಿಸಿ ಉತ್ತಮ ಪರಿಸರ ನಿರ್ಮಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆ, ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಅರಣ್ಯ ಇಲಾಖೆ ಮುಂದಾಗಬೇಕು. ಮೈಸೂರು ಜಿಲ್ಲಾಧಿಕಾರಿಗಳು ಕೂಡ ಇದರ ಬಗ್ಗೆ ಗಮನಹರಿಸಬೇಕು ಎಂದು ಕಳಕಳಿಯುಳ್ಳ ನಾಗರಿಕರ ಆಗ್ರಹವಾಗಿದೆ.

ನಕ್ಕರೆ ಅದೇ ಸ್ವರ್ಗ

ಮರೆಗುಳಿ ಆಫೀಸರ್ : "ಛೇ ಬರ್‍ತಾ ಬರ್‍ತಾ ನನಗೆ ಮರೆವು ಇನ್ನೂ ಜಾಸ್ತಿ ಆಯ್ತು ಕಣೆ"
ಹೆಂಡತಿ : "ಯಾಕ್ರಿ, ಏನು ಮರೆತಿರಿ?"
ಆಫೀಸರ್ : "ಇವತ್ತೂ ಆಫೀಸ್‌ನಲ್ಲಿ ನಿದ್ದೆ ಮಾಡುವುದನ್ನು ಮರೆತೆ!"


ಮೈಸೂರು ಮಿತ್ರ
ಶುಕ್ರವಾರ, 12 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........
ವಿನಯವಂತರಿಗೆ ಕ್ರೋಧ ಬರದು. ದೃಢ ಮನಸ್ಸುಳ್ಳವರಿಗೆ ಹಿಂಜರಿಕೆ ಇರದು. – ಪ್ರತಿಮಾ ನಾಟಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲೆಕ್ಕಕ್ಕಿಂತ ಹೆಚ್ಚು ಹೊರಬಾರದು, ಲೆಕ್ಕಕ್ಕಿಂತ ಹೆಚ್ಚು ಬಯಸಬಾರದು

ನಿಮ್ಮ ಪತ್ರಗಳು

■ ಸೈಕಲ್ ಟ್ರ್ಯಾಕ್‌ನ ರೆಟ್ರೋ ಪ್ರತಿಫಲಕ ಬೋಲಾರ್ಡ್‌ಗಳು ನಾಶ



ಮಾನ್ಯರೆ,

ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದಿಂದ 100 ಮೀಟರ್ ದೂರದಲ್ಲಿರುವ ವಿಶ್ವಮಾನವ ಜೋಡಿ ರಸ್ತೆಯಲ್ಲಿನ ಸೈಕಲ್ ಟ್ರ್ಯಾಕ್‌ನ ಉದ್ದಕ್ಕೂ ಹಲವಾರು ರೆಟ್ರೋ–ರಿಫ್ಲೆಕ್ಟಿವ್ ಬೋಲಾರ್ಡ್‌ಗಳನ್ನು ಧ್ವಂಸಗೊಳಿಸಲಾಗಿದೆ. ಈ ಘಟನೆ ಎಳನೀರು ಅಂಗಡಿಯೊಂದರ ಮುಂದೆ ಸಂಭವಿಸಿದೆ.

ಮಂಗಳವಾರದವರೆಗೆ ಸೈಕಲ್ ಟ್ರ್ಯಾಕ್ ಉತ್ತಮ ಸ್ಥಿತಿಯಲ್ಲಿತ್ತು. ರಾತ್ರಿ ವೇಳೆಯಲ್ಲಿ ಸೈಕ್ಲಿಸ್ಟ್‌ಗಳಿಗೆ ಸುರಕ್ಷತೆಯನ್ನು ಕಲ್ಪಿಸುವ ಉದ್ದೇಶದಿಂದ ರೆಟ್ರೋ–ರೆಫ್ಲೆಕ್ಟಿವ್ ಬೋಲಾರ್ಡ್‌ಗಳನ್ನು ಅಳವಡಿಸಲಾಗಿತ್ತು. ಆದರೆ ಈಗ ಅವುಗಳು ಕಿತ್ತು ಹೋಗಿವೆ. ಈ ನಿರ್ದಿಷ್ಟ ಸ್ಥಳದ ಟ್ರ್ಯಾಕ್‌ಗಳ ನಡುವೆ ಬೋಲಾರ್ಡ್‌ಗಳನ್ನು ತೆರವುಗೊಳಿಸಲು ಯಾವುದೇ ಕಾನೂನುಬದ್ಧ ಕಾರಣವಿಲ್ಲ ಎನ್ನಲಾಗಿದೆ.

ರಸ್ತೆಯ ಮೇಲ್ಮೈಯಲ್ಲಿ ಮತ್ತು ರಸ್ತೆಯ ಬದಿಯಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವ ಈ ಪ್ರತಿಫಲಿತ ಸಾಧನಗಳು, ರಸ್ತೆಯ ಜೋಡಣೆಯನ್ನು ಸ್ಪಷ್ಟವಾಗಿ ಮತ್ತು ಸೈಕ್ಲಿಸ್ಟ್‌ಗಳಿಗೆ ಗೊತ್ತುಪಡಿಸಿದ ಮಾರ್ಗವನ್ನು ವಿವರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಈ ಸುರಕ್ಷತಾ ವೈಶಿಷ್ಟ್ಯಗಳ ನಾಶವು ಸೈಕ್ಲಿಸ್ಟ್‌ಗಳ ಯೋಗಕ್ಷೇಮಕ್ಕೆ ಅಪಾಯವನ್ನುಂಟು ಮಾಡುತ್ತದೆ ಮತ್ತು ದುಷ್ಕರ್ಮಿಗಳಿಂದ ಉದ್ದೇಶಪೂರ್ವಕ ವಿಧ್ವಂಸಕ ಕೃತ್ಯವನ್ನು ಸೂಚಿಸುತ್ತದೆ.

ಸೈಕ್ಲಿಸ್ಟ್‌ಗಳು ತಮ್ಮ ಸವಾರಿಯ ಸಮಯದಲ್ಲಿ, ವಿಶೇಷವಾಗಿ ರಾತ್ರಿಯಲ್ಲಿ ಸುರಕ್ಷಿತ ವಾತಾವರಣವನ್ನು ಒದಗಿಸಲು ಮೈಸೂರು ನಗರಪಾಲಿಕೆಯಿಂದ ಮೀಸಲಾದ ಸೈಕಲ್ ಮಾರ್ಗಗಳನ್ನು ವಿನ್ಯಾಸಗೊಳಿಸಲಾಗಿದೆ ಎಂಬುದು ಗಮನಿಸಬೇಕಾದ ಸಂಗತಿ. ದುರದೃಷ್ಟವಶಾತ್, ಅವುಗಳ ಉದ್ದೇಶಿತ ಬಳಕೆಗೆ ಮುಂಚೆಯೇ, ಈ ಮಾರ್ಗಗಳು ದ್ವಿಚಕ್ರ ಮತ್ತು ನಾಲ್ಕು–ಚಕ್ರ ವಾಹನಗಳಿಗೆ ಆದ್ಯತೆಯ ಪಾರ್ಕಿಂಗ್ ಸ್ಥಳಗಳಾಗಿವೆ.

ಇದರಿಂದ ಸೈಕ್ಲಿಸ್ಟ್‌ಗಳ ಸುರಕ್ಷತೆ ಹಾಗೂ ಅಡೆತಡೆಗಳಿಗೆ ಕಾರಣವಾಗಿದ್ದು, ಸೈಕ್ಲಿಸ್ಟ್‌ಗಳ ನಿರಂತರ ಸುರಕ್ಷತೆ ದೃಷ್ಟಿಯಿಂದ ಈ ವಿಧ್ವಂಸಕ್ಕೆ ಕಾರಣರಾದವರ ವಿರುದ್ಧ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೆ ಈ ಮಾರ್ಗಗಳಲ್ಲಿ ಅನಧಿಕೃತ ಪಾರ್ಕಿಂಗ್‌ಗೆ ಕಡಿವಾಣ ಹಾಕಬೇಕೆಂದು ಈ ಮೂಲಕ ಮನವಿ.

– ಕಾಳಜಿವುಳ್ಳ ನಾಗರಿಕ, ಮೈಸೂರು.

■ ಕೆಸಿ ಬಡಾವಣೆ ಉದ್ಯಾನದ ಉಪಕರಣ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಕೆ.ಸಿ. ಬಡಾವಣೆಯ ವೀರ ಯೋಧ ಪ್ರಶಾಂತ್ ಉದ್ಯಾನವನದಲ್ಲಿ ವ್ಯಾಯಾಮ ಮಾಡುವ ಉಪಕರಣಗಳು ಹಳೆಯದಾಗಿದ್ದು, ಹಾಳಾಗಿವೆ. ಈ ಉಪಕರಣಗಳಲ್ಲಿ ವಾಯು ವಿಹಾರಿಗಳು ವ್ಯಾಯಾಮ ಮಾಡಲು ಸಾಧ್ಯವಿಲ್ಲ. ಅಲ್ಲದೆ ಇದರಿಂದ ಅಪಾಯಗಳಾಗುವ ಸಂಭವ ವಿದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟವರು ಉಪಕರಣಗಳನ್ನು ಸರಿಪಡಿಸಿ ವಾಯುವಿಹಾರಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ನೊಂದ ವಾಯುವಿಹಾರಿಗಳು, ಕೆ.ಸಿ. ಬಡಾವಣೆ, ಮೈಸೂರು.

■ ಪಾರಂಪರಿಕ ಕಟ್ಟಡಗಳನ್ನು ಹೊಸದಾಗಿ ನಿರ್ಮಾಣ ಮಾಡುವುದು ಸೂಕ್ತ

ಮಾನ್ಯರೆ,

ಕಳೆದ ಶನಿವಾರ ಮೈಸೂರಿನಲ್ಲಿ ನಡೆದ, "ಜೀವಂತ ಪರಂಪರೆಯಾಗಿ ಮಾರುಕಟ್ಟೆಗಳು : ಸಂರಕ್ಷಣೆ ಮತ್ತು ಪುನಶ್ಚೇತನ" ಕುರಿತ ಸಮ್ಮೇಳನದಲ್ಲಿ ಕೆಲವು ಪಾರಂಪರಿಕ ತಜ್ಞರು ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಸೇರಿದಂತೆ ಇತರ ಪಾರಂಪರಿಕ ಕಟ್ಟಡಗಳನ್ನು "ನೆಲಸಮ" ಮಾಡದೇ ಈ ಕಟ್ಟಡಗಳನ್ನು ನವೀಕರಿಸಿ ಸಂರಕ್ಷಣೆ ಮಾಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಕಳೆದ ಹತ್ತು ವರ್ಷಗಳ ಹಿಂದೆಯೇ, ಮೈಸೂರಿನ ದೇವರಾಜ ಮಾರುಕಟ್ಟೆಯ ಉತ್ತರ ಭಾಗ ಮತ್ತು ಲ್ಯಾನ್ಸ್‌ಡೌನ್ ಕಟ್ಟಡದ ಮಧ್ಯ ಭಾಗವೇ ಕುಸಿದು ಕೆಲವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಪುರಾತನ ಕಟ್ಟಡಗಳು ಯಾವಾಗ ಬೇಕಾದರೂ ಬೀಳಬಹುದೆಂದು ಇಲ್ಲಿನ ವ್ಯಾಪಾರಸ್ಥರು ಹೇಳುತ್ತಾರೆ.

ಈ ಕಟ್ಟಡಗಳನ್ನು "ನೆಲಸಮ" ಮಾಡಿ, ಈ ಕಟ್ಟಡಗಳ ಪಾರಂಪರಿಕತೆಯನ್ನು ಉಳಿಸಿಕೊಂಡು, ನಾಲ್ಕೈದು ಅಂತಸ್ತುಗಳ ಬಹು ಮಹಡಿ ಕಟ್ಟಡಗಳನ್ನು ಹೊಸದಾಗಿ ನಿರ್ಮಾಣ ಮಾಡಿ, ಕೆಳ ಅಂತಸ್ತುಗಳಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಿದರೇ ಹೀಗಿರುವ ದೇವರಾಜ ಅರಸು ರಸ್ತೆ ಮತ್ತು ಸಯ್ಯಾಜಿರಾವ್ ರಸ್ತೆಗಳ ಪಾರ್ಕಿಂಗ್ ಸಮಸ್ಯೆಯು ಬಗೆಹರಿಯುತ್ತದೆ ಮತ್ತು ಸಣ್ಣಪುಟ್ಟ ವ್ಯಾಪಾರ ಮಾಡುವ ಸಾವಿರಾರು ಕುಟುಂಬಗಳಿಗೂ ಸಹಾಯವಾಗುತ್ತದೆ ಹಾಗೂ ಮೈಸೂರು ನಗರಪಾಲಿಕೆಗೂ ಆದಾಯ ಬರುತ್ತದೆ.

ಹಳೆಯ ಕಟ್ಟಡಗಳನ್ನು ನವೀಕರಿಸುವುದು, ಕೇವಲ ತಾತ್ಕಾಲಿಕವಾಗಿ ತೇಪೆ ಹಚ್ಚುವ ಕೆಲಸವಾಗಬಹುದಷ್ಟೆ, ಮುಂದಿನ ಪೀಳಿಗೆಗೆ ಈ ಕಟ್ಟಡಗಳ ಪಾರಂಪರಿಕತೆಯನ್ನು ಉಳಿಸಿಕೊಂಡು, ಹೊಸದಾಗಿ ನಿರ್ಮಾಣ ಮಾಡುವುದೇ ಸೂಕ್ತವಾದುದ್ದು, ಈ ಬಗ್ಗೆ ಕಟ್ಟಡಗಳ ನಿರ್ಮಾಣದ ಪಾರಂಪರಿಕ ತಜ್ಞರು ಚಿಂತಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು




ಶಂಕರೇಗೌಡ
ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ
ಮೊ. 9141054473

ಹಿತ ವಚನ

ಸಂಚಾರದ ಉಪಾಯ ಬಲ್ಲವರಿಗೆ ಅಪಾಯವಿಲ್ಲ...!

ದೇಶದಲ್ಲಿ ವರ್ಷದಿಂದ ವರ್ಷಕ್ಕೆ ರಸ್ತೆ ಅಪಘಾತಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಲು ದೇಶಾದ್ಯಂತ ಪ್ರತಿವರ್ಷದಂತೆ ಈ ಬಾರಿಯೂ ಒಂದು ವಾರ ಕಾಲ (ಜ.11ರಿಂದ 17ರವರೆಗೆ) ರಸ್ತೆ ಸುರಕ್ಷತಾ ಸಪ್ತಾಹ ನಡೆಯಲಿದೆ. ರಸ್ತೆ ಬಳಸುವ ಪ್ರತಿಯೊಬ್ಬರಿಗೂ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಿ, ಅಪಘಾತಗಳ ತಡೆಯುವಿಕೆ ಮತ್ತು ಅವುಗಳಿಂದ ಆಗುವ ಸಾವು ನೋವನ್ನು ತಗ್ಗಿಸುವುದೇ ಸಪ್ತಾಹದ ಮೂಲ ಉದ್ದೇಶವಾಗಿದೆ.

ಈ ವರ್ಷ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಆಯೋಜಿಸಿರುವ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಹೇಳಲಾದ ಘೋಷವಾಕ್ಯ ``Be a road safety Hero" ಎಂಬುದಾಗಿದೆ. ಈ ವಿಷಯವೇ ತುಂಬಾ ಅರ್ಥಗರ್ಭಿತವಾಗಿದೆ. ಯಮಧೂತ 'ರಸ್ತೆ ಅಪಘಾತ' ಪ್ರತಿವರ್ಷ 1.5 ಲಕ್ಷ ಮಂದಿಯನ್ನು ಬಲಿ ತೆಗೆದುಕೊಳ್ಳುತ್ತಿದೆ. ಈ ಪೈಕಿ 15 ರಿಂದ 24 ವಯೋಮಾನದವರ ಸಂಖ್ಯೆ ಶೇ.33 ಎಂಬುದು ಗಮನಾರ್ಹ ಸಂಗತಿ. ಇದರ ಜೊತೆಗೆ ಲಕ್ಷಾಂತರ ಮಂದಿ ಗಾಯಗೊಂಡು, ಶಾಶ್ವತ ಅಂಗವಿಕಲರಾಗುತ್ತಿದ್ದಾರೆ. ಈ ಪ್ರಮಾಣದ ರಸ್ತೆ ಅಪಘಾತಗಳು ಅದೆಷ್ಟೋ ಕುಟುಂಬಗಳು ಕಣ್ಣೀರಲ್ಲಿ ಕೈತೊಳೆಯುವಂತೆ ಮಾಡುವುದರ ಜೊತೆಗೆ ರಾಷ್ಟ್ರದ ಜಿಡಿಪಿ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿವೆ. ಇಂತಹ ಸನ್ನಿವೇಶದಲ್ಲಿ ಸಾಮಾಜಿಕ ಕಳಕಳಿಯಿಂದ ಪ್ರತಿಯೊಬ್ಬ ರಸ್ತೆ ಬಳಕೆದಾರ ರಸ್ತೆಯನ್ನು ಸುರಕ್ಷಿತವಾಗಿ ಬಳಸಿದರೆ ಮಾತ್ರ ಉಳಿಗಾಲ.









ನಾವೆಲ್ಲಾ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಅಪಘಾತಗಳಿಗೆ ಚಾಲಕನ ತಪ್ಪು, ವಾಹನದ ತಾಂತ್ರಿಕ ದೋಷದ ಜೊತೆಗೆ ಅಸಮರ್ಪಕ ರಸ್ತೆ ಕೂಡಾ ಕಾರಣ. ಶೇಕಡಾ 80ರಷ್ಟು ರಸ್ತೆ ಅಪಘಾತಗಳು ಚಾಲಕನ ತಪ್ಪಿನಿಂದ ಸಂಭವಿಸಿವೆ ಎಂಬುದನ್ನು ತನಿಖೆಯ ಅಂಕಿ ಅಂಶಗಳು ದೃಢಪಡಿಸಿವೆ. ರಕ್ಷಣಾತ್ಮಕ ಚಾಲನಾ ಶೈಲಿಯು ಚಾಲಕನ ತಪ್ಪಿನ ಮತ್ತು ವಾಹನ ತಾಂತ್ರಿಕ ದೋಷದಿಂದಾಗುವ ರಸ್ತೆ ಅಪಘಾತಗಳನ್ನು ತಡೆಯಬಲ್ಲದು. ರಕ್ಷಣಾತ್ಮಕ ಚಾಲನಾ ಶೈಲಿಯ ಪಾಲನೆ, ರಸ್ತೆ ಬಳಸುವ ಎಲ್ಲರನ್ನೂ ಸುರಕ್ಷತೆಯಿಂದ ಮನೆ ತಲುಪುವಂತೆ ಮಾಡುತ್ತದೆ. ಹಾಗಾಗಿ ರಸ್ತೆ ಬಳಸುವ ನಾವೆಲ್ಲರೂ ರಕ್ಷಣಾತ್ಮಕ ವಾಹನ ಚಾಲನೆಗೆ ಮಹತ್ವ ನೀಡುವುದು ಪ್ರಸ್ತುತ ಅತ್ಯಗತ್ಯವಾಗಿದೆ.

ಹಾಗಾಗಲು ನಾವೆಲ್ಲಾ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಅಪಘಾತಗಳಿಗೆ ಚಾಲಕನ ತಪ್ಪು, ವಾಹನದ ತಾಂತ್ರಿಕ ದೋಷದ ಜೊತೆಗೆ ಅಸಮರ್ಪಕ ರಸ್ತೆ ಕೂಡಾ ಕಾರಣ. ಶೇ.80ರಷ್ಟು ರಸ್ತೆ ಅಪಘಾತಗಳು ಚಾಲಕನ ತಪ್ಪಿನಿಂದ ಸಂಭವಿಸಿವೆ ಎಂಬುದನ್ನು ತನಿಖೆಯ ಅಂಕಿ ಅಂಶಗಳು ದೃಢಪಡಿಸಿವೆ. ರಕ್ಷಣಾತ್ಮಕ ಚಾಲನಾ ಶೈಲಿಯು ಚಾಲಕನ ತಪ್ಪಿನ ಮತ್ತು ವಾಹನ ತಾಂತ್ರಿಕ ದೋಷದಿಂದಾಗುವ ರಸ್ತೆ ಅಪಘಾತಗಳನ್ನು ತಡೆಯಬಲ್ಲದು. ರಕ್ಷಣಾತ್ಮಕ ಚಾಲನಾ ಶೈಲಿಯ ಪಾಲನೆ, ರಸ್ತೆ ಬಳಸುವ ಎಲ್ಲರನ್ನೂ ಸುರಕ್ಷತೆಯಿಂದ ಮನೆ ತಲುಪುವಂತೆ ಮಾಡುತ್ತದೆ. ಹಾಗಾಗಿ ರಸ್ತೆ ಬಳಸುವ ನಾವೆಲ್ಲರೂ ರಕ್ಷಣಾತ್ಮಕ ವಾಹನ ಚಾಲನೆಗೆ ಮಹತ್ವ ನೀಡುವುದು ಪ್ರಸ್ತುತ ಅತ್ಯಗತ್ಯವಾಗಿದೆ.

ರಕ್ಷಣಾತ್ಮಕ ಚಾಲನೆ

ರಕ್ಷಣಾತ್ಮಕ ಚಾಲನೆಗೆ ಮತ್ತೊಂದು ಅರ್ಥವೇ ರಸ್ತೆ ಬಳಕೆಯಲ್ಲಿ ಸ್ವಯಂ ಶಿಸ್ತಿನ ರಸ್ತೆ ನಿಯಮಗಳ ಪಾಲನೆ. ರಸ್ತೆ ನಿಯಮಗಳ ಅರಿತ ವಾಹನ ಚಾಲಕ ತನ್ನ ಸುರಕ್ಷತೆಯ ಜೊತೆಗೆ ಇತರ ಚಾಲಕರ ತಪ್ಪಿನ ಮನಃಸ್ಥಿತಿಯನ್ನು ಊಹಿಸಿ, ಚಾಲನೆ ಸಮಯದಲ್ಲಿ ಎದುರಾಗಬಹುದಾದ ಅನಿರೀಕ್ಷಿತ ಸನ್ನಿವೇಶವನ್ನು ನಿಭಾಯಿಸುವ ವಾಹನ ಚಾಲನಾ ಚಾಕಚಕ್ಯತೆಯನ್ನು ರಕ್ಷಣಾತ್ಮಕ ಚಾಲನೆ (Defensive Driving) ಎಂದು ಕರೆಯಲಾಗುವುದು. ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಪ್ರತಿಯೊಬ್ಬ ಚಾಲಕನು ರಸ್ತೆ ನಿಯಮಗಳ ಹಾಗೂ ರೋಡ್ ಟ್ರಾಫಿಕ್ ಸೈನ್‌ಗಳ ಕನಿಷ್ಠ ತಿಳುವಳಿಕೆ ಹೊಂದಿರಬೇಕು. ಎಷ್ಟೋ ಚಾಲಕರಿಗೆ ಏಕೆ? ಸಂಚಾರಿ ಪೊಲೀಸರಿಗೇ ಈ ಬಗ್ಗೆ ತಿಳುವಳಿಕೆಯ ಕೊರತೆ ಇದೆ ಎಂಬುದು ನನ್ನ ಅನುಭವದ ಅಭಿಪ್ರಾಯ. ರಸ್ತೆಯಲ್ಲಿ ಹಾಕಿರುವ ತ್ರಿಕೋನ ಆಕೃತಿಯ ಎಚ್ಚರಿಕೆ,ಕಡ್ಡಾಯವಾಗಿ ಪಾಲಿಸಲೇಬೇಕಾದ ವೃತ್ತಾಕಾರದ ಮತ್ತು ಮಾಹಿತಿ ನೀಡುವ ಆಯತಾಕಾರದ ಸಂಚಾರ ಸೂಚನಾ ಫಲಕಗಳ ಅರಿವನ್ನು ಚಾಲಕ ಹೊಂದಿರಲೇಬೇಕು. ಇದಲ್ಲದೇ ಅಪಘಾತವಾದಾಗ ಚಾಲಕನಾಗಿ ಗಾಯಾಳುವಿನ ಬಗ್ಗೆ ತನ್ನ ಕರ್ತವ್ಯವೇನು? ಅದರ ಪಾಲನೆ ಆಗದಿದ್ದರೆ ಕಾನೂನು ಪರಿಣಾಮವೇನು? ಎಂಬುದರ ಮಾಹಿತಿಯನ್ನು ತಿಳಿದರೆ ಸಾಕಷ್ಟು ಪ್ರಮಾಣದ ಮಾರಣಾಂತಿಕ ತೀವ್ರತೆಯನ್ನು ಕುಗ್ಗಿಸಬಹುದು. ರಸ್ತೆ ಬಳಸುವ ಇತರರ ತಪ್ಪೇನೇ ಇರಲಿ ಆದರೆ ನಾನು ಮಾತ್ರ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇನೆ ಎಂಬ ದೃಢ ನಿರ್ಧಾರವು ತನ್ನನ್ನೂ ಸೇರಿದಂತೆ ಅದೆಷ್ಟೋ ಸಾವು ನೋವುಗಳನ್ನು ದೂರಮಾಡುತ್ತದೆ. ಇದು ರಕ್ಷಣಾತ್ಮಕ ಚಾಲನೆಯಿಂದ ಮಾತ್ರ ಸಾಧ್ಯ.

ಚಾಲನೆಯಲ್ಲಿ ನಿಧಾನವೇ ಲೇಸು

'ಅತಿ ವೇಗ ತಿಥಿ ಬೇಗ' ಕಾರಣವಾಗುವುದರಿಂದ ನಿಗದಿತ ವೇಗದಲ್ಲಿಯೇ ವಾಹನ ಚಲಾಯಿಸುವುದು ಒಂದು ಸುರಕ್ಷತಾ ಕ್ರಮ. ವಾಹನವೇರುವ ಮುನ್ನ ತಲುಪಬೇಕಾದ ನಿರ್ದಿಷ್ಟ ಸ್ಥಳದ ಮಾರ್ಗ, ಕ್ರಮಿಸಬೇಕಾದ ಕಿಲೋಮೀಟರ್, ಅವಧಿ, ಆ ಮಾರ್ಗದಲ್ಲಿ ನಿಗದಿ ಪಡಿಸಿದ ವೇಗದ ಮಿತಿ, ರಸ್ತೆಯ ಸ್ಥಿತಿ ಮುಂತಾದ ಪೂರ್ವ ಮಾಹಿತಿಯು ಚಾಲಕನ ಮನೋಬಲವನ್ನು ದ್ವಿಗುಣ ಮಾಡುತ್ತದೆ. ವಾಹನ ಚಾಲಕನ ಇಂತಹ ನಡೆಯು ಅತಿ ವೇಗ ಮತ್ತು ಅವಸರದಿಂದ ಆಗುವ ಅಪಘಾತವನ್ನು ಖಂಡಿತವಾಗಿಯೂ ತಪ್ಪಿಸುತ್ತದೆ.

ಬೇಜವಾಬ್ದಾರಿಯ ಚಾಲನೆ

ವಾಹನವೇರಿದ ನಂತರ ನಮ್ಮ ಬದುಕು ಮತ್ತು ಸಾವಿನ ನಡುವಿನ ಪ್ರಯಾಣ ಆರಂಭವಾಗುತ್ತದೆ. ತುಸು ಮೈಮರೆತರೆ, ಎಚ್ಚರ ತಪ್ಪಿದರೆ ಸಾವು ನೋವು ಗ್ಯಾರಂಟಿ. ವಾಹನ ಚಾಲನೆಯಲ್ಲಿ ನಾವು ಬಳಸುವ ವಸ್ತುಗಳು ಕೂಡ ನಮ್ಮ ದಿನವನ್ನು ನಿರ್ಣಯಿಸುತ್ತವೆ. ಉದಾಹರಣೆಗೆ ಮೊಬೈಲ್ ಫೋನ್. ಇತ್ತೀಚೆಗೆ ವಾಹನ ಚಾಲನೆಯಲ್ಲಿ ಮೊಬೈಲ್ ಯಮನ ಸಹವರ್ತಿಯಾಗಿದೆ. ಕರೆ ಸ್ವೀಕರಿಸುವುದು, ಕರೆ ಮಾಡುವುದು, ಸಂದೇಶ ರವಾನಿಸುವುದು, ಇಂಟರ್‌ನೆಟ್ ನೋಡುತ್ತಿರುವುದು ಇವೆಲ್ಲ ವಾಹನ ಚಾಲನೆಯಲ್ಲಿ ಅಪಾಯಕ್ಕೆ ಆಹ್ವಾನ. ಏಕಕಾಲದಲ್ಲಿ ಒಂದೇ ಸ್ಥಳವನ್ನು ಎರಡು ವಸ್ತುಗಳು ಆಕ್ರಮಿಸಲಾರವು ಎಂಬ ತತ್ವದಂತೆ ಚಾಲನೆ ಮತ್ತು ಸೆಲ್ ಫೋನ್ ಬಳಕೆಯನ್ನು ಏಕಕಾಲದಲ್ಲಿ ನಿರ್ವಹಿಸುವುದು ಅಪಘಾತಕ್ಕೆ ಆಹ್ವಾನ ಕೊಟ್ಟಂತೆಯೇ ಅಲ್ಲವೇ? ಇದು ನಿರ್ಲಕ್ಷ್ಯದ ಮತ್ತು ಬೇಜವಾಬ್ದಾರಿಯ ವಾಹನ ಸವಾರಿಯು ಹೌದು! ಹಾಗಾಗಿ ರಸ್ತೆ ಸುರಕ್ಷತಾ ಕ್ರಮವಾಗಿ ಸೆಲ್ ಫೋನ್ ಬಳಕೆ ಸೂಕ್ತವಲ್ಲ. ಈ ರೀತಿಯ ನಮ್ಮ ತಪ್ಪಿನಿಂದ ನಮ್ಮ ಪ್ರಾಣ ಮಾತ್ರವಲ್ಲದೇ ರಸ್ತೆಯಲ್ಲಿರುವ ಅಮಾಯಕರ ಪ್ರಾಣಕ್ಕೂ ಸಂಚಕಾರವಿದೆ.

ಡೋಂಟ್ ಡ್ರಿಂಕ್ ಆಂಡ್ ಡ್ರೈವ್

ಹೆಚ್ಚಿನ ರಸ್ತೆ ಅಪಘಾತಗಳಿಗೆ ಮಿತಿಗಿಂತ ಹೆಚ್ಚಿನ ಪ್ರಮಾಣದ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದೇ ಪ್ರಮುಖ ಕಾರಣ. ಕುಡಿದು ಸ್ಟೇರಿಂಗ್ ಮುಟ್ಟುವುದಿಲ್ಲವೆಂದು ದೃಢ ಸಂಕಲ್ಪ ಮಾಡಿ ವಾಹನ ಚಾಲನೆ ಮಾಡಿದರೆ ಚಾಲಕ ತನ್ನ ಸುರಕ್ಷತೆ ಜೊತೆಗೆ, ರಸ್ತೆ ಬಳಸುವ ಇತರರ ಜೀವ ಹಾನಿಯನ್ನು ತಡೆಯಬಹುದು.ಮೋಟಾರು ವಾಹನ ನಿಯಮ ಉಲ್ಲಂಘನೆಗಳಲ್ಲಿ ಡ್ರಿಂಕ್ ಅಂಡ್ ಡ್ರೈವ್ ಅತೀ ದೊಡ್ಡ ನಿಯಮ ಉಲ್ಲಂಘನೆಯಾಗಿದೆ. ಹೀಗಾಗಿ ನ್ಯಾಯಾಲಯದಲ್ಲಿ ಮೊದಲ ಬಾರಿ ಡ್ರಂಕ್ ಅಂಡ್ ಡ್ರೈವ್‌ಗೆ 10,000 ರೂಪಾಯಿ ದಂಡ, ಎರಡನೇ ಬಾರಿಗೆ 20,000 ರೂಪಾಯಿ ದಂಡ ವಿಧಿಸಲಾಗುತ್ತದೆ. ಮೂರನೇ ಬಾರಿಗೆ ದುಬಾರಿ ದಂಡದ ಜೊತೆಗೆ ಲೈಸೆನ್ಸ್ ಕೂಡ ರದ್ದಾಗಲಿದೆ. ಇವುಗಳಲ್ಲದೆ ಜೈಲು ಶಿಕ್ಷೆ ಕಠಿಣ ನಿಯಮ ಜಾರಿಯಲ್ಲಿದೆ. ಇದೀಗ ಸುಪ್ರೀಂ ಕೋರ್ಟ್ ಇದೇ ಡ್ರಿಂಕ್ ಅಂಡ್ ಡ್ರೈವ್ (Drink And Drive) ವಿಚಾರದಲ್ಲಿ ಯಾವುದೇ ವಿನಾಯಿತಿ ಇಲ್ಲ. ಅತೀ ದೊಡ್ಡ ಅಪರಾಧಕ್ಕೆ ಕಠಿಣ ಶಿಕ್ಷೆ ಅನುಭವಿಸಲೇಬೇಕು ಎಂದಿದೆ.ಹೀಗಾಗಿ ಡ್ರಿಂಕ್ ಅಂಡ್ ಡ್ರೈವ್ ಮಾಡದ ಕ್ರಮ ರಸ್ತೆ ಸುರಕ್ಷತೆಯ ಮತ್ತೊಂದು ಭಾಗ.

ಮೂರನೇ ಕಣ್ಣು

ರಿಯರ್ ವ್ಯೂ ಮಿರರ್ ಕಡೆಗೊಮ್ಮೆ ನೋಡಿ. ಹೆಚ್ಚಿನವರ ವಾಹನ ರಿಯರ್ ವ್ಯೂ ಮಿರರ್‌ನಲ್ಲಿ ಅವರ ವಾಹನವೇ ಕಾಣುತ್ತಿರುತ್ತದೆ. ಹಿಂಬದಿಯಲ್ಲಿ ಬರುವ ವಾಹನ ಕಾಣದಿದ್ದರೆ ಅಪಘಾತವಾಗುವ ಸಂಭವ ಹೆಚ್ಚು. ಸ್ಪಷ್ಟವಾಗಿ ಕಾಣುವಂತೆ ರಿಯರ್ ವ್ಯೂ ಮಿರರ್ ಫಿಕ್ಸ್ ಮಾಡೋದು ಅತ್ಯಂತ ಅಗತ್ಯ. ವಾಹನ ಚಾಲನೆಗೆ ಮುನ್ನಾ ಸರಿಯಾದ ಕೋನದಲ್ಲಿ ರಿಯರ್ ವ್ಯೂ ಮಿರರ್‌ನ್ನು ಅಡ್ಜಸ್ಟ್ ಮಾಡಿಕೊಂಡು ಶುಚಿಯಾಗಿ ಇಟ್ಟುಕೊಂಡರೆ ಬಲಕ್ಕೆ ತಿರುಗುವಾಗ ಮತ್ತು ಲೇನ್ ಬದಲಿಸುವಾಗ ಹಿಂಬದಿಯಲ್ಲಿ ಬರುವ ವಾಹನದ ಬಗ್ಗೆ ರಿಯರ್ ವ್ಯೂ ಮಿರರ್ ಚಾಲಕನಿಗೆ ಸುರಕ್ಷತೆಯನ್ನು ಖಾತರಿ ಪಡಿಸುತ್ತದೆ. ಪ್ರತಿ ವಾಹನಕ್ಕೆ ಅಳವಡಿಸಿರುವ ರಿಯರ್ ವ್ಯೂ ಮಿರರ್ ಚಾಲಕನ ಮೂರನೇ ಕಣ್ಣಾಗಿ ಕೆಲಸ ಮಾಡುತ್ತದೆ. ಅದೇ ರೀತಿ ಮಾರ್ಗದ ಪಥ ಮತ್ತು ಎಡಕ್ಕೆ ಬಲಕ್ಕೆ ತಿರುಗುವಾಗ ಕಡ್ಡಾಯವಾಗಿ ವಾಹನದ ಇಂಡಿಕೇಟರ್ ಬಳಕೆ ಅವಶ್ಯಕ.

ಪ್ರಯಾಣದಲ್ಲಿ ಸೀಟು ಬೆಲ್ಟ್

ಕಾರು ಪ್ರಯಾಣದ ಸಮಯದಲ್ಲಿ ಪ್ರಯಾಣಿಕರು ಕೇವಲ ಮುಂಬದಿ ಪ್ರಯಾಣಿಕರು ಮಾತ್ರ ಸೀಟು ಬೆಲ್ಟ್ ಹಾಕಿಕೊಂಡರೆ ಸಾಕು ಎಂಬ ಮನೋಭಾವ ಹೊಂದಿರುತ್ತಾರೆ, ಅದು ತಪ್ಪು. ಶೇ.23ರಷ್ಟು ಮಂದಿಗೆ ಸೀಟ್ ಬೆಲ್ಟ್ ಸುರಕ್ಷತೆಯ ಕ್ರಮ ಎಂಬ ಪರಿಜ್ಞಾನವೇ ಇರುವುದಿಲ್ಲ.ಸೀಟ್ ಬೆಲ್ಟ್ ಹಾಕುವುದರಿಂದ ಬಟ್ಟೆಯ ಇಸ್ತ್ರಿ ಹಾಳಾಗುತ್ತದೆ ಎಂದು ಭಾವಿಸುವವನನ್ನು ಅಪಘಾತವು ಸಾವಿನೆಡೆಗೆ ಸಾಗಿಸಬಹುದು. ಹಿಂಬದಿ ಸೀಟಿನಲ್ಲಿ ಪ್ರಯಾಣ ಮಾಡುತ್ತಿದ್ದ ಉದ್ಯಮಿ ಮಿಸ್ತ್ರಿ ಸಾವು ಹಿಂಬದಿ ಪ್ರಯಾಣಿಕರ ಸೀಟ್ ಬೆಲ್ಟ್ ಧಾರಣೆಯ ಅಗತ್ಯತೆಯನ್ನು ಅನಾವರಣ ಮಾಡಿತು. ಕಾರಿನಲ್ಲಿ ಟ್ರಾವೆಲ್ ಮಾಡುವ ಪ್ರತಿಯೊಬ್ಬರೂ ಸೀಟ್ ಬೆಲ್ಟ್ ಹಾಕುವುದರಿಂದ ರಸ್ತೆ ಅಪಘಾತ ಆದಂತಹ ಸಂದರ್ಭದಲ್ಲಿ ಕಾರಿನಲ್ಲಿ ಅಳವಡಿಸಿರುವ ತೆರೆದುಕೊಳ್ಳುವ ಏರ್ ಬ್ಯಾಗ್‌ಗಳು ಸಂಭವಿಸಬಹುದಾದ ಶೇ.80ರಷ್ಟು ಮಾರಣಾಂತಿಕ ಅಪಘಾತದ ಪ್ರಭಾವವನ್ನು ಕಡಿಮೆ ಮಾಡುತ್ತವೆ. ಈ ಕಾರಣದಿಂದಲೇ ಕಾರಿನಲ್ಲಿ ಪ್ರಯಾಣಿಸುವ ಪ್ರತಿಯೊಬ್ಬರೂ ಸೀಟ್ ಬೆಲ್ಟ್ ಧಾರಣೆ ಸುರಕ್ಷತಾ ಕ್ರಮ.

ಹೆಲ್ಮೆಟ್ ಎಂಬ ಲಸಿಕೆ

ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು ಎನ್ನುವುದು ಸಂಚಾರ ನಿಯಮ ಎನ್ನುವುದಕ್ಕಿಂತ ಸಾವು ಬದುಕಿನ ನಡುವಿನ ಆಯ್ಕೆಯಾಗಿದೆ. ಎಲ್ಲಾ ಅಧ್ಯಯನಗಳು ಹೇಳುವ ಪ್ರಕಾರ ಕಾರು ಅಪಘಾತಕ್ಕಿಂತ ಬೈಕ್ ಅವಘಡದಲ್ಲಿ ಸಾಯುವವರ ಪ್ರಮಾಣ ಶೇ.26 ರಷ್ಟು ಜಾಸ್ತಿ. ಇವರಲ್ಲಿ ಹೆಲ್ಮೆಟ್ ಧರಿಸದವರೇ ಜಾಸ್ತಿ ಸತ್ತಿದ್ದಾರೆ. ಕಳೆದ 10 ವರ್ಷದಲ್ಲಿ ಹೆಲ್ಮೆಟ್ ಧರಿಸದ ಕಾರಣಕ್ಕೆ ಜಾಗತಿಕವಾಗಿ ಸಂಭವಿಸಿರುವ ಸಾವಿನ ಪ್ರಮಾಣ 35 ಲಕ್ಷ.ಇವರಲ್ಲಿ ಭಾರತೀಯರೇ ಸಿಂಹಪಾಲು. ಹೇರ್ ಸ್ಟೈಲ್ ಹಾಳಾಗುತ್ತದೆ ಎನ್ನುವ ಕಾರಣಕ್ಕೆ ಹಲವರು ಹೆಲ್ಮೆಟ್ ಧರಿಸುವುದಿಲ್ಲ. ಇವರೆಲ್ಲಾ ಕೂದಲಿಗೆ ಕೊಡುವ ಮಹತ್ವವನ್ನು ಜೀವಕ್ಕೆ ಕೊಡುವುದಿಲ್ಲ. ಇದು ಅತ್ಯಂತ ಅಪಾಯಕಾರಿ ಮನಃಸ್ಥಿತಿ ಎನ್ನುತ್ತಾರೆ ತಜ್ಞರು. ಹೆಲ್ಮೆಟ್ ಹಾಕದ ಪ್ರಯಾಣ ಅಪಾಯಕ್ಕೆ ಆಹ್ವಾನ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು. ಇದು ಅತ್ಯಂತ ಸುರಕ್ಷತಾ ಕ್ರಮ.

ಸಂಚಾರ ಸೂಚನಾ ದೀಪಗಳು ಮತ್ತು ಚಿಹ್ನೆಗಳ ಪಾಲನೆ

ಪ್ರತಿಯೊಬ್ಬ ಚಾಲಕ ವಾಹನ ಚಾಲನೆಯಲ್ಲಿ ವೃತ್ತದಲ್ಲಿ, ಜಂಕ್ಷನ್ ಮುಂತಾದ ಸ್ಥಳಗಳಲ್ಲಿ ಅಳವಡಿಸಿರುವ ಸಂಚಾರ ಸೂಚನಾ ದೀಪಗಳ ಮತ್ತು ಚಿಹ್ನೆಗಳನ್ನು ಗಮನಿಸಬೇಕು, ಗೌರವಿಸಬೇಕು. ಇದರಿಂದ ವಿಶೇಷವಾಗಿ ನಗರಗಳಲ್ಲಿ ಸಾಕಷ್ಟು ಪ್ರಮಾಣದ ಅಪಘಾತಗಳನ್ನು ತಪ್ಪಿಸಬಹುದು. ಇತರ ರಸ್ತೆ ಬಳಕೆದಾರರ ಕ್ರಿಯೆಯ ಮನಃಸ್ಥಿತಿಯನ್ನರಿತು ಅವನು ತಪ್ಪು ಮಾಡಬಹುದೆಂಬ ನಿರೀಕ್ಷೆ ಮಾಡಿ ಅದನ್ನು ನಿಭಾಯಿಸುವ ಕೌಶಲ್ಯವನ್ನು ಕರಗತ ಮಾಡಿಕೊಂಡರೆ ಯಾವುದೇ ಅವಘಡ ಸಂಭವವನ್ನು ತಪ್ಪಿಸಬಹುದು.

ಏರುಗತಿಯ ವಾಹನ ಮತ್ತು ಜನಸಂಖ್ಯೆಯ ಭರಾಟೆಯಲ್ಲಿ, ರಸ್ತೆ ಸುರಕ್ಷತೆಯನ್ನು ಯಾವುದೇ ಸರ್ಕಾರಿ ಸಂಸ್ಥೆಗಳಿಂದ ರಸ್ತೆ ಬಳಸುವ ನಾವು ನಿರೀಕ್ಷಿಸುವ ಬದಲು ನಮ್ಮ ಸುರಕ್ಷತೆಯನ್ನು ನಾವೇ ಗಟ್ಟಿಗೊಳಿಸಿಕೊಳ್ಳುವುದು ಸಮಯೋಚಿತ. ಅದರ ಸಾಧ್ಯತೆ ಕೇವಲ ಚಾಲಕನ ರಕ್ಷಣಾತ್ಮಕ ಚಾಲನೆಯಿಂದ ಮಾತ್ರ ಸಾಕಾರಗೊಳ್ಳುತ್ತದೆ. ಹಾಗಾದಾಗ ಮಾತ್ರ ನಮ್ಮ ರಸ್ತೆಗಳು ಬಳಕೆದಾರರಿಗೆ ಸುರಕ್ಷತೆಯನ್ನು ನೀಡಬಲ್ಲವು.

ಅಧಿಕಾರದ ಆಸೆಯಿಂದ ಜೆಡಿಎಸ್ ವಿರುದ್ಧ ಲಕ್ಷ್ಮಣ್ ಟೀಕೆ

ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಕಿಡಿ

ಮೈಸೂರು, ಜ.11(ಎಂಟಿವೈ)– ಯಾವುದಾದರೂ ಅಧಿಕಾರ ಪಡೆಯುವ ಉದ್ದೇಶದಿಂದ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಜೆಡಿಎಸ್ ವಿರುದ್ಧ ಟೀಕಿಸುತ್ತಿದ್ದಾರೆ ಎಂದು ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಕಿಡಿಕಾರಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಜೆಡಿಎಸ್–ಬಿಜೆಪಿಗೆ ಮಾನ ಮರ್ಯಾದೆ ಇದೆಯೇ ಎಂದು ಟೀಕಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವ ಕಾರಣ ಯಾವುದಾದರೊಂದು ಅಧಿಕಾರ ಹಿಡಿಯಲೆಂದು ಈ ರೀತಿ ಇವರು ಮಾತನಾಡುತ್ತಿದ್ದಾರೆ. ಈ ಚಾಳಿ ನಿಲ್ಲಿಸದಿದ್ದರೆ ಇವರ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ. ಲಕ್ಷ್ಮಣ್ ಅವರಿಗಿಂತ ಹೆಚ್ಚಿನ ಮೇಧಾವಿಗಳು ರಾಜಕಾರಣದಲ್ಲಿದ್ದಾರೆ. ಆದರೆ ಇವರ ರೀತಿ ಯಾರೂ ಏಕವಚನದ ಪದ ಪ್ರಯೋಗ ಮಾಡುವುದಿಲ್ಲ. ಅಂತಹವರಿಂದ ಲಕ್ಷ್ಮಣ್ ಬುದ್ಧಿ ಕಲಿಯಬೇಕು ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಮಾತನಾಡಿದರು.

ರೈತರಿಗೆ, ನೀರಾವರಿಗಾಗಿ ಜೆಡಿಎಸ್ ಏನು ಮಾಡಿದೆ ಎಂದು ಪ್ರಶ್ನಿಸಿದ್ದಾರೆ. ಹೀಗಾಗಿ ಮೊದಲು ಇವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಸಾಧನೆ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರ ಸ್ವಾಮಿ ಅವರ ಸಾಲ ಮನ್ನಾ ಬಗ್ಗೆ ತಿಳಿದುಕೊಳ್ಳಲಿ ಎಂದು ಸಲಹೆ ನೀಡಿದರು.

ಜೆಡಿಎಸ್–ಬಿಜೆಪಿ ಮೈತ್ರಿ ವಿಷಯದಲ್ಲಿಯೂ ಲಕ್ಷ್ಮಣ್ ಗಾಳಿ ಸುದ್ದಿ ಹಬ್ಬಿಸುತ್ತಿದ್ದಾರೆ. ಒಂದು ವೇಳೆ ಲೋಕಸಭೆ ಚುನಾವಣೆಯಲ್ಲಿ ಮೈತ್ರಿಯಾದರೆ ಹಾಗೂ ಜೆಡಿಎಸ್‌ಗೆ ಬಿಜೆಪಿ ಮೈಸೂರು– ಕೊಡಗು ಲೋಕಸಭಾ ಕ್ಷೇತ್ರ ಬಿಟ್ಟುಕೊಟ್ಟರೆ ಪಕ್ಷದ ಅಭ್ಯರ್ಥಿ ಪರ ದುಡಿಯುತ್ತೇವೆ. ಬಿಜೆಪಿ ಕ್ಷೇತ್ರ ಉಳಿಸಿಕೊಂಡರೆ ಮೈತ್ರಿ ಅಭ್ಯರ್ಥಿ ಪರ ಸಂತೋಷದಿಂದ ಕೆಲಸ ಮಾಡುತ್ತೇವೆ ಎಂದರು. ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮಾತನಾಡಿ, ಹೊಂದಾಣಿಕೆ ಬಗ್ಗೆ ಇನ್ನು ಸರಿಯಾದ ಮಾಹಿತಿ ಸ್ಥಳೀಯ ನಾಯಕರಿಗೆ ಸಿಕ್ಕಿಲ್ಲ. ಟಿಕೆಟ್ ಯಾರಿಗೆ ಎಂಬ ಮಾಹಿತಿ ಇನ್ನು ವರಿಷ್ಠರು ನಮಗೆ ತಿಳಿಸಿಲ್ಲ. ಆ ಕಾರಣದಿಂದ ನೆನ್ನೆ ನಡೆದ ಸಭೆಯಲ್ಲಿ ಗೊಂದಲ ಉಂಟಾಗಿದೆಯೇ ಹೊರತು ಹೊಂದಾಣಿಕೆಗೆ ಸಂಬಂಧಿಸಿದಂತೆ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಆರ್.ಲಿಂಗಪ್ಪ, ಕೆ.ಟಿ. ಚಲುವೇಗೌಡ ಇನ್ನಿತರರು ಇದ್ದರು.

ಜಗವ ಸುತ್ತುವ ಮಾಯೆ ಕೃತಿಗೆ ಕಸಾಪ ದತ್ತಿ ಪ್ರಶಸ್ತಿ

ಮೈಸೂರು, ಜ.11– ಮೈಸೂರಿನ ಲೇಖಕಿ ಸುಚಿತ್ರಾ ಹೆಗಡೆ ಅವರ 'ಜಗವ ಸುತ್ತುವ ಮಾಯೆ' ಕೃತಿ, ಕನ್ನಡ ಸಾಹಿತ್ಯ ಪರಿಷತ್ತಿನ 2022ನೇ ಸಾಲಿನ ರತ್ನಾಕರ ವರ್ಣಿ ಮುದ್ದಣ ಅನಾಮಿಕ ದತ್ತಿ ಪ್ರಶಸ್ತಿಗೆ ಭಾಜನವಾಗಿದೆ.



ಸುಚಿತ್ರಾ ಹೆಗಡೆ

ಪ್ರತಿಷ್ಠಿತ 'ಅಮ್ಮ' ಪ್ರಶಸ್ತಿ, ಭೂಮಿ ಸಾಹಿತ್ಯ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ಈ ಕೃತಿಗೆ ಲಭಿಸಿರುವುದು ಗಮನಾರ್ಹ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನವರಾದ ಸುಚಿತ್ರಾ ಹೆಗಡೆಯವರು ಮೈಸೂರಿನಲ್ಲಿ ನೆಲೆಸಿದ್ದಾರೆ. ಇವರು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದು, ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಶೌಚಾಲಯ, ಹೋಟೆಲ್, ಪಾದಚಾರಿ ಮೇಲ್ಸೇತುವೆ ನಿರ್ಮಾಣ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ 36 ಕೋಟಿ ಯೋಜನೆ



ಮೈಸೂರು, ಜ.11(ಬಿಎಲ್‌ಯು)- ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ 36.5 ಕೋಟಿ ರೂಪಾಯಿ ವೆಚ್ಚದಲ್ಲಿ ಶೌಚಾಲಯ, ಹೋಟೆಲ್, ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡುತ್ತಿದೆ. ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎರಡು ಕಂಪನಿಗಳಿಗೆ ಇದರ ಕಾರ್ಯ ನಿರ್ವಹಣೆ ವಹಿಸಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯ 118 ಕಿಲೋಮೀಟರ್‌ನಲ್ಲಿ ಎಲ್ಲೂ ಶೌಚಾಲಂಯ, ಹೋಟೆಲ್ ಸೇರಿದಂತೆ ಯಾವುದೇ ಸೌಲಭ್ಯವಿಲ್ಲ. ಒಂದು ಬಾರಿ ಎಕ್ಸ್‌ಪ್ರೆಸ್ ಹೈವೆ ಪ್ರವೇಶಿಸಿದರೆ ಎರಡು ಬದಿಯಲ್ಲಿ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ. ಇಂತಹ ಹೆದ್ದಾರಿಗಳಲ್ಲಿ ಶೌಚಾಲಯ, ಹೋಟೆಲ್ ಸೇರಿದಂತೆ ಹಲವು ಸೌಲಭ್ಯ ಒದಗಿಸಬೇಕೆಂಬ ನಿಯಮವಿದೆ. ಆದರೆ ಎಕ್ಸ್‌ಪ್ರೆಸ್ ಹೈವೆ ಉದ್ಘಾಟನೆಯಾಗಿ ಹಲವು ತಿಂಗಳು ಕಳೆದರೂ ಸೌಲಭ್ಯಗಳು ದೊರೆತಿರಲಿಲ್ಲ. ಯಾವುದೇ ಸೌಲಭ್ಯ ಕಲ್ಪಿಸದೆ ಹೆದ್ದಾರಿ ನಿರ್ಮಾಣ ಮಾಡಿದ ಕೇಂದ್ರ ಸರ್ಕಾರದ ವಿರುದ್ಧ ವ್ಯಾಪಕ ಆಕ್ರೋಶ

ಎಕ್ಸ್‌ಪ್ರೆಸ್ ಹೈವೆಯ 118 ಕಿಲೋಮೀಟರ್‌ನಲ್ಲಿ 4 ಶೌಚಾಲಂಯ, ಹೋಟೆಲ್, ಕುಡಿಯುವ ನೀರು ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಲಾಗುತ್ತಿದೆ. ಇನ್ನು ಎಕ್ಸ್‌ಪ್ರೆಸ್ ಹೈವೆ ನಿರ್ಮಾಣವಾದ ಮೇಲೆ ಎರಡು ಬದಿಯ ಅಕ್ಕಪಕ್ಕದ ಹಳ್ಳಿಗಳ ಸಂಪರ್ಕವೇ ಇಲ್ಲದಂತಾಗಿದೆ. ಇದರಿಂದ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗಲು ಹಳ್ಳಿ ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಹಿನ್ನೆಲೆಯಲ್ಲಿ ಎಕ್ಸ್‌ಪ್ರೆಸ್ ಹೈವೆಯಲ್ಲಿ 24 ಪಾದಚಾರಿ ಮೇಲ್ಸೇತುವೆ ಕೂಡ ನಿರ್ಮಾಣ ಮಾಡಲಾಗುತ್ತಿದೆ.

ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈಗ ಶೌಚಾಲಯ, ಹೋಟೆಲ್ ಹಾಗೂ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ 36.5 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದು, ಎರಡು ಕಂಪನಿಗಳು ಇದರ ನಿರ್ಮಾಣ ಜವಾಬ್ದಾರಿ ವಹಿಸಿವೆ.

ದೆಹಲಿ ಬಿಜೆಪಿ ವರಿಷ್ಠರ ಸಲಹೆಯಂತೆ ಗಣಿಧಣಿ ಜನಾರ್ದನ ರೆಡ್ಡಿ ಜೊತೆ ಮಾಜಿ ಸಿಎಂ ಕುಮಾರಸ್ವಾಮಿ ಮಾತುಕತೆ

- ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಪೆಟ್ಟು ಕೊಟ್ಟಿದ್ದ ರೆಡ್ಡಿ; ಕಾಂಗ್ರೆಸ್ ಗೆಲುವಿಗೆ ಪರೋಕ್ಷವಾಗಿ ಕಾರಣರಾಗಿದ್ದರು
- ಲೋಕಸಭಾ ಚುನಾವಣೆಯಲ್ಲಿ ಇದು ಪುನರಾವರ್ತನೆ ಆಗದಂತೆ ತಡೆಯುವ ಪ್ರಯತ್ನ
- ಕುಮಾರಸ್ವಾಮಿ ಸಲಹೆಗೆ ರೆಡ್ಡಿ ಸಕಾರಾತ್ಮಕ ಸ್ಪಂದನೆ



ಬೆಂಗಳೂರು, ಜ.11(ಕೆಎಂಶಿ)- ಲೋಕಸಭಾ ಚುನಾವಣಾ ಸಂದರ್ಭದಲ್ಲೇ ಬದ್ಧವೈರಿಗಳಾಗಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹಾಗೂ ಗಣಿ ಧಣಿ ಜನಾರ್ದನ ರೆಡ್ಡಿ ಕೈಜೋಡಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಬಂಡಾಯ ಎದ್ದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಸ್ಥಾಪಿಸಿ ಹೈದರಾಬಾದ್-ಕರ್ನಾಟಕದಲ್ಲಿ 50ಕ್ಕೂ ಹೆಚ್ಚು ಕ್ಷೇತ್ರದಲ್ಲಿ ಕಣಕ್ಕಿಳಿದು ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಲು ಜನಾರ್ದನ ರೆಡ್ಡಿ ಅವಕಾಶ ಮಾಡಿಕೊಟ್ಟರು. ಗಂಗಾವತಿ ಕ್ಷೇತ್ರದಿಂದ ಅವರು ವಿಧಾನಸಭೆ ಪ್ರವೇಶಿಸಿದರೆ, ಪಕ್ಷದ ಉಳಿದೆಲ್ಲಾ ಅಭ್ಯರ್ಥಿಗಳು ಪರಾಭವಗೊಂಡು ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ಕಾರಣರಾದರು.

ಲೋಕಸಭಾ ಚುನಾವಣೆಯಲ್ಲೂ ಆರು ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ರೆಡ್ಡಿ ಚಿಂತನೆ ನಡೆಸಿದ ಬೆನ್ನಲ್ಲೇ ದೆಹಲಿ ಬಿಜೆಪಿ ವರಿಷ್ಠರು ಎಚ್ಚೆತ್ತು, ಕುಮಾರಸ್ವಾಮಿ ಮಧ್ಯೆ ಪ್ರವೇಶಿಸುವಂತೆ ಸಲಹೆ ಮಾಡಿದರು.

ದೆಹಲಿಯ ಯಾವ ಬಿಜೆಪಿ ನಾಯಕರು ಕುಮಾರಸ್ವಾಮಿ ಅವರಿಗೆ ಸಮಸ್ಯೆಗಳನ್ನು ಪರಿಹರಿಸಲು ಸೂಚಿಸಿದರೋ ತಿಳಿಯದು, ಆದರೆ, ಮಿತ್ರ ಪಕ್ಷದ ಮುಖಂಡರ ಸಲಹೆಯಂತೆ, ಕಮಲದಿಂದ ದೂರ ಉಳಿದು ಬಂಡಾಯ ಏಳಲು ಮುಂದಾಗಿದ್ದವರ ಜೊತೆ ಮಾತುಕತೆ ಮೂಲಕ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿ

"ಲೋಕಸಭಾ ಚುನಾವಣೆಗೆ ನೀವು ಕಣಕ್ಕಿಳಿಯುವುದರಿಂದ ಬಿಜೆಪಿ ಮತಗಳು ವಿಭಜನೆಯಾಗಿ ಕಾಂಗ್ರೆಸ್‌ಗೆ ಲಾಭವಾಗಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೆಂಬಲಿಸಿ. ನಿಮ್ಮ ಸಮಸ್ಯೆಗಳು ಬಗೆಹರಿಯಲಿವೆ. ನಿಮಗೆ ಹೂಕಾಸಿನ ತೊಂದರೆಯಿಲ್ಲ. ಐದಾರು ಕ್ಷೇತ್ರಗಳಲ್ಲಿ ಕಣಕ್ಕಿಳಿಯುವುದರಿಂದ ಬಿಜೆಪಿ ಅಭ್ಯರ್ಥಿಗಳು ಸಂಕಷ್ಟಕ್ಕೆ ಸಿಲುಕಲಿದ್ದಾರೆ, ನಿಮ್ಮ ನಿಲುವಿನಿಂದ ಹಿಂದೆ ಸರಿಯಿರಿ. ನಾನು ನಿಮ್ಮ ಜೊತೆ ಇರುತ್ತೇನೆ. ಬಿಜೆಪಿ ಸೇರಿದಂತೆ ಇತರ ವಿಷಯಗಳಲ್ಲಿ ನಿಮಗಾಗಿರುವ ಸಮಸ್ಯೆಗಳನ್ನು, ಬಗೆಹರಿಸಲು ದೊಡ್ಡವರ ಬಳಿ ಮಾತನಾಡುತ್ತೇನೆ.
-ಹೆಚ್.ಡಿ.ಕುಮಾರಸ್ವಾಮಿ

ದ್ದಾರೆ. ಕುಮಾರಸ್ವಾಮಿ ಅವರ ಚಹಾ ಆಹ್ವಾನ ಸ್ವೀಕರಿಸಿ ಕಳೆದ ಮೂರು ದಿನಗಳ ಹಿಂದೆ ಬಿಡದಿ ತೋಟಕ್ಕೆ ಆಗಮಿಸಿ, ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಸುದೀರ್ಘವಾಗಿ ಮಾತನಾಡಿದ್ದಾರೆ.

ಸುಮಾರು 3 ಗಂಟೆಗೂ ಹೆಚ್ಚು ಕಾಲ ಉಭಯ ನಾಯಕರು ಚರ್ಚೆ ನಡೆಸಿದ್ದು, ರೆಡ್ಡಿ ಚುನಾವಣಾ ವೇಳೆಗೆ ಹಿಂದೆ ಸರಿಯುವ ಲಕ್ಷಣಗಳು ಗೋಚರಿಸುತ್ತಿವೆ. ಈ ಬೆಳವಣಿಗೆ ನಂತರ, ಬಳ್ಳಾರಿ, ಕೊಪ್ಪಳ ಮತ್ತು ಬೀದರ್ ಜಿಲ್ಲೆಯ ಕೆಲವು ಬಿಜೆಪಿ ಮುಖಂಡರು ರೆಡ್ಡಿ ಅವರನ್ನು ಭೇಟಿ ಮಾಡಿ ಮಾತನಾಡಿದ್ದಾರೆ.

ಯಡಿಯೂರಪ್ಪ ಮತ್ತು ಅವರ ಪುತ್ರನ ವಿರುದ್ಧ ಬಂಡಾಯ ಎದ್ದಿದ್ದ ಸೋಮಣ್ಣ ಅವರೊಂದಿಗೂ ದೇವೇಗೌಡರ ಜೊತೆಗೂಡಿ ಮಾತನಾಡಿ, ಸಮಸ್ಯೆ ಪರಿಹರಿಸಿದ್ದಾರೆ. ತದನಂತರ ಬಿಜೆಪಿ ಹಿರಿಯ ನಾಯಕ ಸಿ.ಟಿ.ರವಿ ಸೇರಿದಂತೆ ಕೆಲವು ಮುಖಂಡರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡಿದ್ದಾರೆ ಎನ್ನಲಾಗಿದೆ.

ಅಯೋಧ್ಯೆ ಶ್ರೀ ರಾಮನ ಮಂತ್ರಾಕ್ಷತೆ ವಿತರಣೆ



ಪಡುವಾರಹಳ್ಳಿಯ ಶ್ರೀ ಗಣಪತಿ ದೇವಸ್ಥಾನದ ಸನ್ನಿಧಿಯಲ್ಲಿ ಮಂತ್ರಾಕ್ಷತೆಯ ಪೂಜೆ ಸಲ್ಲಿಸಿ ಅರ್ಚಕ ರಾಕೇಶ್ ಶರ್ಮಾ ಮತ್ತು ಶ್ರೀನಿವಾಸ್ ಸ್ವಾಮಿಯವರಿಗೆ ಅಯೋಧ್ಯೆ ಶ್ರೀ ರಾಮನ ಮಂತ್ರಾಕ್ಷತೆ ವಿತರಿಸಿ ನಂತರ ವಾರ್ಡಿನ ಪ್ರತಿಯೊಂದು ಮನೆ-ಮನೆಗೂ ತೆರಳಿ ಬಿಜೆಪಿ ಕಾರ್ಯಕರ್ತರು ಮಂತ್ರಾಕ್ಷತೆ ವಿತರಿಸಿದರು. ಈ ವೇಳೆ 22ನೇ ವಾರ್ಡಿನ ಅಧ್ಯಕ್ಷ ಮಂಜು, ಮುಖಂಡರಾದ ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಡಿ.ಮಹೇಶನಾಯಕ, ಬಸವರಾಜು, ರಾಮಣ್ಣ, ಸ್ವಾಮಿ, ಗೋಪಾಲ್, ವೇಣು, ಸಂತೋಷ್, ರಾಘು, ಶಿವರಾಜು, ಗೌತಮ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಸೂಪರ್‌ಸ್ಟಾರ್ ರಜನೀಕಾಂತ್ ಅಭಿಮಾನಿಗಳ ಬಳಗದ ನೂತನ ದಿನದರ್ಶಿಕೆಯನ್ನು ರಜನೀಕಾಂತ್ ಅವರ ಆಪ್ತರೂ ಆದ ರಾಜಬಹದ್ದೂರ್ ಬಿಡುಗಡೆ ಮಾಡಿದರು. ಈ ವೇಳೆ ಬಳಗದ ಅಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ನಾಗರಾಜ್‌ದಾಸ್, ಖಜಾಂಚಿ ರಾಜಣ್ಣ, ನರಸಿಂಹ, ಮಹದೇವ, ಸುಬ್ರಮಣಿ, ಶಂಕರ್ ಇನ್ನಿತರರಿದ್ದರು.

ರಾಮಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಳ್ಳದೆ ಇರುವ ಪಕ್ಷದ ಉಚ್ಚ ನಾಯಕರ ನಿರ್ಧಾರ ಸಮರ್ಥಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ

- ಒಂದು ಧಾರ್ಮಿಕ ಕಾರ್ಯವನ್ನು ಪಕ್ಷ ಕಾರ್ಯಕ್ರಮವಾಗಿಸಿಕೊಂಡಿದೆ ಎಂದು ಆಕ್ಷೇಪ
- ರಾಮಮಂದಿರ ವಿಷಯದಲ್ಲಿ ಮೊದಲಿನಿಂದಲೂ ಕಾಂಗ್ರೆಸ್ ಪಕ್ಷ ತನ್ನ ನಿಲುವಿಗೆ ಬದ್ಧವಾಗಿರುವುದಾಗಿ ಪುನರುಚ್ಚಾರ



ಬೆಂಗಳೂರು, ಜ.11(ಕೆಎಂಶಿ)- ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸದಿರುವ ಕಾಂಗ್ರೆಸ್ ವರಿಷ್ಠರ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ರಾಮಲಲ್ಲಾ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ತೀರ್ಮಾನ ಸರಿಯಾಗಿದೆ, ಇದನ್ನು ನಾನು ಬೆಂಬಲಿಸುತ್ತೇನೆ ಎಂದಿದ್ದಾರೆ.

ಜಾತಿ, ಧರ್ಮ, ಪಕ್ಷ, ಪಂಥವನ್ನು ಮೀರಿ ಸರ್ವರನ್ನೂ ಒಳಗೊಂಡು ಭಕ್ತಿ ಮತ್ತು ಗೌರವದಿಂದ ನಡೆಸಬೇಕಾದ ಒಂದು ಧಾರ್ಮಿಕ ಕಾರ್ಯಕ್ರಮವನ್ನು, ಒಂದು ಪಕ್ಷದ ಕಾರ್ಯಕ್ರಮವನ್ನಾಗಿ ಮಾಡಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಸಂಘ ಪರಿವಾರದ ನಾಯಕರು ಅಯೋಧ್ಯೆ ರಾಮನಿಗೆ ಹಾಗೂ ದೇಶದ 140 ಕೋಟಿ ಜನತೆಗೆ ಅಗೌರವವನ್ನುಂಟು ಮಾಡಿದ್ದಾರೆ.

ಶ್ರದ್ಧಾಪೂರ್ವಕವಾಗಿ ನಡೆಯಬೇಕಿದ್ದ ಧಾರ್ಮಿಕ ಕಾರ್ಯಕ್ರಮವನ್ನು ರಾಜಕೀಯ ಪ್ರಚಾರದ ಅಭಿಯಾನವನ್ನಾಗಿ ಮಾಡಿರುವುದು ಸಮಸ್ತ ಹಿಂದೂ ಬಾಂಧವರಿಗೆ ಮಾಡಿರುವ ದ್ರೋಹ. ಹಿಂದೂ ಧರ್ಮದ ಸಂಸ್ಕೃತಿ, ಆಚಾರ-ವಿಚಾರಗಳ ಬಗ್ಗೆ ಪ್ರತಿನಿತ್ಯ ಉಪದೇಶ ನೀಡುವ ಬಿಜೆಪಿ ಮತ್ತು ಆರ್.ಎಸ್.ಎಸ್ ನಾಯಕರು ಅಪೂರ್ಣಗೊಂಡಿರುವ ರಾಮನ ದೇವಸ್ಥಾನವನ್ನು ಉದ್ಘಾಟಿಸಲು ಹೊರಟಿರುವ ಪ್ರಧಾನಿ ನರೇಂದ್ರ ಮೋದಿ ನಡೆ ಬಗ್ಗೆ ಮೌನವಾಗಿರುವುದು ಇವರ ಪೊಳ್ಳು ಹಿಂದೂತ್ವದ ಮುಖವಾಡವನ್ನು ಬಯಲುಗೊಳಿಸಿದೆ ಎಂದು ಟೀಕಿಸಿದ್ದಾರೆ.

ರಾಮಜನ್ಮಭೂಮಿ ವಿವಾದ ಶುರುವಾದ ದಿನದಿಂದ ಕಾಂಗ್ರೆಸ್ ಪಕ್ಷ ತನ್ನ ನಿಲುವಿಗೆ ಬದ್ಧವಾಗಿ ಉಳಿದಿದೆ. ನ್ಯಾಯಾಲಯದ ತೀರ್ಪಿಗೆ ತಲೆಬಾಗುವ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಮುಸ್ಲಿಂ ಬಾಂಧವರು ಸಹ ನ್ಯಾಯಾಲಯದ ತೀರ್ಪು ಒಪ್ಪಿಕೊಂಡು ನ್ಯಾಯಾಂಗದ ಮೇಲಿನ ತಮ್ಮ ನಿಷ್ಠೆಯನ್ನು ಸಾಬೀತುಪಡಿಸಿದ್ದಾರೆ.

ರಾಮ ಜನ್ಮಭೂಮಿ ವಿವಾದ ಧಾರ್ಮಿಕ ಶ್ರದ್ಧೆಯ ಪ್ರಶ್ನೆ, ನ್ಯಾಯಾಲಯದಲ್ಲಿ ತೀರ್ಮಾನ ಮಾಡುವಂತಹದ್ದಲ್ಲ ಎಂದು ಹೇಳಿಕೊಂಡು ಬಂದಿದ್ದ ಬಿಜೆಪಿ ಮತ್ತು ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್ ಮೊದಲಾದ ಸಂಘಟನೆಗಳು ಸುಪ್ರೀಂಕೋರ್ಟ್ ತೀರ್ಪು ತಮ್ಮ ಪರವಾಗಿ ಹೊರಬಿದ್ದ ಕೂಡಲೇ ಅದನ್ನು ಒಪ್ಪಿಕೊಂಡಿರುವುದು ಈ ಸಂಘಟನೆಗಳ ನಾಯಕರ ಹಿಪೋಕ್ರ್ಯಾಟಿಕ್ ನಡವಳಿಕೆಗೆ ಸಾಕ್ಷಿಯಾಗಿದೆ. ರಾಮ ಮಂದಿರವನ್ನು ರಾಜಕೀಯಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ವಿರೋಧಿಸಿ ನಾಲ್ವರು ಶಂಕರಾಚಾರ್ಯರು

"ಬಿಜೆಪಿ ಮತ್ತು ಸಂಘ ಪರಿವಾರದ ರಾಮನ ಹೆಸರಿನ ರಾಜಕೀಯವನ್ನು ದೇಶದ ಜನತೆ ಈ ಬಾರಿ ಗಂಭೀರವಾಗಿ ಗಮನಿಸುತ್ತಿದ್ದು ಈ ಜಾಲಕ್ಕೆ ಖಂಡಿತ ಬಲಿಯಾಗುವುದಿಲ್ಲ ಎಂಬ ವಿಶ್ವಾಸವಿದೆ. ನಾವು ಹಿಂದೂ ಧರ್ಮದ ವಿರೋಧಿಗಳಲ್ಲ, ಧರ್ಮದ ಹೆಸರಲ್ಲಿ ನಡೆಸಲಾಗುವ ಅಸ್ಪೃಶ್ಯತೆ, ಜಾತೀಯತೆ, ಅಂಧ ಶ್ರದ್ಧೆ, ಕಂದಾಚಾರಗಳನ್ನು ವಿರೋಧಿಸುತ್ತೇವೆ. ಧರ್ಮವನ್ನು ರಾಜಕಾರಣಕ್ಕೆ ಬಳಸುವುದರ ಬಗ್ಗೆ ನಮ್ಮ ಸಂಪೂರ್ಣ ವಿರೋಧ ಇದೆ. ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ, ಕನಕದಾಸ, ನಾರಾಯಣಗುರು, ಕುವೆಂಪು ಸೇರಿದಂತೆ ದೇಶದ ಅನೇಕ ಮಹನೀಯರು ಆಚರಿಸುತ್ತಾ ಬಂದಿರುವ ಹಿಂದೂ ಧರ್ಮದ ಬಗ್ಗೆ ಯಾವುದೇ ತಕರಾರಿಲ್ಲ. ಆದರೆ ಧರ್ಮವನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳುತ್ತಿರುವುದಕ್ಕೆ ವಿರೋಧವಿದೆ. -ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಬಹಿಷ್ಕರಿಸುವುದಾಗಿ ಹೇಳಿರುವುದು ವರದಿಯಾಗಿದೆ.

ಸಮಸ್ತ ಹಿಂದೂಗಳನ್ನು ಒಗ್ಗೂಡಿಸುವ ಕಾರ್ಯಕ್ರಮವಾಗಬೇಕಾಗಿದ್ದ ರಾಮಲಲ್ಲಾ ಪ್ರತಿಷ್ಠಾಪನಾ ಕಾರ್ಯಕ್ರಮ ಬಿಜೆಪಿಯ ರಾಜಕೀಯದಿಂದಾಗಿ ಹಿಂದೂಗಳನ್ನು ಒಡೆಯುವ ಕಾರ್ಯಕ್ರಮವಾಗಿರುವುದು ದುರಂತ. ಹತ್ತು ವರ್ಷಗಳ ಆಡಳಿತ ಪೂರ್ಣಗೊಳಿಸಲಿರುವ ಪ್ರಧಾನಿ ಮೋದಿ ಅವರಿಗೆ ತಮ್ಮ ಸಾಧನೆ ಮೇಲೆ ಚುನಾವಣೆ ಗೆಲ್ಲುವ ಆತ್ಮವಿಶ್ವಾಸ ಇಲ್ಲದೆ, ಲೋಕಸಭಾ ಚುನಾವಣೆ ಕಾಲದಲ್ಲಿ ಅವಸರದಿಂದ ಅಪೂರ್ಣ ಸ್ಥಿತಿಯಲ್ಲಿರುವ ರಾಮ ಮಂದಿರ ಉದ್ಘಾಟಿಸಿ ಹಿಂದೂತ್ವದ ಅಲೆ ಎಬ್ಬಿಸಿ ತಮ್ಮ ವೈಫಲ್ಯ ಮುಚ್ಚಿಹಾಕುವ ಪ್ರಯತ್ನ ನಡೆಸಿದ್ದಾರೆ ಎಂದು ಟೀಕಿಸಿದ್ದಾರೆ.

ನಮ್ಮ ಊರಿನಲ್ಲಿ ರಾಮನ ದೇವಸ್ಥಾನವನ್ನು ನಿರ್ಮಾಣ ಮಾಡಿ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿದ್ದೇವೆ, ಮಸೀದಿ-ಚರ್ಚ್‌ಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇವೆ, ಸರ್ವಧರ್ಮ ಸಮಭಾವ ಸಂವಿಧಾನದ ಆಶಯವಾಗಿದೆ, ಇದಕ್ಕೆ ಬದ್ಧರಾಗಲೇಬೇಕಿದೆ ಯಾವ ಧರ್ಮ ಕೂಡಾ ಇನ್ನೊಂದು ಧರ್ಮವನ್ನು ದ್ವೇಷಿಸುವುದಿಲ್ಲ, ನಿರಾಕರಿಸುವುದಿಲ್ಲ, ಸಮಾಜವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿ ಮಾಡುವ ಸಂವಿಧಾನದ ಆಶಯಕ್ಕೆ ಪಕ್ಷ ಬದ್ಧವಾಗಿದೆ ಎಂದಿದ್ದಾರೆ.

ರಾಮಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಳ್ಳದಿರುವ ಕಾಂಗ್ರೆಸ್ ನಿರ್ಧಾರಕ್ಕೆ ಮಾಜಿ ಸಿಎಂ ಬಿಎಸ್‌ವೈ ಖಂಡನೆ



ಬೆಂಗಳೂರು,ಜ.11(ಕೆಎಂಶಿ)-ರಾಮಮಂದಿರ ಉದ್ಘಾಟನೆ ಮತ್ತು ರಾಮನ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಆಹ್ವಾನವನ್ನು ಕಾಂಗ್ರೆಸ್ ಮುಖಂಡರು ತಿರಸ್ಕರಿಸಿರುವುದು ಅತ್ಯಂತ ದುರ್ದೈವದ ಸಂಗತಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಿಲುವನ್ನು ಖಂಡಿಸುತ್ತೇವೆ. ರಾಮ ರಾಜ್ಯ, ರಾಮನ ಕನಸು ನನಸು ಆಗಬೇಕಿದೆ. ಕೋಟ್ಯಾಂತರ ಹಿಂದೂಗಳ ಭಾವನೆಗೆ ಧಕ್ಕೆ ತರುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಇದು ಅಕ್ಷಮ್ಯ ಅಪರಾಧ ಎಂದು ರಾಮಮಂದಿರ ಉದ್ಘಾಟನೆಗೆ ಏಕೆ ಹೋಗುತ್ತಿಲ್ಲ ಎಂಬುದನ್ನು ಕಾಂಗ್ರೆಸ್ ನಾಯಕರು ಸ್ಪಷ್ಟಪಡಿಸಬೇಕು. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಒಳ್ಳೆಯ ಕೆಲಸಕ್ಕೆ ಕಲ್ಲು ಹಾಕುವ ಕೆಲಸ ಮಾಡುತ್ತಿದ್ದಾರೆ. ಮುಂದೆ ಅವರೇ ಪಶ್ಚಾತ್ತಾಪ ಪಡುತ್ತಾರೆ ಎಂದರು.

ರೈತರ ಕೃಷಿ ಸಾಲ ಮನ್ನಾಕ್ಕೆ ಆಗ್ರಹಿಸಿ ಫೆ.13ರಂದು ದೆಹಲಿಯಲ್ಲಿ ರ್‍ಯಾಲಿ



ಮೈಸೂರು, ಜ.11(ಬಿಎಲ್‌ಯು)- ದೇಶದ ರೈತರ ಕೃಷಿ ಸಾಲ ಸಂಪೂರ್ಣ ಮನ್ನಾಕ್ಕೆ ಆಗ್ರಹಿಸಿ ಫೆ.13ರಂದು ದೆಹಲಿಯಲ್ಲಿ ರೈತ ಸಂಘಟನೆಗಳ ಮಹಾ ಸಂಗಮ ರ್‍ಯಾಲಿ ನಡೆಯಲಿದೆ ಎಂದು ದಕ್ಷಿಣ ಭಾರತ ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರ್‍ಯಾಲಿ ಸಂಬಂಧ ಈಗಾಗಲೇ ದೇಶದ ಎಲ್ಲಾ ರಾಜ್ಯಗಳಲ್ಲಿ 14 ಕಿಸಾನ್ ಮಹಾ ಪಂಚಾಯತ್ ಸಮಾವೇಶ ನಡೆಸಿ ರೈತರಲ್ಲಿ ಜಾಗೃತಿ ಮೂಡಿಸಲಾಗಿದೆ ಎಂದು ಹೇಳಿದರು.

ದೇಶದ ರೈತರನ್ನು ರಕ್ಷಣೆ ಮಾಡಲು ಕೇಂದ್ರ ಸರ್ಕಾರ ವಿಶ್ವ ವ್ಯಾಪಾರ ಒಪ್ಪಂದದಿಂದ ಹೊರಗೆ ಬರಬೇಕು, ಕಬ್ಬಿನ ಎಸ್‌ಆರ್‌ಪಿ ದರವನ್ನು ಕನಿಷ್ಠ 4 ಸಾವಿರ ರೂಪಾಯಿಗೆ ನಿಗದಿ ಮಾಡಬೇಕು. ಎಲ್ಲಾ ಬೆಳೆಗಳಿಗೆ ಬೆಳೆ ವಿಮೆ ಜಾರಿಗೊಳಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ರ್‍ಯಾಲಿ ಆಯೋಜಿಸಲಾಗಿದೆ ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರದಲ್ಲಿರುವ ಬಣ್ಣಾರಿ ಸಕ್ಕರೆ ಕಾರ್ಖಾನೆ ರಹದಾರಿ ನಿಯಮಗಳನ್ನು ಉಲ್ಲಂಘಿಸಿ ರೈತರು ಹಾಗೂ ಸರ್ಕಾರಕ್ಕೆ ಮೋಸ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಕಾರ್ಖಾನೆಯನ್ನು ತನ್ನ ವಶಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು. ರೈತ ಮುಖಂಡರಾದ ಅತ್ತಳ್ಳಿ ದೇವರಾಜ್, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕಿರಗಸೂರ ಶಂಕರ, ರಂಗರಾಜು, ಮಾರ್ಬಳ್ಳಿ ನೀಲಕಂಠಪ್ಪ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಫೋಟೋ ಗ್ರಾಫರ್ಸ್ ಅಂಡ್ ವಿಡಿಯೋ ಗ್ರಾಫರ್ಸ್ ಅಸೋಸಿಯೇಷನ್‌ರವರ 23ನೇ ವಾರ್ಷಿಕೋತ್ಸವದ ಅಂಗವಾಗಿ ಛಾಯಾ ವೃತ್ತಿಪರ ಸಂಘದ ಸದಸ್ಯರಿಗೆ ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಮೈಸೂರಿನ ಪೆವಿಲಿಯನ್ ಹಾಗೂ ಕಾಫಿ ಬೋರ್ಡ್ ಪಕ್ಕದ ಮೈದಾನದಲ್ಲಿ ಜರುಗಿತು. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ಸಂಘದ ಗೌರವಾಧ್ಯಕ್ಷ ಎಂ.ಕೆ.ಸೋಮಶೇಖರ್, ಪ್ರಥಮ ಬಹುಮಾನ ಪಡೆದ ರಾಯಲ್ ಚಾಲೆಂಜರ್ಸ್ ಮೈಸೂರು ತಂಡಕ್ಕೆ ಟ್ರೋಫಿ ಹಾಗೂ 60 ಸಾವಿರ ನಗದು ಬಹುಮಾನ ವಿತರಿಸಿದರು. ಹೊಳಲ್ಕೆರೆ ತಂಡ ದ್ವಿತೀಯ ಸ್ಥಾನ ಪಡೆಯಿತು. ಮೂರನೇ ಬಹುಮಾನವನ್ನು ಅರಕಲಗೂಡು ತಂಡ ಪಡೆಯಿತು. ಈ ವೇಳೆ ಸಂಘದ ಅಧ್ಯಕ್ಷರಾದ ದಡದಳ್ಳಿ ಮಹೇಶ್, ಉಪಾಧ್ಯಕ್ಷರಾದ ಮಂಜುನಾಥ್, ಫೋಟೋಗ್ರಾಫರ್ಸ್ ಸಂಘದ ರಾಜ್ಯಾಧ್ಯಕ್ಷ ನಾಗೇಶ್, ಕಾರ್ಯದರ್ಶಿ ಸುದರ್ಶನ್ ಜಿ.ಎಂ., ಸಹ ಕಾರ್ಯದರ್ಶಿ ಪ್ರಮೋದ್ ಆರ್., ಖಜಾಂಚಿ ಮಾದೇಶ ಬಿ., ಆರೋಗ್ಯ ನಿಧಿ ಛೇರ್ಮನ್ ಶಿವಕುಮಾರ್ ಹೆಚ್.ಎಸ್., ಜನಸಂಪರ್ಕ ಅಧಿಕಾರಿ ಚೈತನ್ಯ ರಾವ್, ನಿರ್ದೇಶಕರಾದ ಲೋಕೇಶ್ ಎಂ., ಮೋಹನ್ ಎ., ರವಿಚಂದ್ರ ಜೆ., ಮಂಜುನಾಥ ಬಿ., ಉಮೇಶ ಕೆ., ಕಾಂತರಾಜ್ ಎಂ.ಎಸ್., ಕುಮಾರ್(ಕುಮ್ಮಿ), ಕುರುಬರಹಳ್ಳಿ ಧನಂಜಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರನ್ನು 'ಯೋಗ ನಗರಿ' ಎಂದು ಅಧಿಕೃತವಾಗಿ ಘೋಷಿಸಿ

ಮೈಸೂರು,ಜ.11(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರನ್ನು 'ಯೋಗ ನಗರಿ' ಎಂದು ಅಧಿಕೃತವಾಗಿ ಘೋಷಿಸಿ, ಯೋಗ ಅಭಿವೃದ್ಧಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಚೈತನ್ಯ ಯೋಗ ಎಜುಕೇಷನಲ್ ಅಂಡ್ ರಿಸರ್ಚ್ ಫೌಂಡೇಷನ್‌ನ ಯೋಗ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರಿಗೆ ಯೋಗ ಕಲಿಯಲು ದೇಶ- ವಿದೇಶಗಳ ಸಾವಿರಾರು ಜನ ಬರುತ್ತಿದ್ದಾರೆ. ಯಾದವಗಿರಿ, ಒಂಟಿಕೊಪ್ಪಲು, ಗೋಕುಲಂ ಸೇರಿದಂತೆ ವಿವಿಧ ಬಡಾವಣೆಯಲ್ಲಿ ಬೆಳಗ್ಗೆ ಹಾಗೂ ಸಂಜೆ ವೇಳೆ ನೂರಾರು ವಿದೇಶಿಯರು ಯೋಗ ಕಲಿಯಲು ಬರುವುದು ಕಂಡು ಬರುತ್ತದೆ. ಈಗಾಗಲೇ ಮೈಸೂರನ್ನು ಯೋಗ ನಗರಿ ಎಂದು ಕರೆಯಲಾಗುತ್ತಿದೆ. ಆದರೆ ಅಧಿಕೃತವಾಗಿ ಘೋಷಿಸಿ, ಯೋಗ ಅಭಿವೃದ್ಧಿಗೆ ಅನುದಾನ ನೀಡಿದರೆ ಮತ್ತಷ್ಟು ಅಭಿವೃದ್ಧಿ ಸಾಧಿಸಬಹುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೋತ್ಸಾಹದಿಂದ ಕೃಷ್ಣಮಾಚಾರ್ ಯೋಗ ಆರಂಭಿಸಿದರು. ಬಿಕೆಎಸ್ ಅಯ್ಯಂಗಾರ್ ಅವರು ಅದನ್ನು ವಿಶ್ವ ಮಟ್ಟದಲ್ಲಿ ಪ್ರಚುರಪಡಿಸಲು ಕಾರಣಕರ್ತರಾದರು ಎಂದು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ಸಾಧಕರಾದ ಎನ್.ಅನಂತ, ಅಂಶಿ ಪ್ರಸನ್ನ ಕುಮಾರ್, ಶ್ರೀಹರಿ ದ್ವಾರಕನಾಥ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರಕುಮಾರ್ ಮಾತನಾಡಿ, 30 ವರ್ಷಗಳ ಹಿಂದೆ ಕೇವಲ ಐದು ಯೋಗ ಕಲಿಕೆ ಸಂಸ್ಥೆ ಇತ್ತು. ಈಗ ಸಾಕಷ್ಟು ಬೆಳೆದಿದೆ. ಇದರಿಂದಾಗಿಯೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಬಂದಿದ್ದರು ಎಂದರು.

ಇದೇ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ 'ಪತ್ರಿಕಾ ಚೈತನ್ಯ', ಜೆಎಸ್‌ಎಸ್ ಯೋಗ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್ ಅವರಿಗೆ 'ಯೋಗ ಚೈತನ್ಯ' ಹಾಗೂ ಹಿಮಾಲಯ ಫೌಂಡೇಷನ್ ಅಧ್ಯಕ್ಷ ಎನ್. ಅನಂತ ಅವರಿಗೆ 'ಯೋಗ ಸಾಹಿತ್ಯ ಚೈತನ್ಯ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಫೌಂಡೇಷನ್ ಅಧ್ಯಕ್ಷ ಬಿ.ಪಿ. ಮೂರ್ತಿ, ಆರೋಗ್ಯ ತಜ್ಞೆ ನಂದಿನಿ ಮೂರ್ತಿ, ಫೌಂಡೇಷನ್ ಕಾರ್ಯದರ್ಶಿ ಭವಾನಿ, ಲಕ್ಷ್ಮಿ ಲಕ್ಷ್ಮಿನಾಗ್ ಇದ್ದರು.


ಇಂದು ಯುವ ನಿಧಿ ನೋಂದಣಿ ಅಭಿಯಾನ, ಸ್ವಾಮಿ ವಿವೇಕಾನಂದರ 162ನೇ ಜಯಂತಿ



ಮೈಸೂರು, ಜ.11-ಜನವರಿ 12ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ನಗರದ ಪ್ರತಿಷ್ಠಿತ ಮಹಾರಾಣಿ ಮಹಿಳಾ ಕಾಲೇಜಿನ ಕಲಾಮಂಟಪದಲ್ಲಿ 162ನೇ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ 2022-23ನೇ ಸಾಲಿನಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿನಿಯರಿಗೆ 'ಯುವ ನಿಧಿ ನೋಂದಣಿ' ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ ರಾಜೇಂದ್ರ ಉದ್ಘಾಟಿಸುವರು ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಾದರ್ ಕೆ.ಎ.ವಿಲಿಯಂ ವಾಪಸ್ ಕರೆ ತರಲು ಆಗ್ರಹ

ಮೈಸೂರಿನ ಬಿಷಪ್ ಹೌಸ್ ಬಳಿ ಪ್ರತಿಭಟನೆ, ಆಡಳಿತಾಧಿಕಾರಿ ಫಾದರ್ ಬರ್ನಾಡ್ ಮೊರಾಸ್ ಅವರಿಗೆ ಮನವಿ ಸಲ್ಲಿಕೆ



ಮೈಸೂರು, ಜ.11(ಆರ್‌ಕೆ)-ರಜೆ ಮೇಲೆ ತೆರಳಿರುವ ಮೈಸೂರು ಕ್ಯಾಥೋಲಿಕ್ ಧರ್ಮ ಪ್ರಾಂತದ ಬಿಷಪ್ ಆಗಿದ್ದ ಫಾದರ್ ಕೆ.ಆಂಟನಿ ವಿಲಿಯಂ ಅವರನ್ನು ವಾಪಸ್ ಕರೆತಂದು ಜೀವ ಭದ್ರತೆ ಒದಗಿಸಬೇಕೆಂದು ಪಾದ್ರಿಗಳು ಹಾಗೂ ಬೆಂಬಲಿಗರು ಇಂದಿಲ್ಲಿ ಒತ್ತಾಯಿಸಿದ್ದಾರೆ.

ಮೈಸೂರಿನ ಬನ್ನಿಮಂಟಪದ ಹೈವೇ ಸರ್ಕಲ್ ಬಳಿ ಇರುವ ಬಿಷಪ್ ಹೌಸ್ 'ಸನ್ಮಾರ್ಗ' ಆವರಣದಲ್ಲಿ ಜಮಾಯಿಸಿದ ಅವರು, ಕೆಲಕಾಲ ಪ್ರತಿಭಟನೆ ನಡೆಸಿ ಮೈಸೂರು ಪ್ರಾಂತದ ಆಡಳಿತಾಧಿಕಾರಿ ಫಾದರ್ ಬರ್ನಾಡ್ ಮೊರಾಸ್ ಅವರಿಗೆ ಮನವಿ ಸಲ್ಲಿಸಿದರು. ಫಾ.ಜಾನ್ ಸೀಕ್ವೆರಾ, ಮ್ಯಾಥ್ಯೂ ಬೆಂಜಮಿನ್ ಸುರೇಶ್ ನೇತೃತ್ವದಲ್ಲಿ ನಡೆಸಿದ ಪ್ರತಿಭಟನೆಯಲ್ಲಿ, ರಜೆ ಮೇಲೆ ಕಳುಹಿಸಿರುವ ಡಾ.ಕೆ.ಎ.ವಿಲಿಯಂ ಆಂಟನಿ ಅವರನ್ನು ತಕ್ಷಣವೇ ಮೈಸೂರು ಧರ್ಮ ಪ್ರಾಂತಕ್ಕೆ ಕರೆತರಬೇಕು. ಅವರ ವಿರುದ್ಧ ಸಂಚು ರೂಪಿಸಿದವರ ವಿರುದ್ಧ ಕ್ರಮ ಜರುಗಿಸಬೇಕು. ಡಾ.ವಿಲಿಯಂ ಅವರಿಗೆ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದ ಅವರು, 15 ದಿನದೊಳಗೆ ಕರೆತರದಿದ್ದಲ್ಲಿ ನಾವೇ ಕ್ರಮ ವಹಿಸುವುದಾಗಿ ತಿಳಿಸಿದರು. ಈ ಸಂದರ್ಭ ಮನವಿ ಸ್ವೀಕರಿಸಿ ಪ್ರತಿಕ್ರಿಯೆ ನೀಡಿದ ಆಡಳಿತಾಧಿಕಾರಿ ಬರ್ನಾಡ್ ಮೊರಸ್ ಅವರು, ನಿಮ್ಮ ಮನವಿಯನ್ನು ಸಂಬಂಧಪಟ್ಟವರಿಗೆ ತಲುಪಿಸುತ್ತೇವೆ. ತಾವು ನೀಡಿರುವ ಆಡಿಯೋ ಸಂಭಾಷಣೆಯನ್ನು ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದರು.

ಅದರಿಂದ ಸಮಾಧಾನರಾಗದ ಪ್ರತಿಭಟನಾಕಾರರು, 2024ರ ಜನವರಿ 6ರಂದು ಫಾ. ಜ್ಞಾನಪ್ರಕಾಶ್, ಆರ್ಚ್ ಬಿಷಪ್ ಲಿಯೋ ಕರ್ನಲಿಯೋ ಮತ್ತು ದೂರುದಾರ ಮಹಿಳೆ ನಡುವೆ ನಡೆದಿರುವ ಮೊಬೈಲ್ ಸಂಭಾಷಣೆ ವೈರಲ್ ಆಗಿತ್ತು ಅದರಲ್ಲಿ 2021ರಲ್ಲಿ ಮೈಸೂರು ಬಿಷಪ್ ಆಗಿದ್ದ ಡಾ.ಕೆ. ಆಂಟನಿ ವಿಲಿಯಂ ವಿರುದ್ಧ ಕೇಳಿಬಂದಿದ್ದ ಆರೋಪ ಕುರಿತು ನಡೆಸಿದ ವರದಿ ಪ್ರಸ್ತಾಪಿಸಲಾಗಿದೆ ಎಂದರು.

ಇಂತಹ ಬೆಳವಣಿಗೆಗಳಿಂದ ಧರ್ಮಪ್ರಾಂತದ ನಂಬಿಕೆಗಳು ಹಾಳಾಗಿದ್ದು, ಆಡಿಯೋದಲ್ಲಿ ಕೇಳಿ ಬಂದಿರುವ ಪಾದ್ರಿಗಳ ವಿರುದ್ಧವೂ ಕಟ್ಟುನಿಟ್ಟಿನ ಕ್ರಮವಾಗಬೇಕು ಎಂದು ಒತ್ತಾಯಿಸಿದರು.

ಫಾದರ್‌ಗಳಾದ ವಿನ್ಸೆಂಟ್, ಡೇವಿಡ್, ಮಧುರೈ ಮುತ್ತು, ಇಗ್ನಾಸಿ ಮುತ್ತು, ಬರ್ನಾಡ್ ಪ್ರಕಾಶ್, ಐಶ್ಯಕ್ ಪ್ರವೀಣ್ ಕುಮಾರ್, ವಿಜಯ ಕುಮಾರ್, ಸಂಜಯ್, ಮ್ಯಾಥ್ಯೂ ಬೆಂಜಮಿನ್ ಸುರೇಶ್, ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಡಾ. ಅನಿಲ್ ಥಾಮಸ್ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ವಿಕಸಿತ ಭಾರತ ನಿರ್ಮಾಣಕ್ಕೆ ಬಿಜೆಪಿ ಸರ್ಕಾರ ಕಟಿಬದ್ಧ

ಕೇಂದ್ರ ಸಚಿವ ಕಿಶನ್‌ಪಾಲ್ ಗುರ್ಜರ್ ಅಭಿಪ್ರಾಯ



ಕೆ.ಆರ್.ಪೇಟೆಯಲ್ಲಿ ನಡೆದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮವನ್ನು ಕೇಂದ್ರ ಸಚಿವ ಕಿಶನ್‌ಪಾಲ್ ಗುರ್ಜರ್ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜ.11– ವಿಶ್ವವೇ ಮೆಚ್ಚುವಂತೆ ದಕ್ಷ, ಪ್ರಾಮಾಣಿಕ ಆಡಳಿತ ನೀಡಿ ಭಾರತವನ್ನು ಮುನ್ನಡೆಸುತ್ತಿರುವ ನಮ್ಮೆಲ್ಲರ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಸರ್ವ ಜನಾಂಗದ ಶಾಂತಿಯ ತೋಟದ ಹೊಂಗನಸನ್ನು ಹೊತ್ತು ಕೆಲಸ ಮಾಡುತ್ತಿದ್ದಾರೆ ಎಂದು ಕೇಂದ್ರ ಇಂಧನ ಹಾಗೂ ಕೈಗಾರಿಕಾ ರಾಜ್ಯ ಸಚಿವ ಕಿಶನ್‌ಪಾಲ್ ಗುರ್ಜರ್ ಅಭಿಪ್ರಾಯಪಟ್ಟರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಬ್ಯಾಂಕ್ ಆಫ್ ಬರೋಡಾ ವತಿಯಿಂದ ಆಯೋಜಿಸಿದ್ದ "ವಿಕಸಿತ ಭಾರತ ಸಂಕಲ್ಪ ಯಾತ್ರೆ" ಕಾರ್ಯಕ್ರಮ ಉದ್ಘಾಟಿಸಿ, ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಯೋಜನೆಗಳ ಸಾಧನ ಸಲಕರಣೆಗಳನ್ನು ವಿತರಿಸಿ ಅವರು ಮಾತನಾಡಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 28 ಸ್ಥಾನಗಳಲ್ಲೂ ಬಿಜೆಪಿ ಭರ್ಜರಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಸಚಿವರು, ಪ್ರಧಾನಿ ಮೋದಿ ಮತ್ತೊಮ್ಮೆ ಅಧಿಕಾರಕ್ಕೇರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. 400ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಸಂಸದರು ಆಯ್ಕೆಯಾಗುವ ಮೂಲಕ ದೇಶದಲ್ಲಿ ಮತ್ತೊಮ್ಮೆ ಇತಿಹಾಸ ನಿರ್ಮಾಣವಾಗಲಿದೆ. ಮೋದಿ ಅವರು ನೀಡಿದ್ದ ಎಲ್ಲಾ ಗ್ಯಾರಂಟಿಗಳು ಈಡೇರಿವೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನೀಡಿದ್ದ 5 ಗ್ಯಾರಂಟಿಗಳು ಶೇ.100ಕ್ಕೆ ನೂರರಷ್ಟು ಈಡೇರಿಲ್ಲ. ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ರಾಜ್ಯ ಸರ್ಕಾರ ತನ್ನ ಹೆಸರು ಹಾಕಿಕೊಂಡು ರಾಜ್ಯದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ. ಚುನಾವಣೆ ಸಮಯದಲ್ಲಿ 10 ಕೆಜಿ ಅಕ್ಕಿ ನೀಡುತ್ತೇವೆಂದ ಕಾಂಗ್ರೆಸ್ ಖಾತೆದಾರರ ಖಾತೆಗೆ ಹಣ ಹಾಕಲು ವಿಫಲವಾಗಿದೆ. ಅನ್ನಭಾಗ್ಯ ಅಕ್ಕಿ ವಿತರಣೆ ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದೆ. ಫಸಲ್ ಭೀಮಾ ಯೋಜನೆ, ಮುದ್ರಾ ಯೋಜನೆ, ಉಜ್ವಲ ಯೋಜನೆ, ಪ್ರಧಾನ ಮಂತ್ರಿ

> ದಕ್ಷ, ಪ್ರಾಮಾಣಿಕ ಆಡಳಿತ ನೀಡಿ ಗ್ರಾಮಾಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಮೋದಿ ಅವರು ಬಡತನ, ನಿರುದ್ಯೋಗ ಹಾಗೂ ಹಸಿವು ಮುಕ್ತ ಭಾರತ ನಿರ್ಮಾಣಕ್ಕಾಗಿ ಹಗಲಿರುಳೆನ್ನದೆ ಕೆಲಸ ಮಾಡುವ ಮೂಲಕ ದೇಶದ ಜನತೆ ತಮ್ಮ ಮೇಲಿಟ್ಟಿರುವ ಭರವಸೆ ಉಳಿಸಿಕೊಂಡಿದ್ದಾರೆ. ಅಲ್ಲದೇ ಮೋದಿ ಅವರು ಶ್ರೀಸಾಮಾನ್ಯರ ಪ್ರಧಾನಿಯಾಗಿ ಸಮಾಜದಲ್ಲಿ ನೊಂದವರು, ತುಳಿತಕ್ಕೊಳಗಾದವರು, ಮಹಿಳೆಯರು, ರೈತರು ಹಾಗೂ ಯುವಕರಿಗೆ ಭರವಸೆಯ ಬೆಳಕಾಗಿದ್ದಾರೆ.
>
> - ಕಿಶನ್‌ಪಾಲ್ ಗುರ್ಜರ್, ಕೇಂದ್ರ ಸಚಿವ.

ಗೃಹ ನಿರ್ಮಾಣ ಯೋಜನೆ ಸೇರಿದಂತೆ ವಿಮಾ ಯೋಜನೆಯ ಫಲ ಬಡಜನರಿಗೆ ನೇರವಾಗಿ ತಲುಪಿದೆ. ಬಡಜನರ ಕಣ್ಣೀರು ಒರೆಸುವ ಕೆಲಸವನ್ನು ಮೋದಿ ಸರ್ಕಾರ ಮಾಡುತ್ತಿದೆ. ವಿಕಸಿತ ಭಾರತದ ನಿರ್ಮಾಣಕ್ಕೆ ಬಿಜೆಪಿ ಸರ್ಕಾರ ಕಟಿಬದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಯ ನೂರಾರು ಫಲಾನುಭವಿಗಳು, ಆಶಾ, ಅಂಗನವಾಡಿ ಕಾರ್ಯಕರ್ತರು, ಉಜ್ವಲ ಯೋಜನೆ, ವಿಶ್ವಕರ್ಮ ಯೋಜನೆ ಫಲಾನುಭವಿಗಳು ಭಾಗವಹಿಸಿದ್ದರು. ಅಲ್ಲದೇ ನಬಾರ್ಡ್ ಎಜಿಎಂ ಸ್ಮಿತಾ, ಬ್ಯಾಂಕ್ ಆಫ್ ಬರೋಡಾ ಹಿರಿಯ ವ್ಯವಸ್ಥಾಪಕ ಅರುಣಕುಮಾರ್, ಪ್ರಶಾಂತ್, ತಾಪಂ ಇಓ ಸತೀಶ್, ತಹಸೀಲ್ದಾರ್ ನಿಸರ್ಗಪ್ರಿಯ, ಇನ್ಸ್‌ಪೆಕ್ಟರ್ ಸುಮಾರಾಣಿ, ಎಪಿಎಂಸಿ ಕಾರ್ಯದರ್ಶಿ ಸೈಯದ್ ರಫೀಕ್ ಅಹ್ಮದ್, ಬಿಜೆಪಿ ಮುಖಂಡ ಡಾ.ಸಿದ್ದರಾಮಯ್ಯ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಕೆ.ಜೆ.ವಿಜಯಕುಮಾರ್, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಭರತ್, ಪುಟ್ಟಣ್ಣ, ಮುಖಂಡ ಮಧುಸೂಧನ್, ಬ್ಯಾಂಕ್ ಆಫ್ ಬರೋಡಾ ಕೆ.ಆರ್.ಪೇಟೆ ಶಾಖೆ ವ್ಯವಸ್ಥಾಪಕ ಮನೋಜ್ ಶೆಟ್ಟಿ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆ ವ್ಯವಸ್ಥಾಪಕ ಗಂಗಾಧರ್, ಮನಮುಲ್ ನಿರ್ದೇಶಕ ಡಾಲುರವಿ, ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಟಿ.ಲೋಕೇಶ್, ಲೆನಿನ್ ಲೋಕೇಶ್, ಪುರಸಭೆ ಮಾಜಿ ಸದಸ್ಯ ಹೇಮಂತ್ ಕುಮಾರ್, ಫಲಾನುಭವಿಗಳಾದ ಕುಮಾರ್, ರೂಪೇಶಾಚಾರ್ ಸೇರಿದಂತೆ ಇನ್ನಿತರರಿದ್ದರು.

ಶ್ರೀರಾಮ ಮಂದಿರ ಉದ್ಘಾಟನೆ ಬಿಜೆಪಿ ಕಾರ್ಯಕ್ರಮವಲ್ಲ

ಕಾಂಗ್ರೆಸ್ಸಿಗರಿಗೆ ಕೇಂದ್ರ ಸಚಿವ ಕಿಶನ್ ಪಾಲ್ ಗುರ್ಜರ್ ತಿರುಗೇಟು



ಕೇಂದ್ರ ಸಚಿವ ಕಿಶನ್ ಪಾಲ್ ಗುರ್ಜರ್ ಕಾಂಗ್ರೆಸ್ ಮುಖಂಡ ಎಂ.ಎಸ್.ಆತ್ಮಾನಂದ ನಿವಾಸಕ್ಕೆ ತೆರಳಿ ಮಂತ್ರಾಕ್ಷತೆ ನೀಡಿದರು.

ಮಂಡ್ಯ, ಜ.11– ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಬಿಜೆಪಿ ಕಾರ್ಯಕ್ರಮವಲ್ಲ. ಅದು ಸಾಧು ಸಂತರ ಕಾರ್ಯಕ್ರಮ ಎಂದು ಕೇಂದ್ರ ಇಂಧನ ಹಾಗೂ ಕೈಗಾರಿಕಾ ರಾಜ್ಯ ಸಚಿವ ಕಿಶನ್ ಪಾಲ್ ಗುರ್ಜರ್ ಕಾಂಗ್ರೆಸ್ಸಿಗರಿಗೆ ತಿರುಗೇಟು ನೀಡಿದರು.

ಗುರುವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕಾಂಗ್ರೆಸ್ ಬಹಿಷ್ಕರಿಸುತ್ತಿದೆ ಕಾಂಗ್ರೆಸ್ ನಾಯಕರನ್ನು ಬಿಜೆಪಿ ನಾಯಕರು ಆಹ್ವಾನಿಸುವ ಅವಶ್ಯಕತೆ ಇಲ್ಲ ಎಂದು ಕಿಡಿಕಾರಿದರು.

ದೇಶದಲ್ಲಿ ಮೋದಿಯವರ ಗ್ಯಾರಂಟಿಗಳ ಬಗ್ಗೆ ಭರವಸೆ ಇದೆ. ಮೋದಿ ದೇಶದಲ್ಲಿ ರೈತರು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದವರಿಗೆ ಅನೇಕ ಜನಪರ ಯೋಜನೆಗಳನ್ನು ನೀಡಿದ್ದಾರೆ. ಮೋದಿ ಅವರ ಕಾರ್ಯವೈಖರಿಯಿಂದ ದೇಶವು ಆರ್ಥಿಕ ವ್ಯವಸ್ಥೆಯಲ್ಲಿ 10ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಬಂದಿದೆ ಎಂದರು.

ಸನಾತನ ಧರ್ಮ ವಿರೋಧಿಸುವ ಮೂಲಕ ಕಾಂಗ್ರೆಸ್ ತನ್ನಿಂದ ತಾನೇ ಪತನವಾಗುತ್ತಿದೆ. ಅವರಿಂದ ಅವರೇ ವಿನಾಶ ಹೊಂದುತ್ತಿದ್ದು, ಕಾಂಗ್ರೆಸ್ ಉತ್ತರ ಪ್ರದೇಶದಲ್ಲಿ ಒಂದು ಸೀಟ್ ಗೆಲ್ಲಲು ಆಗಲಿಲ್ಲ. ಸನಾತನ ಧರ್ಮ ವಿರೋಧ ಮಾಡುವ ಮೂಲಕ ಕಾಂಗ್ರೆಸ್ ದೇಶದಲ್ಲೇ ಸ್ವಯಂ ನಿರ್ಮೂಲನೆ ಆಗುತ್ತಿದೆ ಎಂದರು.

ರಾಜ್ಯದಲ್ಲಿ ಜೆಡಿಎಸ್ ಜೊತೆಗೆ ಬಿಜೆಪಿ ಹೊಂದಾಣಿಕೆ ಅವಶ್ಯಕತೆ ಇತ್ತೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ದೇಶದಲ್ಲಿ ಕಾಂಗ್ರೆಸ್ 'ಇಂಡಿಯಾ' ಮೈತ್ರಿಕೂಟದ ಮೂಲಕ ಮುಂಬರುವ ಸಂಸತ್ ಚುನಾವಣೆಯಲ್ಲಿ ಒಂದೆರಡು ಸ್ಥಾನ ಗೆಲ್ಲಲಾಗದ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಲು ಸಿದ್ಧತೆ ನಡೆಸುತ್ತಿದೆ. ಹೀಗಿರುವಾಗ ನಾವು ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡರೆ ತಪ್ಪೇನು? ಎಂದು ಪ್ರಶ್ನಿಸಿದರು.

ಬಿಜೆಪಿಗೆ ಬೆಂಬಲ ಸೂಚಿಸಿರುವ ಸಂಸದೆ ಸುಮಲತಾ ಪಕ್ಷದಿಂದ ಅಂತರ ಕಾಯ್ದುಕೊಂಡಿಲ್ಲ. ಕಳೆದ ಚುನಾವಣೆ ಸಮಯದಲ್ಲೂ ಸಕ್ರಿಯವಾಗಿದ್ದರು. ಶ್ರೀರಾಮ ಮಂದಿರ ಉದ್ಘಾಟನೆಗೆ ಮಂತ್ರಾಕ್ಷತೆ ವಿತರಣೆ ಬಿಜೆಪಿಯಿಂದ ಮಾಡುತ್ತಿರುವ ಕಾರ್ಯಕ್ರಮವಾಗಿದ್ದು, ಸುಮಲತಾ ಭಾಗಿಯಾಗಬೇಕೆಂದೇನಿಲ್ಲ. ಅವರು ನಮ್ಮ ಜೊತೆ ಇದ್ದಾರೆ ಎಂದು ಸ್ಪಷ್ಟಪಡಿಸಿದರು. ಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಅಶೋಕ್ ಜಯರಾಮ್, ಡಾ. ಇಂದ್ರೇಶ್, ಶ್ರೀಧರ್, ಸಿ.ಟಿ. ಮಂಜುನಾಥ್ ಉಪಸ್ಥಿತರಿದ್ದರು.

ಆತ್ಮಾನಂದರಿಗೆ ಬಿಜೆಪಿ ನಿಯೋಗದಿಂದ ಮಂತ್ರಾಕ್ಷತೆ

ಮಂಡ್ಯ: ನಗರದ ಬಿಜೆಪಿ ಕಚೇರಿಗೆ ಆಗಮಿಸಿದ ಕೇಂದ್ರ ಸಚಿವ ಕಿಶನ್‌ಪಾಲ್ ಗುರ್ಜರ್ ಸುದ್ದಿಗೋಷ್ಠಿ ಬಳಿಕ ಹಲವು ಮುಖಂಡರ ಮನೆಗಳಿಗೆ ಪಾದಯಾತ್ರೆಯಲ್ಲಿ ತೆರಳಿ ಶ್ರೀರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮ ಸಂಬಂಧಿಸಿದಂತೆ ಮಂತ್ರಾಕ್ಷತೆ ನೀಡಿದರು.

ಇದೇ ವೇಳೆ ಸುಭಾಷ್‌ನಗರದ ಬಿಜೆಪಿ ಕಚೇರಿ ರಸ್ತೆಯಲ್ಲಿರುವ ಮಾಜಿ ಸಚಿವ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಎಂ.ಎಸ್.ಆತ್ಮಾನಂದ ನಿವಾಸಕ್ಕೆ ತೆರಳಿ ಮಂತ್ರಾಕ್ಷತೆ ನೀಡಿದರು.

ಈ ವೇಳೆ 30ಕ್ಕೂ ಹೆಚ್ಚು ಬಿಜೆಪಿ ಮುಖಂಡರು ಶ್ರೀರಾಮನಿಗೆ ಜೈಕಾರ ಕೂಗುತ್ತಾ ಆತ್ಮಾನಂದ ನಿವಾಸಕ್ಕೆ ಆಗಮಿಸಿದರು. ಬಿಜೆಪಿ ಮುಖಂಡರ ದಂಡೇ ತಮ್ಮ ಮನೆಗೆ ಯಾವುದೇ ಮಾಹಿತಿ ಇಲ್ಲದೇ ಆಗಮಿಸಿದ್ದಕ್ಕೆ ಒಂದು ಕ್ಷಣ ವಿಚಲಿತರಾದ ಆತ್ಮಾನಂದ, ಬಳಿಕ ಮಂತ್ರಾಕ್ಷತೆ ನೀಡಲು ಬಂದಿರುವುದಾಗಿ ತಿಳಿಸಿದಾಗ ಆತ್ಮೀಯವಾಗಿ ಬರಮಾಡಿಕೊಂಡರು.

ಸಚಿವ ಕಿಶನ್‌ಪಾಲ್ ಗುರ್ಜರ್, ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್ ಸೇರಿದಂತೆ ಎಲ್ಲಾ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಇದೇ ಸಂದರ್ಭ ಕೇಂದ್ರ ಸಚಿವರಿಗೆ ಆತ್ಮಾನಂದರನ್ನು ಮುಖಂಡರು ಪರಿಚಯ ಮಾಡಿಕೊಟ್ಟರು. ಬಳಿಕ ಸಚಿವರಿಂದ ಮಂತ್ರಾಕ್ಷತೆ ಸ್ವೀಕರಿಸಿ, ಅವರನ್ನು ಸನ್ಮಾನಿಸಿದ ಆತ್ಮಾನಂದ ಮನೆ ಹೊರಗೆ ಬಂದು ಸಚಿವರನ್ನು ಬೀಳ್ಕೊಟ್ಟರು.

ಅಹವಾಲು ಸಲ್ಲಿಸಲು ಮನವಿ

ಮಂಡ್ಯ, ಜ.11– ಪರಿಶಿಷ್ಟ ಜಾತಿ, ವರ್ಗದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜ.31 ರಂದು ಬೆಳಗ್ಗೆ 10 ಗಂಟೆಗೆ ಜಿಪಂ ಕಾವೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ, ವರ್ಗದ ಕುಂದುಕೊರತೆ ಸಭೆ ಏರ್ಪಡಿಸಲು ಉದ್ದೇಶಿಸಲಾಗಿದೆ. ಜಿಲ್ಲಾ ವ್ಯಾಪ್ತಿಯ ನೋಂದಾಯಿತ ಪರಿಶಿಷ್ಟ ಜಾತಿ, ವರ್ಗದ ಸಂಘ/ಸಂಸ್ಥೆಯವರು ಅಹವಾಲುಗಳನ್ನು ಜಿಲ್ಲಾ ತಾಲೂಕು ಸಮಾಜ ಕಲ್ಯಾಣ ಇಲಾಖೆಗೆ ಜ.20ರೊಳಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

ಬೈಕ್‌ಗೆ ಕಾರು ಡಿಕ್ಕಿ: ಯುವಕ ಸಾವು



ಭಾರತೀನಗರ, ಜ.11– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಚಂದೂಪುರ ಗೇಟ್ ಬಳಿ ಜರುಗಿದೆ.


ಮಳವಳ್ಳಿ ತಾಲೂಕು ಹುಲ್ಲೇಗಾಲ ಗ್ರಾಮದ ನಿವಾಸಿ ಶ್ರೀನಿವಾಸ್ ಎಂಬುವರ ಪುತ್ರ ಪ್ರಜ್ವಲ್(20) ಸಾವನ್ನಪ್ಪಿದ ಯುವಕ. ಈತ ಭಾರತೀನಗರದಿಂದ ಹಲಗೂರು ರಸ್ತೆ ಮಾರ್ಗವಾಗಿ ಹುಲ್ಲೇಗಾಲ ಗ್ರಾಮಕ್ಕೆ ತನ್ನ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಎಸ್.ಐ.ಹೊನ್ನಲಗೆರೆ ಕಡೆಯಿಂದ ಇಗ್ಗಲೂರು ಕಡೆಗೆ ತೆರಳುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ತೀವ್ರ ಗಾಯಗೊಂಡ ಪ್ರಜ್ವಲ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಈ ವೇಳೆ ಸ್ಥಳಕ್ಕಾಗಮಿಸಿದ ಕೆ.ಎಂ.ದೊಡ್ಡಿ ಪೊಲೀಸರು ಪರಿಶೀಲನೆ ನಡೆಸಿ, ಕಾರನ್ನು ವಶಕ್ಕೆ ಪಡೆದು ಶವವನ್ನು ಭಾರತೀನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಈ ಸಂಬಂಧ ಕೆ.ಎಂ.ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಂದ್ರ ನಿಯೋಗದಿಂದ ಕೆಆರ್‌ಎಸ್ ಅಧ್ಯಯನ

ರೈತರ ಸಮಸ್ಯೆ, ಡ್ಯಾಂ ಅಭಿವೃದ್ಧಿಗೆ ಮಾಜಿ ಸಚಿವ ಸಿಎಸ್‌ಪಿ ಮನವಿ



ಕೆಆರ್‌ಎಸ್‌ಗೆ ಆಗಮಿಸಿದ ಕೇಂದ್ರದ ಜಲ ಸಂಪನ್ಮೂಲಗಳ ಸಂಸದೀಯ ನಿಯೋಗವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಎಂಎಲ್‌ಸಿ ಶ್ರೀಕಂಠೇಗೌಡ ಸನ್ಮಾನಿಸಿದರು.



ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ಗೆ ಕೇಂದ್ರದ ಜಲ ಸಂಪನ್ಮೂಲಗಳ ಸಂಸದೀಯ ನಿಯೋಗ ಭೇಟಿ ನೀಡಿ, ಜಲಾಶಯದ ಸ್ಥಿತಿಗತಿ ಅಧ್ಯಯನ ನಡೆಸಿತು.

ಶ್ರೀರಂಗಪಟ್ಟಣ, ಜ.11– ತಾಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಕೇಂದ್ರದ ಜಲ ಸಂಪನ್ಮೂಲಗಳ ಸಂಸದೀಯ ಸ್ಥಾಯಿ ಸಮಿತಿ ತಂಡ ಭೇಟಿ ನೀಡಿ ಜಲಾಶಯದ ಸ್ಥಿತಿಗತಿ ಅಧ್ಯಯನ ನಡೆಸಿತು.

ಕೇಂದ್ರ ತಂಡವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ನೇತೃತ್ವದಲ್ಲಿ ಅಧಿಕಾರಿಗಳ ನಿಯೋಗ ಸ್ವಾಗತಿಸಿತು.

ಗುಜರಾತ್ ಸಂಸದ ಪರ್‌ಬಾತ್‌ಬಾಯಿ ಸವಾಬಾಯಿ ಪಟೇಲ್ ನೇತೃತ್ವದಲ್ಲಿ 14 ಜನರ ತಂಡ ಭೇಟಿ ನೀಡಿ ಕೆಆರ್‌ಎಸ್ ಜಲಾಶಯ ವೀಕ್ಷಿಸಿ, ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು. ಇದೇ ವೇಳೆ ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯ ಡ್ಯಾಂಗಳ ಸ್ಥಿತಿಗತಿ, ಈ ಭಾಗದ ರೈತರ ಸಮಸ್ಯೆ, ಡ್ಯಾಂ ಮತ್ತು ಬೃಂದಾವನ ಗಾರ್ಡನ್ ಅಭಿವೃದ್ಧಿಗೆ ಬೇಕಿರುವ ಅಗತ್ಯ ಅನುದಾನ ಕೋರಿ ಸಿ.ಎಸ್. ಪುಟ್ಟರಾಜು ವಿಶೇಷ ಮನವಿ ಸಲ್ಲಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಬುಧವಾರ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ರಾಜ್ಯದ ಕುಡಿಯುವ ನೀರಿನ ಸಮಸ್ಯೆ, ಹಾಗೂ ಹಳೇ ಮೈಸೂರು ಪ್ರಾಂತ್ಯದ ಜನ ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಮಿತಿ ಸದಸ್ಯರಿಗೆ ಮನದಟ್ಟು ಮಾಡಿಕೊಡುವಂತೆ ನನಗೆ ಮತ್ತು ಕೆ.ಟಿ. ಶ್ರೀಕಂಠೇಗೌಡರಿಗೆ ಸೂಚಿಸಿದ್ದರು. ಅದರಂತೆ ಇಂದು ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಇಲ್ಲಿನ ನೀರಿನ ಸಮಸ್ಯೆಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ ಎಂದರು.

ಮುಖ್ಯವಾಗಿ ಮೇಕೆದಾಟು ಯೋಜನೆ ಅನುಷ್ಠಾನ, ಇಲ್ಲಿನ ವಸ್ತುಸ್ಥಿತಿ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವಂತೆ ಮನವಿ ಮಾಡಿದ್ದೇವೆ. ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು ಈ ಹಿಂದಿನಿಂದಲೂ ಕೇಂದ್ರದ ನಿಯೋಗ ಕಳುಹಿಸಿ ರಾಜ್ಯದ ನೀರಿನ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವಂತೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಇಂದು ಜಲ ಸಂಪನ್ಮೂಲಗಳ ಸಂಸದೀಯ ಸ್ಥಾಯಿ ಸಮಿತಿ ತಂಡ ಭೇಟಿ ನೀಡಿದೆ. ಈ ತಂಡ ಕೇಂದ್ರದ ಗಮನ ಸೆಳೆದು ರಾಜ್ಯದ ನೀರಿನ ಸಮಸ್ಯೆ ಪರಿಹರಿಸುವ ವಿಶ್ವಾಸವಿದೆ ಎಂದರು. ಈ ವೇಳೆ ಸಂಸದೆ ಸುಮಲತಾ ಗೈರಾಗಿದ್ದರು.

ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ-2024

ಮೈಸೂರು ನಗರ ಪೊಲೀಸರಿಂದ ರಸ್ತೆ ಸುರಕ್ಷತೆ ಜಾಗೃತಿಗೆ ಬೈಕ್ ರ್‍ಯಾಲಿ



ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಮೈಸೂರು ನಗರ ಪೊಲೀಸ್ ವತಿಯಿಂದ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿಗೆ ಪೊಲೀಸ್ ಅಧಿಕಾರಿಗಳು ಚಾಲನೆ ನೀಡಿದರು.

ಮೈಸೂರು, ಜ.11(ಎಸ್‌ಬಿಡಿ)– ಮೈಸೂರು ನಗರ ಪೊಲೀಸರು ಗುರುವಾರ ಬೈಕ್ ರ್‍ಯಾಲಿ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಮೈಸೂರು ನಗರ ಸಂಚಾರ ಪೊಲೀಸ್ ವತಿಯಿಂದ ಮೂವತ್ತೈದನೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ಈ ಬೈಕ್ ರ್‍ಯಾಲಿಯಲ್ಲಿ ಅಧಿಕಾರಿಗಳು ಸೇರಿದಂತೆ ನೂರಾರು ಮಂದಿ ಪೊಲೀಸರು ಭಾಗಿಯಾಗಿದ್ದರು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದ ವೇದಿಕೆಯಲ್ಲಿ ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ಎಸಿಪಿಗಳಾದ ಸಂಚಾರ ವಿಭಾಗದ ಹೆಚ್.ಪರಶುರಾಮಪ್ಪ, ವಿಜಯನಗರ ಉಪವಿಭಾಗದ ಗಜೇಂದ್ರ ಪ್ರಸಾದ್ ಹಾಗೂ ನರಸಿಂಹರಾಜ ಉಪವಿಭಾಗದ ಅಶ್ವಥ್ ನಾರಾಯಣ್ ಅವರು ಗಿಡಕ್ಕೆ ನೀರೆರೆಯುವ ಮೂಲಕ ಸಾಂಕೇತಿಕವಾಗಿ ಬೈಕ್ ರ್‍ಯಾಲಿಯನ್ನು ಉದ್ಘಾಟಿಸಿದರು.

ಇದೇ ವೇಳೆ ರಸ್ತೆ ಸುರಕ್ಷತಾ ನಿಯಮಗಳ ಕರಪತ್ರವನ್ನು ಬಿಡುಗಡೆ ಮಾಡಲಾಯಿತು. ಜೊತೆಗೆ ಮೂರು ದಶಕಗಳಿಂದ ಟ್ರಾಫಿಕ್ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿರುವ 79 ವರ್ಷದ ಮಹೇಶ್ವರ್ ಅವರನ್ನು ಅಧಿಕಾರಿಗಳು ಆತ್ಮೀಯವಾಗಿ ಅಭಿನಂದಿಸಿದರು.

ಬಳಿಕ ರಸ್ತೆ ಸಂಚಾರ ನಿಯಮಗಳ ಪಾಲನೆ ಅಗತ್ಯ ಹಾಗೂ ನಿಯಮ ಉಲ್ಲಂಘನೆಯಿಂದ ಸಂಭವಿಸುವ ಅಪಘಾತ–ಅವಘಡಗಳನ್ನು ಎಲ್‌ಇಡಿ ಪರದೆಯಲ್ಲಿ ಬಿತ್ತರಿಸುವ ವಿಶೇಷ ವಾಹನ ಸಂಚಾರಕ್ಕೆ ಚಾಲನೆ ನೀಡಲಾಯಿತು. ಇದೇ ವೇಳೆ ಅಧಿಕಾರಿಗಳು ಬೈಕ್ ರ್‍ಯಾಲಿಗೆ ಹಸಿರು ನಿಶಾನೆ ತೋರಿದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಚಾಮರಾಜ ವೃತ್ತ, ಜಯಚಾಮರಾಜೇಂದ್ರ ವೃತ್ತ, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಏಕಲವ್ಯ ವೃತ್ತ, ಕೌಟಿಲ್ಯ ವೃತ್ತ, ಹುಣಸೂರು ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ದಾಸಪ್ಪ ವೃತ್ತ, ರೈಲ್ವೆ ನಿಲ್ದಾಣ, ಜೆ.ಕೆ.ಗ್ರೌಂಡ್ ಜಂಕ್ಷನ್, ಆಯುರ್ವೇದ ಆಸ್ಪತ್ರೆ ವೃತ್ತ, ಇರ್ವಿನ್ ರಸ್ತೆ, ಪೋಸ್ಟ್ ಆಫೀಸ್ ಜಂಕ್ಷನ್, ಅಶೋಕ ರಸ್ತೆ ಮೂಲಕ ಸಾಗಿ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಮುಕ್ತಾಯಗೊಂಡಿತು. ರಸ್ತೆ ಸುರಕ್ಷತೆ ಸಂದೇಶ ಸಾರುವ ವಿಶೇಷ ವಾಹನಗಳು ರ್‍ಯಾಲಿಯಲ್ಲಿ ಸಾಗಿದವು.

ಮಕ್ಕಳಿಗೂ ಹೆಲ್ಮೆಟ್ ಧರಿಸಿ...

> ಜೀವ ರಕ್ಷಣೆ ಹಾಗೂ ಸುಸ್ಥಿರ ಜೀವನಕ್ಕೆ ಸಂಚಾರ ನಿಯಮಗಳನ್ನು ಪಾಲಿಸುವುದು ಅಗತ್ಯ. ನಿಯಮ ಉಲ್ಲಂಘನೆಯಿಂದ ಅಪಘಾತ ಸಂಭವಿಸಿ ಪ್ರಾಣ ಹೋದರೆ ಇಡೀ ಕುಟುಂಬ ಅನಾಥವಾಗುತ್ತದೆ. ಅಂಗ ವೈಕಲ್ಯವಾದರೆ ಜೀವನದುದ್ದಕ್ಕೂ ಕೊರಗಬೇಕಾಗುತ್ತದೆ. ದ್ವಿಚಕ್ರ ವಾಹನದಲ್ಲಿ ಪತಿ–ಪತ್ನಿ ಹೆಲ್ಮೆಟ್ ಧರಿಸಿರುತ್ತಾರೆ. ಆದರೆ ತಮ್ಮ ಪುಟ್ಟ ಮಗುವಿಗೆ ಹೆಲ್ಮೆಟ್ ಹಾಕಿರುವುದಿಲ್ಲ. ದಯಮಾಡಿ ಮಗುವಿಗೂ ಹೆಲ್ಮೆಟ್ ಧರಿಸಿ. ಹೆಲ್ಮೆಟ್ ಧರಿಸದ ಕಾರಣಕ್ಕೆ ಮಕ್ಕಳು ಸಾವನ್ನಪ್ಪಿರುವ ಪ್ರಕರಣಗಳು ಸಾಕಷ್ಟು ನಡೆದಿವೆ. ಎಚ್ಚರವಿರಲಿ. –ಎಂ.ಮುತ್ತುರಾಜ್, ಡಿಸಿಪಿ

ಜೀವ, ಜೀವನ ಅತ್ಯಮೂಲ್ಯ

> ಜೀವ ಮತ್ತು ಜೀವನ ಅತ್ಯಮೂಲ್ಯ. ವಾಹನಗಳಲ್ಲಿ ಓಡಾಡುವಾಗ ಸಂಚಾರ ನಿಯಮವನ್ನು ಖಂಡಿತವಾಗಿ ಪಾಲಿಸಬೇಕು. ನಿಯಮ ಉಲ್ಲಂಘನೆ ಹಾಗೂ ಅಜಾಗರೂಕ ಚಾಲನೆ ಯಿಂದಲೇ ಹೆಚ್ಚು ಅಪಘಾತ ನಡೆಯುತ್ತವೆ. –ಎಸ್.ಜಾಹ್ನವಿ, ಡಿಸಿಪಿ

ಇಂದು ದಸರಾ ವಸ್ತು ಪ್ರದರ್ಶನಕ್ಕೆ ತೆರೆ



ಮೈಸೂರು, ಜ.11(ಎಸ್‌ಬಿಡಿ)– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಲಾಗಿದ್ದ 90 ದಿನಗಳ ದಸರಾ ವಸ್ತುಪ್ರದರ್ಶನಕ್ಕೆ ಶುಕ್ರವಾರ ತೆರೆ ಬೀಳಲಿದೆ.

ಪ್ರಾಧಿಕಾರದ ಆವರಣದ ಪಿ. ಕಾಳಿಂಗರಾವ್ ಕಲಾ ವೇದಿಕೆಯಲ್ಲಿ ಶುಕ್ರವಾರ ಸಂಜೆ 6.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ. ಇದೇ ವೇಳೆ ಪ್ರಮಾಣ ಪತ್ರ ವಿತರಿಸಲಾಗುವುದು ಎಂದು ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಓ) ರಾಜೇಶ್ ಜಿ.ಗೌಡ ತಿಳಿಸಿದ್ದಾರೆ.

ದಸರಾ ಮಹೋತ್ಸವದ ಅಂಗವಾಗಿ ದಸರಾ ವಸ್ತು ಪ್ರದರ್ಶನಕ್ಕೆ ಕಳೆದ ಅ.15ರಂದು ಚಾಲನೆ ದೊರಕಿತ್ತು. 90 ದಿನಗಳ ಕಾಲ ಪ್ರವಾಸಿಗರು, ಸ್ಥಳೀಯರು ಸೇರಿದಂತೆ ನಿತ್ಯ ಸಾವಿರಾರು ಮಂದಿ ಭೇಟಿ ನೀಡಿದ್ದರು. ಭೇಟಿ ನೀಡುವವರ ಸಂಖ್ಯೆ ಹೆಚ್ಚಿದ್ದರಿಂದ ಹೆಚ್ಚುವರಿಯಾಗಿ 15 ದಿನ ವಿಸ್ತರಿಸಲು ಗುತ್ತಿಗೆದಾರರು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಸಿಇಓ ಸರ್ಕಾರಕ್ಕೆ ವರದಿ ನೀಡಿದ್ದರು. ಆದರೆ ಸರ್ಕಾರ ದಸರಾ ವಸ್ತು ಪ್ರದರ್ಶನ ವಿಸ್ತರಣೆಗೆ ಅನುಮತಿ ನೀಡದ ಕಾರಣ ನಿಗದಿಯಂತೆ ಶುಕ್ರವಾರ ಮುಕ್ತಾಯಗೊಳಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಈ ಬಾರಿ ಬೆಂಗಳೂರಿನ ಫನ್ ವರ್ಲ್ಡ್ ಇಂಡಿಯಾ ರೆಸಾರ್ಟ್ ಪ್ರೈ.ಲಿ. 11.52 ಕೋಟಿ ರೂ.ಗೆ ಟೆಂಡರ್ ಪಡೆದುಕೊಂಡಿತ್ತು. ಕಳೆದ ವರ್ಷವೂ ಇದೇ ಸಂಸ್ಥೆ 8.08 ಕೋಟಿ ರೂ.ಗೆ ಗುತ್ತಿಗೆ ಪಡೆದಿತ್ತು.



ಬನ್ನೂರಿನಲ್ಲಿ ಆಯೋಧ್ಯೆಯ ಶ್ರೀರಾಮ ಮಂದಿರದ ದಿವ್ಯ ಮಂತ್ರಾಕ್ಷತೆಯನ್ನು ದೊಡ್ಡ ಅಂಗಡಿ ಬೀದಿಯಲ್ಲಿ ಪ್ರತಿ ಮನೆ ಮನೆಗೂ ಮಹಿಳಾ ಸಂಘಟನೆಯ ಸದಸ್ಯರು ವಿತರಣೆ ಮಾಡಿದರು. ಬನ್ನೂರು ಟೌನ್ ಬಿಜೆಪಿ ಅಧ್ಯಕ್ಷ ಪಿ.ಪ್ರಭಾಕರ್, ಪುರಸಭಾ ಸದಸ್ಯೆ ಶೋಭಾ ಸತೀಶ್, ಅರ್ಚಕ ಸತೀಶ್, ನಾಗರಾಜು, ಗಣೇಶ್, ಭಾರ್ಗವಿ, ಪದ್ಮ, ವೀಣಾ, ರೂಪಾ, ಶೀಲಾ, ಸೇರಿದಂತೆ ಎಲ್ಲಾ ಮಹಿಳಾ ಸಂಘಟನೆ ಒಕ್ಕೂಟದ ಸದಸ್ಯರು ಹಾಜರಿದ್ದರು.

ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಮಂಡ್ಯ, ಜ.11– ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಜ.12 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಬೆಳಗ್ಗೆ 10.30ಕ್ಕೆ ಶ್ರೀಕ್ಷೇತ್ರ ಆದಿಚುಂಚನಗಿರಿ ಬಿಜಿಎಸ್ ಸಭಾ ಭವನದಲ್ಲಿ ನಡೆಯುವ ರೈತ ಸಂಗಮ ಮತ್ತು ಕೃಷಿ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ನಾಗಮಂಗಲದ ತಾಲೂಕು ಕಚೇರಿ (ಮಿನಿ ವಿಧಾನಸೌಧ)ಯಲ್ಲಿ ಸಾರ್ವಜನಿಕರ ಭೇಟಿ ಮಾಡಲಿದ್ದಾರೆ. ಸಂಜೆ 4.30 ಗಂಟೆಗೆ ಶಿಕಾರಿಪುರ ಗ್ರಾಮದಲ್ಲಿ ಆಯುಷ್ ಇಲಾಖೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 5.30ಕ್ಕೆ ನಾಗಮಂಗಲ ತಾಲೂಕು ಕಚೇರಿಯಲ್ಲಿ ಬಗರ್ ಹುಕುಂ ಸಮಿತಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ 7 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಉಪ ತಹಸೀಲ್ದಾರ್, ರಾಜಸ್ವ ನಿರೀಕ್ಷಕರಿಗೆ ಬೀಳ್ಕೊಡುಗೆ



ಗಾವಡಗೆರೆ ನೆಮ್ಮದಿ ಕೇಂದ್ರದಲ್ಲಿ ವೆಂಕಟೇಶ್ ಹಾಗೂ ಭಾಸ್ಕರ್ ರವರನ್ನು ಉಪತಹಸಿಲ್ದಾರ್ ಅರುಣ್ ಕುಮಾರ್ ಸನ್ಮಾನಿಸಿ ಬೀಳ್ಕೊಟ್ಟರು.

ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಉಪ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡ ವೆಂಕಟೇಶ್ ಹಾಗೂ ರಾಜಸ್ವ ನಿರೀಕ್ಷಕ ಭಾಸ್ಕರ್ ಅವರನ್ನು ಗಾವಡಗೆರೆ ನೆಮ್ಮದಿ ಕೇಂದ್ರದಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು.

ಉಪತಹಸಿಲ್ದಾರ್ ಅರುಣ್ ಕುಮಾರ್, ರಾಜಸ್ವ ನಿರೀಕ್ಷಕ ಹೇಮಂತ್ ಕುಮಾರ್, ಗ್ರಾಮ ಆಡಳಿತ ಅಧಿಕಾರಿಗಳಾದ ಶ್ರೀವತ್ಸ, ವಿಜಯ್ ಕುಮಾರ್, ವಿಶಾಲ್, ಚೈತ್ರ, ಪಲ್ಲವಿ, ಕಿರಂಗೂರ್ ಸ್ವಾಮಿ, ಹಾಗೂ ಸಿಬ್ಬಂದಿವರ್ಗ ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್ ಪೋಸ್ಟ್‌ನಲ್ಲಿರುವ ಮೈಮುಲ್ ಉಪ ಕಛೇರಿಯಲ್ಲಿ ಮೈಸೂರು ಜಿಲ್ಲಾ ಹಾಲು ಒಕ್ಕೂಟದ 2024 ಸಾಲಿನ ಕ್ಯಾಲೆಂಡರ್ ಅನ್ನು ಮೈಮುಲ್ ನಿರ್ದೇಶಕ ಈರೇಗೌಡ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮೈಮುಲ್ ನಿರ್ದೇಶಕಿ ದ್ರಾಕ್ಷಾಯಿಣಿ ಬಸವರಾಜಪ್ಪ, ವಿಸ್ತರಣಾಧಿಕಾರಿಗಳಾದ ಆರೀಫ್ ಇಕ್ಬಾಲ್, ರಾಮಪ್ಪ ಬಾರ್ಕಿ, ಜಯಂತ್ ಕುಮಾರ್, ಜಗದಂಭ, ಯೋಗೀಶ್, ಸಾಗರೆ ಸಕಲೇಶ್, ಹಂಪಾಪುರ ನಾಗೇಶ್, ಬಿರೇಗೌಡ, ಜಗದೀಶ್, ಶೇಖರ್, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಗಳು ಹಾಜರಿದ್ದರು.

ಮೈಸೂರು ಮಿತ್ರ

ಮೊದಲ ಟಿ20: ಅಫ್ಘಾನ್ ವಿರುದ್ಧ ಭಾರತಕ್ಕೆ ಜಯ



ಮೊಹಾಲಿ, ಜ.11– ಶಿವಂ ದುಬೆ ಅವರ ಅರ್ಧ ಶತಕದ ನೆರವಿನಿಂದ ಭಾರತ ಮೊದಲ ಟಿ20 ಪಂದ್ಯದಲ್ಲಿ ಅಫ್ಘಾನಿಸ್ತಾನದ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದಲ್ಲಿ ಮುನ್ನಡೆ ಪಡೆದಿದೆ.

ಇಲ್ಲಿನ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಫ್ಘಾನಿಸ್ತಾನ ನೀಡಿದ 159 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 17.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಖಾತೆ ತೆರೆಯುವ ಮುನ್ನವೇ ರನೌಟ್ ಆಗಿ ಪೆವಿಲಿಯನ್ ಸೇರಿಕೊಂಡರು. ತಂಡದ ಮೊತ್ತ 28 ರನ್ ಆಗುವಷ್ಟರಲ್ಲಿ 5 ಬೌಂಡರಿ ಒಳಗೊಂಡ 23 ರನ್ ಗಳಿಸಿದ ಶುಭ್‌ಮನ್ ಗಿಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ತಿಲಕ್ ವರ್ಮಾ 26 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ಶಿವಂ ದುಬೆ 40 ಎಸೆತಗಳಲ್ಲಿ 2 ಸಿಕ್ಸರ್, 5 ಬೌಂಡರಿ ಒಳಗೊಂಡ 60 ರನ್ ಗಳಿಸಿದರು. ಉಳಿದಂತೆ ಜಿತೇಶ್ ಶರ್ಮಾ 31, ರಿಂಕು ಶರ್ಮಾ 16 ರನ್ ಗಳಿಸಿದರು. ಅಫ್ಘಾನ್ ಪರ ಮುಜೀಬ್ ಉರ್ ರೆಹಮಾನ್ 2, ಅಜ್ಮತುಲ್ಲಾ ಒಮರ್ಜಾಯ್ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 20 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ತಂಡದ ಪರ ಮೊಹಮ್ಮದ್ ನಬಿ 42, ಅಜ್ಮತ್‌ವುಲ್ಲಾ ಒಮರ್ಜಾಯ್ 29, ಇಬ್ರಾಹಿಂ ಝರ್ದಾನ್ 25, ಗುರ್ಬಜ್ 23, ನಜಿಬುಲ್ಲಾ 19 ರನ್ ಗಳಿಸಿದರು. ಭಾರತದ ಪರ ಅಕ್ಷರ್ ಪಟೇಲ್, ಮುಖೇಶ್ ಕುಮಾರ್ ತಲಾ 2, ಶಿವಂ ದುಬೆ 1 ವಿಕೆಟ್ ಪಡೆದರು. ಶಿವಂ ದುಬೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಡಿಸಿ ಇಲೆವೆನ್ ತಂಡ ಚಾಂಪಿಯನ್



ಮೈಸೂರು, ಜ.11(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಫೈಯರ್ ರೇಂಜ್ ಮೈದಾನದಲ್ಲಿ ಗುರುವಾರ ನಡೆದ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಡಿಸಿ ಇಲೆವೆನ್ ತಂಡ ಚಾಂಪಿಯನ್ ಆಯಿತು.

ಸಿಪಿ ಇಲೆವೆನ್ ತಂಡದ ವಿರುದ್ಧ ನಡೆದ ಫೈನಲ್ ಪಂದ್ಯದಲ್ಲಿ ಡಿಸಿ ಇಲೆವೆನ್ 10 ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಚಾಂಪಿಯನ್ ಆದರೆ, ಸಿಪಿ ಇಲೆವೆನ್ ತಂಡ ರನ್ನರ್ ಅಪ್ ಆಯಿತು. ಮೊದಲು ಬ್ಯಾಟಿಂಗ್ ಮಾಡಿದ ಡಿಸಿ ಇಲೆವೆನ್ ತಂಡ ನಿಗದಿತ 10 ಓವರ್‌ಗಳಲ್ಲಿ 128 ರನ್ ಗಳಿಸಿತು. 129ರನ್‌ಗಳ ಗುರಿ ಬೆನ್ನತ್ತಿದ ಸಿಪಿ ಇಲೆವೆನ್ ತಂಡ ನಿಗದಿತ 10 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 119 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಎಸ್‌ಪಿ ಇಲೆವೆನ್ ತಂಡ ಮೂರನೇ ಸ್ಥಾನ ಪಡೆದರೆ, ಜಿಲ್ಲಾ ಪತ್ರಕರ್ತರ ತಂಡ ನಾಲ್ಕನೆ ಸ್ಥಾನ ಪಡೆಯಿತು.

ನಿಯಮಬಾಹಿರವಾಗಿ ರೈತನ ಆಸ್ತಿ ಹರಾಜು ಆರೋಪ

ಜ.16ಕ್ಕೆ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ರೈತ ಸಂಘ ಮುತ್ತಿಗೆ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿದರು.

ಮೈಸೂರು, ಜ.11(ಎಂಟಿವೈ)– ಕೆಆರ್.ನಗರ ತಾಲೂಕಿನ ಮಾರ್ಚಳ್ಳಿ ಗ್ರಾಮದ ಪಾಪೇಗೌಡ ಅವರ ಪುತ್ರ ದೊರೆಸ್ವಾಮಿ ಎಂಬುವರ ಆಸ್ತಿ ಕಬಳಿಸುವ ಹುನ್ನಾರದಿಂದ ನಿಯಮ ಉಲ್ಲಂಘಿಸಿ ಏಕ ವ್ಯಕ್ತಿ ಹರಾಜು ಪ್ರಕ್ರಿಯೆ ನಡೆಸಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಪ್ರಧಾನ ಕಚೇರಿಗೆ ಜ.16ರಂದು ಮುತ್ತಿಗೆ ಹಾಕಿ ಪ್ರತಿಭಟಿಸುತ್ತಿರುವುದಾಗಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೊರೆಸ್ವಾಮಿ ಅವರು 2013ರಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ ಪಿಎಂಇಜಿಪಿ ಯೋಜನೆ ಅಡಿಯಲ್ಲಿ 15 ಲಕ್ಷ ರೂ. ಸಾಲ ಪಡೆದಿದ್ದರು. ಬಳಿಕ ಅವರು 18,98,000 ರೂ. ಸಾಲದ ಮೊತ್ತ ಬ್ಯಾಂಕ್‌ಗೆ ಕಟ್ಟಿದ್ದಾರೆ. ಆದರೆ, ಬ್ಯಾಂಕ್ ಅಧಿಕಾರಿಗಳು ರೈತ ದೊರೆಸ್ವಾಮಿ ಅವರ ಮನೆಯನ್ನು ಕಾನೂನು ಬಾಹಿರವಾಗಿ ಏಕ ವ್ಯಕ್ತಿಗೆ ಹರಾಜು ಹಾಕಿದ್ದಾರೆ. ಹೀಗಾಗಿ ರೈತನಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಜ.16ರಂದು ಬೆಳಗ್ಗೆ 11ಕ್ಕೆ ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿನ ಬ್ಯಾಂಕ್ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸುವುದಾಗಿ ತಿಳಿಸಿದರು.

ರೈತನ ಸುಮಾರು ನಾಲ್ಕು ಕೋಟಿ ಬೆಲೆ ಬಾಳುವ ಮೂಲೆ ನಿವೇಶನದಲ್ಲಿನ ಮನೆಯನ್ನು ಏಕ ವ್ಯಕ್ತಿಗೆ ಅತಿ ಕಡಿಮೆ ಬೆಲೆಗೆ ಹರಾಜು ಮಾಡಲಾಗಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ನಾಗನಹಳ್ಳಿ ವಿಜಯೇಂದ್ರ, ನಾಗನಹಳ್ಳಿ ಚಂದ್ರಶೇಖರ್ ಹಾಗೂ ಸಂತ್ರಸ್ತ ರೈತನ ತಂದೆ ಪಾಪೇಗೌಡ ಇದ್ದರು.

ಕೊನೆಗೂ ಕರವೇ ಅಧ್ಯಕ್ಷ ನಾರಾಯಣಗೌಡ ಜೈಲಿನಿಂದ ಬಿಡುಗಡೆ



ಬೆಂಗಳೂರು, ಜ.11– ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಕಡ್ಡಾಯ ಬಳಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿರುವುದು ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯಾಧ್ಯಕ್ಷ ಟಿ.ಎನ್.ನಾರಾಯಣಗೌಡ ಕೊನೆಗೂ ಜೈಲಿನಿಂದ ಬಿಡುಗಡೆಯಾಗಿದ್ದಾರೆ.ನಾಮಫಲಕ ಅಳವಡಿಕೆ ವಿಚಾರದಲ್ಲಿ ಪ್ರತಿಭಟನೆ ನಡೆಸಿ ಚಿಕ್ಕಜಾಲ ಠಾಣಾ ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದ ನಾರಾಯಣಗೌಡ ಅವರು ಜಾಮೀನು ಮೇಲೆ ಮಂಗಳವಾರ ಜೈಲಿನಿಂದ ಬಿಡುಗಡೆಯಾಗುತ್ತಿದ್ದಂತೆ 2017ರಲ್ಲಿ ಮೆಟ್ರೊ ನಿಲ್ದಾಣಕ್ಕೆ ಹಾನಿ ಮಾಡಿದ್ದ ಪ್ರಕರಣ ಸಂಬಂಧ ಕುಮಾರಸ್ವಾಮಿ ಲೇಔಟ್ ಠಾಣಾ ಪೊಲೀಸರು ವಶಕ್ಕೆ ಪಡೆದಿದ್ದ ಕಾರಣ ಅವರು ಮತ್ತೆ ಜೈಲು ಸೇರಿದ್ದರು. ಈ ಹಿನ್ನೆಲೆಯಲ್ಲಿ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆಯನ್ನು ಬುಧವಾರ ನಡೆಸಿದ 30ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ಜಿ.ತಿಮ್ಮಯ್ಯ ಅವರು ಜಾಮೀನು ಮನವಿಯನ್ನು ಪುರಸ್ಕರಿಸಿದರು.

ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ

●ಚಿಣ್ಣರ ಕಲಿಕೆ ಜೊತೆಗೆ ಮಸ್ತ್ ಮನರಂಜನೆ ●ಮಕ್ಕಳ ಮುದ್ದು ಮಾತಿಗೆ ಮಾರುಹೋದ ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ ●ಎಲ್ಲಾ ಪಾತ್ರಗಳನ್ನು ಸ್ವತಃ ನಿರ್ವಹಿಸಿ ನೆರೆದಿದ್ದವರಲ್ಲಿ ಅಚ್ಚರಿ ಮೂಡಿಸಿದ ಕಂದಮ್ಮಗಳು





ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಗುರುವಾರ ನಡೆದ 'ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ'ದಲ್ಲಿ ಇನ್ಫೋಸಿಸ್ ಫೌಂಡೇಶನ್‌ನ ಡಾ.ಸುಧಾಮೂರ್ತಿ ಅವರು ತಮ್ಮ ಮನೆಯ ಗೋಪಿ(ಶ್ವಾನ) ಜೊತೆ ಕುಳಿತು 'ದಿ ಗೋಪಿ ಡೈರೀಸ್ ಪುಸ್ತಕ' ಬರೆದ ಸಂದರ್ಭವನ್ನು ತಿಳಿಸಿದರು. ಮೈಸೂರು ಬುಕ್ ಕ್ಲಬ್ ಮತ್ತು ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿದ್ದ ಮಕ್ಕಳು ಹಾಗೂ ಪೋಷಕರನ್ನು ಕಾಣಬಹುದು

ಮೈಸೂರು, ಜ.11(ಎಂಕೆ)– ಮೈಸೂರಿನಲ್ಲಿ ಚಿಣ್ಣರ ಚಿಲಿಪಿಲಿ... ಕಥೆ, ಪದ್ಯ, ಹಾಡು, ಬೊಂಬೆಯಾಟ, ಮ್ಯಾಜಿಕ್ ಶೋಗೆ ಪೋಷಕರೊಡಗೂಡಿ ಮಾರು ಹೋದ ಪುಟಾಣಿಗಳು... ಗೋಪಿಯ ಚುರುಕುತನಕ್ಕೆ ಬೆರಗಾಗಿ, ಜೀವನದ ಪಾಠ ಆಲಿಸಿ, ತಲೆತೂಗಿದ ಮಕ್ಕಳ ಅಂದ–ಚಂದ ನೋಡಲು ಬಲು ಆನಂದ...!

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಬುಕ್ ಕ್ಲಬ್ ಮತ್ತು ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ'ದಲ್ಲಿ ಮಕ್ಕಳದ್ದೇ ಕಾರುಬಾರು. ನಿರೂಪಣೆ, ಸ್ವಾಗತ, ಅತಿಥಿಗಳ ಪರಿಚಯದೊಂದಿಗೆ ಪ್ರೌಢಿಮೆ ಮೆರೆದ ಪುಟಾಣಿಗಳು ಎಲ್ಲರನ್ನು ನಿಬ್ಬೆರಗಾಗಿಸಿದರು.

ಮೂರು ವೇದಿಕೆಗಳಲ್ಲಿ ಏಕಕಾಲಕ್ಕೆ ಚಿಣ್ಣರಿಗೆ ಕಥೆ, ಪದ್ಯದ ಮೂಲಕ ಸಾಹಿತ್ಯದ ಪರಿಚಯ ಮಾಡುಕೊಡುವ ಮೂಲಕ ಮನರಂಜನೆ ಜೊತೆಗೆ ಮನೋವಿಕಾಸಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಮಾತನಾಡುವ ಬೊಂಬೆ ಖ್ಯಾತಿಯ ಸುಮಾ ರಾಜ್‌ಕುಮಾರ್ ಮ್ಯಾಜಿಕ್ ಶೋ ಜೊತೆಗೆ ಮಾತನಾಡುವ ಬೊಂಬೆಯೊಡನೆ ಗಮನ ಸೆಳೆದರೆ, ಕಥೆಗಳ ಮೂಲಕ ಕೆ.ಸೀಮಾ ಕಾರಂತ್ ಮಕ್ಕಳ ಮನಸ್ಸಿನಲ್ಲಿ ಹೊಸ ಆಲೋಚನೆಗಳನ್ನು ಬಿತ್ತಿದರು.

ಹಾಗೆಯೇ ಡಾ.ದೀಪಿಕಾ ಪೊನ್ನಪ್ಪ ಐದಾರು ಪದ್ಯಗಳ ಮೂಲಕ ಪುಟಾಣಿಗಳ ಪ್ರೌಢಿಮೆ ಪರಿಶೀಲಿಸಿದರೆ, ಫ್ಯಾಂಟಸಿ ಮತ್ತು ವಿಜ್ಞಾನದ ಜಾಡಿನೊಂದಿಗೆ ಕೊಳ್ಳೆಗಾಲ ಶರ್ಮಾ, ಮಕ್ಕಳಲ್ಲಿ ಸಾಧನೆ, ಗುರಿ ತಲುಪುವ ಆತ್ಮಸ್ಥೈರ್ಯ ತುಂಬಿದರು. ಹಾಗೆಯೇ ಗಾಯಕ ಸೂರಜ್ ರಾವ್ ಪವಾರ್ ಗಿಟಾರ್ ಸಂಗೀತದೊಂದಿಗೆ ಚಿಣ್ಣರು ಹಾಗೂ ಪೋಷಕರ ಮನಗೆದ್ದರು. ಜೊತೆಗೆ ರೂಪಾ ಶಿವಪ್ರಕಾಶ್ ಅವರಿಂದ ನೃತ್ಯ ಪಾಠ, ಅನ್ನ ಚೆರಿಯನ್ ಅವರಿಂದ ಕೌಶಲ್ಯತೆ ವೃದ್ಧಿ ಚಟುವಟಿಕೆಗಳು ಮಕ್ಕಳಲ್ಲಿ ಕಲಿಕಾ ಆಸಕ್ತಿ ಹೆಚ್ಚಿಸಿತು.



ಆಟಿಕೆಗಳನ್ನು ಖರೀದಿಸುವಲ್ಲಿ ಮಗ್ನರಾಗಿರುವ ಮಕ್ಕಳು, ಪೋಷಕರು

ಗೋಪಿ ಮಿಂಚು: 'ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ' ಸಮಾರೋಪಕ್ಕೆ ಲೇಖಕಿ ಹಾಗೂ ಇನ್ಫೋಸಿಸ್ ಫೌಂಡೇಶನ್‌ನ ಡಾ.ಸುಧಾಮೂರ್ತಿ ಅವರು ತಾವು ಬರೆದ 'ದಿ ಗೋಪಿ ಡೈರೀಸ್' ಪುಸ್ತಕದ ಬಗ್ಗೆ ಮಕ್ಕಳಿಗೆ ತಿಳಿಸಲು ಹಾಗೂ ಅವರಲ್ಲಿ ಸಾಹಿತ್ಯ ಪ್ರೇಮ ಹೆಚ್ಚಿಸಲು ಗೋಪಿ (ಶ್ವಾನ)ಯನ್ನು ತಮ್ಮೊಂದಿಗೆ ಮತ್ತೊಬ್ಬ ಪ್ರಮುಖ ಅತಿಥಿಯಾಗಿ ಕಾರ್ಯಕ್ರಮಕ್ಕೆ ಕರೆತಂದು ಗಮನ ಸೆಳೆದರು. ವೇದಿಕೆಗೆ ಬರುತ್ತಲೇ ಗಮನ ಸೆಳೆದ ಗೋಪಿ, ಪುಟಾಣಿಗಳು ಗಲಾಟೆ ಮಾಡಿದರೆ, ಮಲಗುವುದು, ಸೈಲೆಂಟಾದರೆ ಎದ್ದು ಕೂರುವ ಕ್ರಿಯಾಶೀಲ ಚಟುವಟಿಕೆಯೊಂದಿಗೆ ನೆರೆದಿದ್ದವರನ್ನು ಆಕರ್ಷಿಸಿತು.

ಮಕ್ಕಳ ಹಿಂಡು: 8ನೇ ಆವೃತ್ತಿಯ ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮದಲ್ಲಿ ಮಕ್ಕಳ ಹಿಂಡು ಕಂಡುಬಂದಿತು. ಸಭಾಂಗಣದಲ್ಲಿ ನಿಂತು ವೀಕ್ಷಣೆ ಮಾಡಲಾಗಷ್ಟು ಮಟ್ಟಕ್ಕೆ ಮಕ್ಕಳು ತುಂಬಿ ತುಳುಕುತ್ತಿದ್ದರು. ಮಕ್ಕಳೊಂದಿಗೆ ಪೋಷಕರು ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಹೊರಭಾಗದಲ್ಲಿ ಹಾಕಲಾಗಿದ್ದ ಪುಸ್ತಕ, ತಿಂಡಿ–ತಿನಿಸುಗಳ ಮಳಿಗೆಗಳಲ್ಲಿ ಭರ್ಜರಿ ವ್ಯಾಪಾರವೂ ನಡೆಯಿತು. ಹಾಗೆಯೇ ಕಡೆಯಲ್ಲಿ ಡಾ.ಸುಧಾ ಮೂರ್ತಿ ಅವರ ಪುಸ್ತಕಗಳನ್ನು ಖರೀದಿಸಿ ಸರತಿ ಸಾಲಿನಲ್ಲಿ ನಿಂತ ಪುಟಾಣಿಗಳು, ಅವರ ಹಸ್ತಾಕ್ಷರ ಪಡೆದು ಹರ್ಷ ವ್ಯಕ್ತಪಡಿಸಿದರು.

ಬಹುಮಾನ ವಿತರಣೆ: ಇದೇ ವೇಳೆ ಮಕ್ಕಳ ಸಾಹಿತ್ಯ ಸಂಭ್ರಮದ ಅಂಗವಾಗಿ ನಡೆಸಲಾಗಿದ್ದ ಅಂತರ ಶಾಲಾ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಒಟ್ಟಾರೆ ರಸಪ್ರಶ್ನೆ ಸ್ಪರ್ಧೆ ವಿಭಾಗದಲ್ಲಿ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಪ್ರಥಮ, ಶಾರದಾ ಪಬ್ಲಿಕ್ ಸ್ಕೂಲ್ ದ್ವಿತೀಯ, ಆಚಾರ್ಯ ವಿದ್ಯಾಕುಲ ತೃತೀಯ ಹಾಗೂ ಶಿವಾನಿ ಕೇತನ ಹಾಗೂ ಸಿದ್ದಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆ ಸಮಾಧಾನಕರ ಬಹುಮಾನ ಪಡೆದವು.

ಸೀಮಿತ ವಿದ್ಯಾರ್ಥಿ ವರ್ಗದಲ್ಲಿ ದ ಲರ್ನಿಂಗ್ ಕ್ರೇವ್ ಪ್ರಥಮ, ದ ಎಸಿಎಂಇ ಶಾಲೆ ದ್ವಿತೀಯ, ಕ್ರೈಸ್ಟ್ ದ ಕಿಂಗ್ ಕಾನ್ವೆಂಟ್ ತೃತೀಯ ಹಾಗೂ ರೋಟರಿ ಪಶ್ಚಿಮ ಶಾಲೆ ಸಮಾಧಾನಕರ ಬಹುಮಾನ ಪಡೆದರೆ, ರಸಪ್ರಶ್ನೆ ಸ್ಪರ್ಧೆಯಲ್ಲಿ ವೈಯಕ್ತಿಕವಾಗಿ ಹೆಚ್ಚು ಅಂಕ ಪಡೆದ ಎಕ್ಸೆಲ್ ಪಬ್ಲಿಕ್ ಶಾಲೆಯ ಧೃತಿ ಆರ್ ಕುಕ್ರೇಜಾ ಪ್ರಥಮ, ಜೆ.ಚಿನ್ಮಯ್ ದ್ವಿತೀಯ, ಇಮ್ಯಾನುಯಲ್ ಕಾಕೆಡ್ ತೃತೀಯ, ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್‌ನ ಭುವನಶ್ರೀ ನಾಲ್ಕನೇ ಬಹುಮಾನ ಪಡೆದರು. ಹಾಗೆಯೇ ಎಕ್ಸೆಲ್ ಪಬ್ಲಿಕ್ ಶಾಲೆಯ ಅರ್ಶಬೀರ್ ಸಿಂಗ್ ಮತ್ತು ಸಿದ್ದಾರ್ಥನಗರ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಾನ್ವಿ ಎನ್.ಸ್ವಾಮಿ 5ನೇ ಬಹುಮಾನ ಪಡೆದರೆ, ಆಚಾರ್ಯ ವಿದ್ಯಾಕುಲದ ಮಾಳವಿಕ ರವಿ, ಸಿದ್ದಾರ್ಥನಗರ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಜಿಯೋ ಜಾನಿ, ಎಕ್ಸೆಲ್ ಪಬ್ಲಿಕ್ ಶಾಲೆಯ ಸ್ವಾತಿ ಹೆಬ್ಬಾಲೆ ರಾವ್ ಮತ್ತು ಶ್ರೀ ಶಾರದಾ ಪಬ್ಲಿಕ್ ಸ್ಕೂಲ್‌ನ ಎಸ್.ಹರ್ಷಿತ 6ನೇ ಬಹುಮಾನ ಗೆದ್ದರು. ಮೈಸೂರು ಬುಕ್ ಕ್ಲಬ್ ಮತ್ತು ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಮತ್ತಿತರು ಉಪಸ್ಥಿತರಿದ್ದರು.

ಮಕ್ಕಳು ಕಂಪ್ಯೂಟರ್ ಟೈಂ ಕಡಿಮೆ ಮಾಡಿ, ಮೈದಾನದಲ್ಲಿ ಆಟವಾಡಬೇಕು...

ಮಕ್ಕಳೇ ತಾಯಿ–ತಂದೆ ಮಾತು ಕೇಳಬೇಕು. ಕಂಪ್ಯೂಟರ್ ಟೈಂ ಕಡಿಮೆ ಮಾಡಿ, ಮೈದಾನದಲ್ಲಿ ಆಟವಾಡಬೇಕು. ಪ್ರಾಣಿಗಳ ಜೊತೆ ಬೆರೆಯಬೇಕು ಎಂದು ಕಿವಿಮಾತು ಹೇಳಿದ ಲೇಖಕಿ ಹಾಗೂ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷರಾದ ಡಾ.ಸುಧಾಮೂರ್ತಿ ಅವರು, ಮಕ್ಕಳು ಇಂಗ್ಲಿಷ್ ಕಲಿಯಬೇಕು. ಹಾಗಂತ ಕನ್ನಡವನ್ನು ಬಿಡಬಾರದು. ಕನ್ನಡ ತಾಯಿ ತಾಯಿನೇ ಹೊರತು ಪಕ್ಕದ ಮನೆಯ ಇಂಗ್ಲಿಷ್ ತಾಯಿಯಾಗುವುದಿಲ್ಲ ಎಂದು ತಿಳಿಸಿದರು.

ತಂದೆ ತಾಯಂದಿರು ಮಕ್ಕಳಿಗೆ ಸಂವಹನ ದೃಷ್ಟಿಯಿಂದ ಇಂಗ್ಲೀಷ್ ಕಲಿಸಿ. ಹೊಸ ಭಾಷೆಗಳನ್ನು ಕಲಿಯುವುದರಿಂದ ಯಾವುದೇ ರೀತಿಯ ತೊಂದರೆ ಇಲ್ಲ. ಭಾಷೆ ಮತ್ತು ಸಂಸ್ಕೃತಿಗೂ ಸಂಬಂಧವಿದೆ. ಹೀಗಾಗಿ ಭಾಷೆ ಕಲಿಯುವುದರಿಂದ ಹೊಸದೊಂದು ಸಂಸ್ಕೃತಿಯನ್ನೂ ಕಲಿತಂತಾಗುತ್ತದೆ. ಮಕ್ಕಳಿಗೆ ಸಾಂಸ್ಕೃತಿಕ ತಳಹದಿ ಇಲ್ಲವಾದರೆ ಅವರು ಆಧಾರವೇ ಇಲ್ಲದ ಮರದಂತಾಗುತ್ತಾರೆ ಎಂದರು.

ಸಂಸ್ಕೃತಿಯನ್ನು ಮರೆಯಬಾರದು. ನಾವು 100 ರಷ್ಟು ಅನುಸರಿಸಿದರೆ, ಮಕ್ಕಳು 50 ರಷ್ಟಾದರು ಕಲಿಯುತ್ತಾರೆ. ಆದ್ದರಿಂದ ಮಕ್ಕಳ ಎದುರು ನಾವುಗಳು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಈ ಸಮಯ ಶಾಶ್ವತವಲ್ಲ, ಉತ್ತಮ ಶಿಕ್ಷಣ ಮನುಷ್ಯನನ್ನು, ಸಮಾಜವನ್ನು, ಭವಿಷ್ಯವನ್ನು ಬದಲಿಸುತ್ತದೆ. ಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು. ಕಷ್ಟದಲ್ಲಿದ್ದಾಗ ನಾವು ಗೆಲ್ಲುವುದನ್ನು ಕಲಿಯಬೇಕು. ಹಾಗೆಯೇ ಬೇರೆಯವರಿಗೆ ಸಹಾಯ ಮಾಡುವ ಮನೋಧರ್ಮ ಗುಣವನ್ನು ಮಕ್ಕಳು ಮೈಗೂಡಿಸಿಕೊಳ್ಳುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಎಚ್ಚರವಿರಲಿ!

●ಮೈಸೂರಲ್ಲಿ ಕಂಡ ಕಂಡಲ್ಲಿ ತಲೆ ಎತ್ತಿರುವ ಆರ್‌ಓ ಪ್ಲಾಂಟ್‌ಗಳು ●ಇವುಗಳ ಮೇಲ್ವಿಚಾರಣೆಗೆ ಮೈಸೂರು ಪಾಲಿಕೆ, ಆರೋಗ್ಯ ಇಲಾಖೆಯ ಗಮನವೇ ಇಲ್ಲ





● ಮೋಹನ್ ಕಾಯಕ

ಮೈಸೂರು, ಜ.11– ಆತ್ಮೀಯ ಓದುಗರೇ.... ಖಾಸಗಿ ಶುದ್ಧ ಕುಡಿಯುವ ನೀರಿನ ಘಟಕ(ಆರ್‌ಓ ಪ್ಲಾಂಟ್)ಗಳ ಮೇಲಿರಲಿ ಗಮನ... ಎಚ್ಚರ ತಪ್ಪಿದರೆ ಜೀವಜಲ, ಜೀವಕ್ಕೆ ಕುತ್ತು ತರುವುದು ಗ್ಯಾರಂಟಿ...!

ದೈನಂದಿನ ಜೀವನದಲ್ಲಿ 'ನೀರು' ಅತೀ ಅವಶ್ಯಕ. ಅದು ಜೀವಜಲ. ಆದರೆ ಇಂತಹ ಜೀವಜಲ ಪೂರೈಕೆ ಮಾಡುವ ನೆಪದಲ್ಲಿ ಜೀವದ ಜೊತೆ ಚೆಲ್ಲಾಟವಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕಾಲರಾ, ಟೈಫಾಯಿಡ್ ಜ್ವರ, ಹೆಪಟೈಟಿಸ್ ಎ, ಗಿಯಾರ್ಡಿಯಾಸಿಸ್ ಮತ್ತು ಭೇದಿ ಸೇರಿದಂತೆ ಹಲವು ರೋಗಗಳಿಂದ ಮುಕ್ತಾಗಿ ಆರೋಗ್ಯಕರ ಜೀವನಕ್ಕೆ ಶುದ್ಧ ನೀರು ಅಗತ್ಯವಾಗಿದೆ.

ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದು, ಅವುಗಳಲ್ಲಿ ಆರ್‌ಓ ಪ್ಲಾಂಟ್‌ಗಳ ಸ್ಥಾಪನೆ ಪ್ರಮುಖವಾಗಿದೆ. ಆದರೆ ಇದನ್ನೇ ಬಂಡವಾಳ ಮಾಡಿಕೊಂಡಿರುವ ಹಲವರು ಯಾವುದೇ ಪರವಾನಗಿ ಪಡೆಯದೆ ಇದನ್ನು ಉದ್ಯಮವನ್ನಾಗಿ ಮಾಡಿಕೊಂಡಿರುವುದಲ್ಲದೆ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ.

ಪ್ರಮುಖವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಬಳಸುವ ಯಂತ್ರಗಳನ್ನು ಪ್ರತಿನಿತ್ಯ ಪರಿಶೀಲನೆ ಮಾಡಬೇಕು. 15 ದಿನಕ್ಕೊಮ್ಮೆ ವಾಟರ್ ಪ್ಯೂರಿಫೈಯರ್‌ನ ಫಿಲ್ಟರ್‌ಗಳನ್ನು ಬದಲಾವಣೆ ಮಾಡಬೇಕು. ಮಳೆಗಾಲದಲ್ಲಿ ವಾರಕೊಮ್ಮೆ ಫಿಲ್ಟರ್ ಬದಲಾವಣೆ ಮಾಡಬೇಕಾಗುತ್ತದೆ. ನೀರಿನ 'ಗಡಸುತನ ಅಥವಾ ಕರಗಿದ ಘನ ಪದಾರ್ಥ–ಟಿಡಿಎಸ್(Total Dissolved Solid-TDS)' ಪ್ರಮಾಣ ಕಡಿಮೆ ಮಾಡಿ 'ಮೆದು' (ಶುದ್ಧ) ನೀರು ಇರುವಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಯುರೇನಿಯಂ ಪ್ರಮಾಣದಲ್ಲಿ ಎಚ್ಚರಿಕೆ ವಹಿಸಬೇಕು. ಅಲ್ಲದೆ ನೀರಿನಲ್ಲಿ ಅಗತ್ಯ ಖನಿಜಾಂಶಗಳು (ಮಿನರಲ್ಸ್) ಇರುವಂತೆ ನೋಡಿಕೊಳ್ಳಬೇಕು. ಇಷ್ಟೆಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಖಾಸಗಿ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ವಹಿಸಲಾಗುತ್ತಿದೆಯೇ ಎಂಬುದು ಪ್ರಜ್ಞಾವಂತ ನಾಗರಿಕರ ಪ್ರಶ್ನೆಯಾಗಿದೆ.

ಅನುಮತಿ ಕಡ್ಡಾಯ: ಸರ್ಕಾರದ ನಿಯಮಾವಳಿ ಹಾಗೂ ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಮಾನದಂಡದಲ್ಲಿ ಆರ್‌ಓ ಪ್ಲಾಂಟ್‌ಗಳನ್ನು ಸ್ಥಾಪಿಸಬೇಕು. ಇತ್ತೀಚೆಗೆ ಖಾಸಗಿ ವ್ಯಕ್ತಿಗಳು ತಮ್ಮ ಮನೆ ಮುಂದೆ, ಶೆಲ್ಟರ್‌ಗಳಲ್ಲಿ, ಮಳಿಗೆಗಳಲ್ಲಿ, ನೆಲ ಮಹಡಿಗಳಲ್ಲಿ ಆರ್‌ಓ ಪ್ಲಾಂಟ್‌ಗಳನ್ನು ಸ್ಥಾಪಿಸಿ, ಅದನ್ನೇ ಉದ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ನಗರ ವ್ಯಾಪ್ತಿಯಲ್ಲಿ ಆರ್‌ಓ ಸ್ಥಾಪನೆಗೆ ಪಾಲಿಕೆಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದ್ದು, ಉದ್ಯಮ ಪರವಾನಗಿಯನ್ನು ಸಹ ಪಡೆಯಬೇಕಾಗಿದೆ. ಆದರೆ ಬಹುತೇಕ ಖಾಸಗಿ ವ್ಯಕ್ತಿಗಳು ಅನುಮತಿ ಪಡೆಯದೆ ಆರ್‌ಓ ಪ್ಲಾಂಟ್ ಸ್ಥಾಪಿಸಿರುವುದಲ್ಲದೆ ನಿರ್ವಹಣೆ ಗುಣಮಟ್ಟದಲ್ಲಿ ನಡೆಯುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪರಿಶೀಲಿಸುವ ಅಧಿಕಾರವಿಲ್ಲ: ಖಾಸಗಿ ಆರ್‌ಓ ಪ್ಲಾಂಟ್‌ಗಳನ್ನು ಪರಿಶೀಲನೆ ನಡೆಸುವ ಅಧಿಕಾರವನ್ನು ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್‌ಗೆ ಕೊಟ್ಟಿಲ್ಲ. ಪರಿಶೀಲನೆ ನಡೆಸಲು ಸೂಚಿಸಿದರೆ ಅದರಂತೆ ಕ್ರಮ ವಹಿಸಲಾಗುವುದು. ನಗರದೆಲ್ಲೆಡೆ ಪಾಲಿಕೆ ವ್ಯಾಪ್ತಿಯ ಸುಮಾರು 120 ಆರ್‌ಓ ಪ್ಲಾಂಟ್‌ಗಳಿದ್ದು, ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಂಸ್ಥೆಯೊಂದಕ್ಕೆ ನೀಡಲಾಗಿದೆ ಎಂದು ವಾಣಿವಿಲಾಸ ವಾಟರ್ ವರ್ಕ್‌ನ ಅಧಿಕಾರಿಯೊಬ್ಬರು ತಿಳಿಸಿದರಲ್ಲದೆ ದೊಡ್ಡಮಟ್ಟದಲ್ಲಿ ವಾಟರ್ ಕ್ಯಾನ್‌ಗಳನ್ನು ಸಪ್ಲೆ ಮಾಡುವ ಕೈಗಾರಿಕೆಗಳು, ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯಬೇಕು ಎಂದು ಮಾಹಿತಿ ನೀಡಿದರು.

ಮಾನಿಟರ್ ಅತ್ಯಂತ ಅವಶ್ಯ: ಆರ್‌ಓ ಪ್ಲಾಂಟ್‌ಗಳನ್ನು ಪ್ರತಿನಿತ್ಯ ಮಾನಿಟರ್ ಮಾಡುವುದು ಅವಶ್ಯವಾಗಿದೆ. ಪಾಲಿಕೆಯ ಎಲ್ಲಾ ಆರ್‌ಓ ಪ್ಲಾಂಟ್‌ಗಳನ್ನು ಮಾನಿಟರ್ ಮಾಡಲು ಟೆಕ್ನಿಕಲ್ ಟೀಂ ನೇಮಿಸಲಾಗಿದೆ. ಮುಖ್ಯವಾಗಿ 15 ದಿನಕ್ಕೊಮ್ಮೆ ವಾಟರ್ ಪ್ಯೂರಿಫೈಯರ್‌ನ ಫಿಲ್ಟರ್‌ಗಳನ್ನು ಬದಲಾವಣೆ ಮಾಡುತ್ತೇವೆ. ಮಳೆಗಾಲದಲ್ಲಿ ಬೋರ್‌ವೆಲ್‌ನಿಂದ ಕಲುಷಿತ ನೀರು ಹೆಚ್ಚಾಗಿ ಬರುವುದರಿಂದ ವಾರಕ್ಕೊಮ್ಮೆ ಫಿಲ್ಟರ್‌ಗಳನ್ನು ಬದಲಾಯಿಸುತ್ತೇವೆ. ನೀರಿನಲ್ಲಿರುವ ಉಪ್ಪಿನಾಂಶ ಹೆಚ್ಚಾಗಿದ್ದಾಗ ಮೆಗ್ನೀಷಿಯಮ್, ಕ್ಯಾಲ್ಸಿಯಂ ಜಾಸ್ತಿಯಾಗಲಿದೆ. ಇದರ ನಿಯಂತ್ರಣದ ಜೊತೆಗೆ ಆರ್‌ಓ ಮೆಂಬರೇನ್(ಆರ್ಟ್ ಆಫ್ ಆರ್‌ಓ ಪ್ಲಾಂಟ್) ಲೈಫ್ ಚೆನ್ನಾಗಿ ಬರಲೆಂದು ಫುಡ್ ಇನ್‌ಗ್ರೀಡಿಯನ್ಸ್ ಆದ ಆಂಟಿಸ್ಕ್ಯಾಲಂಟ್ ಕೆಮಿಕಲ್ ಬಳಸಲಾಗುವುದು ಎಂದು ಪಾಲಿಕೆಯ ಆರ್‌ಓ ಪ್ಲಾಂಟ್‌ಗಳ ನಿರ್ವಹಣೆ ಮಾಡುತ್ತಿರುವ ಆಕ್ವಾ ಗ್ರೀನ್ ವಾಟರ್ ಸಲ್ಯೂಷನ್‌ನ ಜಗದೀಶ್ ತಿಳಿಸಿದರು.

ಆರ್‌ಓ ಪ್ಲಾಂಟ್‌ನ ನೀರಿನ ಕ್ವಾಲಿಟಿ ಚೆಕ್ ಮಾಡುವುದಕ್ಕೆ ಸುಮಾರು 3,500 ರೂ. ಹಾಗೂ 1 ಸಾವಿರ ಲೀಟರ್ ಸಾಮರ್ಥ್ಯದ ಆರ್‌ಓ ಪ್ಲಾಂಟ್‌ನ ಫೀಲ್ಟರ್ ಬದಲಾವಣೆಗೆ 400–500 ರೂ. ಖರ್ಚಾಗುತ್ತದೆ. ಅಲ್ಲದೆ ಟೆಕ್ನಿಷಿಯನ್‌ಗಳನ್ನಿಟ್ಟು ಪರಿಶೀಲನೆ ನಡೆಸುತ್ತಿರಬೇಕು. ಇಷ್ಟೆಲ್ಲವನ್ನು ಖಾಸಗಿ ಆರ್‌ಓ ಪ್ಲಾಂಟ್‌ಗಳಲ್ಲಿ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡುವುದು ಅವಶ್ಯವಾಗಿದೆ. ಅಲ್ಲದೆ ಆಗಾಗ ನೀರಿನ ಗುಣಮಟ್ಟದ ಲ್ಯಾಬ್ ರಿಪೋರ್ಟ್ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಸ್ವಲ್ಪ ಎಚ್ಚರ ತಪ್ಪಿದರೂ ಅನಾರೋಗ್ಯ...

'ನೀರು' ಅತೀ ಅವಶ್ಯವಾದ ಜೀವಜಲವಾಗಿದೆ. ಶುದ್ಧೀಕರಣದಲ್ಲಿ ಸ್ವಲ್ಪ ಹೆಚ್ಚು–ಕಡಿಮೆಯಾದರೂ ರೋಗ–ರುಜಿನಗಳಿಗೆ ತುತ್ತಾಗಬೇಕಾಗುತ್ತದೆ. ಆರ್‌ಓ ಪ್ಲಾಂಟ್‌ಗಳಿಂದ ಶುದ್ಧೀಕರಣದ ಹೆಸರಿನಲ್ಲಿ ನೀರನ್ನು ವ್ಯರ್ಥ ಮಾಡುವುದು ಹೆಚ್ಚಾಗುತ್ತಿದೆ. ಇತ್ತೀಚೆಗಂತು ಆರ್‌ಓ ಪ್ಲಾಂಟ್‌ಗಳು ವಿಪರೀತವಾಗಿದ್ದು, ನೀರಿನಲ್ಲಿ ಖನಿಜಾಂಶಗಳೇ ಇಲ್ಲದಂತಾಗಿದೆ. ಖಾಸಗಿ ಆರ್‌ಓ ಪ್ಲಾಂಟ್‌ಗಳು ಎಲ್ಲೆಂದರಲ್ಲಿ ಸ್ಥಾಪನೆಯಾಗುತ್ತಿವೆ. ನೆಲಮಹಡಿಯಲ್ಲೂ ಮಾಡಲಾಗುತ್ತಿದೆ. ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸುತ್ತಾರೋ ಇಲ್ಲವೋ ಯಾವುದು ತಿಳಿಸಿಯುತ್ತಿಲ್ಲ.

– ಹೆಚ್.ರಮೇಶ್, ನೀರಿನ ತಜ್ಞ

ಖಾಸಗಿ ಆರ್‌ಓ ಪ್ಲಾಂಟ್‌ಗಳನ್ನು ಅನುಮತಿ ಪಡೆಯದೆ ಸ್ಥಾಪಿಸಿರುವುದು ಕಂಡುಬಂದಲ್ಲಿ ಕಟ್ಟುನಿಟ್ಟಿನ ಕ್ರಮವಹಿಸಲಾಗುವುದು. ಆರ್‌ಓ ಪ್ಲಾಂಟ್‌ನ ನಿರ್ವಹಣೆ ಮಾಡುತ್ತಿಲ್ಲ ಎಂಬುದು ಕೂಡ ಕಂಡು ಬಂದರು ಅನುಮತಿ ರದ್ದುಪಡಿಸಲಾಗುವುದು.

– ಅಸಾದ್-ಉರ್ ರೆಹಮಾನ್ ಷರೀಫ್, ಆಯುಕ್ತರು, ಮೈಸೂರು ನಗರಪಾಲಿಕೆ

ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿದ್ದು ಗುರಿ ಮುಟ್ಟಬೇಕು



ವಿರಾಜಪೇಟೆಯ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಲಾಯಿತು.

ವಿರಾಜಪೇಟೆ, ಜ.11– ವಿದ್ಯಾರ್ಥಿಗಳ ಜೀವನ ಮಹತ್ವವಾದದ್ದು, ಆದ್ದರಿಂದ ಮಾದಕ ವಸ್ತುಗಳಿಂದ ದೂರವಿದ್ದು ಭವಿಷ್ಯದ ಕಡೆಗೆ ಹೆಚ್ಚು ಗಮನಹರಿಸುವ ಮೂಲಕ ಗುರಿ ಮುಟ್ಟುವಂತಾಗಬೇಕು ಎಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದರು.

ವಿರಾಜಪೇಟೆ ಬಳಿಯ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ವತಿಯಿಂದ ಆಯೋಜಿಸಿದ್ದ 2023–24ನೇ ಸಾಲಿನ ವಿದ್ಯಾರ್ಥಿ ಸಂಘ ಉದ್ಘಾಟನೆ ಹಾಗೂ ಪದವಿಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಂದೆ ವೈದ್ಯರಾಗುವ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಕಟ್ಟಕಡೆಯ ಜನರಿಗೂ ಸೇವೆ ನೀಡಬೇಕು. ಕೊಡಗು ದಂತ ವೈದ್ಯಕೀಯ ಕಾಲೇಜು ಅತ್ಯುತ್ತಮ ಸೌಲಭ್ಯಗಳ ಮೂಲಕ ಸಮಾಜಕ್ಕೆ ಉತ್ತಮ ಸೇವೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಕ್ರೀಡೆ, ಕಲೆ, ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ದುಶ್ಚಟಗಳಿಂದ ದೂರವಿದ್ದು, ಮಾದಕ ವಸ್ತುಗಳು ಸೇವನೆ ಹಾಗೂ ಮಾರಾಟ ಕಂಡಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ತಿಳಿಸಿದರು.

ದಂತ ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ.ಸುನೀಲ್ ಮುದ್ದಯ್ಯ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳ ಸಂಘ ಉತ್ತಮ ನಾಯಕತ್ವ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಸ್ಪರ್ಧೆ ಹಾಗೂ ಉತ್ತಮ ಚಟುವಟಿಕೆಗಳಿಗೆ ಒತ್ತು ನೀಡುತ್ತಿದೆ. ಈ ಕಾಲೇಜು ಅಂತಾರಾಷ್ಟ್ರಿಯ ಮಟ್ಟದಲ್ಲಿ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದರು. ಪ್ರೊಫೆಸರ್ ಡಾ.ಅನ್ಮೋಲ್ ಕಾಲ್ರ ಮಾತನಾಡಿ, ವಿದ್ಯಾರ್ಥಿಗಳ ಸಂಘ ಮೌಲ್ಯಧಾರಿತ ಶಿಕ್ಷಣ ಮತ್ತು ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವಂತಾಗಬೇಕು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ. ಪೊನ್ನಪ್ಪ 2023–24ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಿದರು. ವಿವಿಧ ಸ್ನಾತಕೋತ್ತರ ಪದವಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಡಾ.ಶ್ರಯನ ನಾಣಯ್ಯ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಿಲ್ಸಾ ಇದ್ದರು.

ಕೊಟ್ಟಗೇರಿಯಲ್ಲಿ ಹುಲಿ ಕಳೇಬರ ಅಂತ್ಯಕ್ರಿಯೆ

ಮತ್ತೊಂದು ಹುಲಿಯೊಂದಿಗೆ ಕಾದಾಡಿ ಗಾಯಗೊಂಡು ಸಾವು



ಪೊನ್ನಂಪೇಟೆ ತಾಲೂಕಿನ ಕೊಟ್ಟಗೇರಿ ಗ್ರಾಮದ ಕಾಫಿ ತೋಟದಲ್ಲಿ ಮೃತಪಟ್ಟ ಹುಲಿ ಕಳೇಬರವನ್ನು ಅರಣ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದರು.

ಮಡಿಕೇರಿ, ಜ.11– ಪೊನ್ನಂಪೇಟೆ ತಾಲೂಕಿನ ಬಾಳೆಲೆ ವ್ಯಾಪ್ತಿಯ ಕೊಟ್ಟಗೇರಿ ಗ್ರಾಮದ ಕಾಫಿ ತೋಟದಲ್ಲಿ ಮೃತಪಟ್ಟ ಹುಲಿ ಕಳೇಬರವನ್ನು ಗುರುವಾರ ಸುಡುವ ಮೂಲಕ ಅಂತ್ಯಕ್ರಿಯೆ ನಡೆಸಲಾಯಿತು.

12 ವರ್ಷದ ಗಂಡು ಹುಲಿಯ ಕಳೇಬರ ಬುಧವಾರ ಕಾಫಿ ತೋಟದಲ್ಲಿ ಪತ್ತೆಯಾಗಿತ್ತು ಈ ಹುಲಿ ಮತ್ತೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಗಂಭೀರ ಗಾಯಗೊಂಡು ಮೃತಪಟ್ಟಿರುವುದು ಖಚಿತವಾಗಿದ್ದು, ಹುಲಿ ಮೃತಪಟ್ಟ ಕಾಫಿ ತೋಟದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಿದ ಬಳಿಕ ಹುಲಿ ಸಂರಕ್ಷಣಾ ನಿಯಮದಂತೆ ಕಳೇಬರವನ್ನು ಸುಡಲಾಯಿತು.

ಇದೇ ವೇಳೆ ಮೈಸೂರಿನ ಹುಲಿ ಯೋಜನಾ ನಿರ್ದೇಶಕ ಪಿಸಿಸಿಎಫ್ ಲಿಂಗರಾಜು ಪರಿಶೀಲನೆ ನಡೆಸಿದರು. ಮೃತಪಟ್ಟ ಈ ಗಂಡು ಹುಲಿ 3 ವರ್ಷಗಳ ಹಿಂದೆ ಅರಣ್ಯದಿಂದ ಹೊರಬಂದಿತ್ತು. ಕೊಟ್ಟಗೇರಿಯಿಂದ ಮಾಯಮುಡಿ ಗ್ರಾಮದವರೆಗೆ ಸಂಚರಿಸಿ, ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿತ್ತು ಎಂದು ಪಿಸಿಸಿಎಫ್ ಲಿಂಗರಾಜು ಅವರಿಗೆ ಅರಣ್ಯ ಇಲಾಖಾ ಅಧಿಕಾರಿಗಳು ಮಾಹಿತಿ ನೀಡಿದರು. ನಾಗರಹೊಳೆ ವೈದ್ಯಾಧಿಕಾರಿ ಡಾ. ಹೆಚ್.ರಮೇಶ್ ಮರಣೋತ್ತರ ಪರೀಕ್ಷೆ ನಡೆಸಿದರು. ಹುಲಿಯ ಮುಂದಿನ ಬಲಗಾಲು, ಕುತ್ತಿಗೆ ಮೂಳೆ ಮುರಿದಿರುವುದು ಪತ್ತೆಯಾಗಿದೆ. ತಿತಿಮತಿ ಎಸಿಎಫ್ ಗೋಪಾಲ್, ಪೊನ್ನಂಪೇಟೆ ಆರ್‌ಎಫ್‌ಓ ಶಂಕರಪ್ಪ, ಡಿಆರ್‌ಎಫ್‌ಓ ದಿವಾಕರ್,

> ಕೊಟ್ಟಗೇರಿ ಗ್ರಾಮದಲ್ಲಿ ಮೃತಪಟ್ಟ ಗಂಡು ಹುಲಿಗೆ ಸುಮಾರು 12 ವರ್ಷವಾಗಿದ್ದು, ಹುಲಿಯ ತಲೆ, ಮೈಮೇಲೆ ಗಾಯದ ಗುರುತುಗಳು ಪತ್ತೆಯಾಗಿವೆ. ಕಳೆದ 3 ವರ್ಷಗಳಿಂದ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಈ ಹುಲಿಯನ್ನು ಸೆರೆ ಹಿಡಿಯಲು ಇಲಾಖೆಗೆ ಅನುಮತಿ ದೊರೆತಿತ್ತು. ಇದನ್ನು ಸೆರೆ ಹಿಡಿಯುವಷ್ಟರಲ್ಲಿ ಮೃತಪಟ್ಟಿದೆ.
> -ಪಿಸಿಸಿಎಫ್ ಲಿಂಗರಾಜು, ಹುಲಿ ಯೋಜನಾ ನಿರ್ದೇಶಕ

ತಿತಿಮತಿ ವಲಯ ಡಿಆರ್‌ಎಫ್‌ಓ ರವಿಕಿರಣ್, ಚೇತನ್, ಗಣೇಶ್ ಶೇಟ್, ರಕ್ಷಿತ್, ಚೇತನ್‌ಕುಮಾರ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಾಮ ನಿರ್ದೇಶಕರಾದ ಬೋಸು ಮಾದಪ್ಪ, ಬಾಳಲೆ ಮುಖ್ಯ ಪಶುವೈದ್ಯಾಧಿಕಾರಿ ಭವಿಷ್ಯತ್ ಕುಮಾರ್, ಡಾ.ತಮ್ಮಯ್ಯ, ಕಾನೂರು ವೈದ್ಯಾಧಿಕಾರಿ ಡಾ.ಚಂದ್ರಶೇಖರ್, ನಿಟ್ಟೂರು ಗ್ರಾಪಂ ಅಧ್ಯಕ್ಷೆ ಅಮ್ಮುಣ್ಣಿ ಆರ್‌ಆರ್‌ಟಿ ಸಿಬ್ಬಂದಿ ಹಾಜರಿದ್ದರು.

ಪೊಲೀಸ್ ಠಾಣಾಧಿಕಾರಿಗೆ ಮನವಿ ಸಲ್ಲಿಕೆ..



ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ, ವೈದ್ಯರು, ಗ್ರಾಪಂ ಅಧಿಕಾರಿಗಳು, ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರಿಗೆ ಬ್ಲ್ಯಾಕ್‌ಮೇಲ್ ಮೂಲಕ ಕರ್ತವ್ಯಕ್ಕೆ ಅಡ್ಡಿಪಡಿಸಿ ಮಾನಸಿಕ ಕಿರುಕುಳ ನೀಡುತ್ತಿರುವ ಆರ್‌ಟಿಐ ಕಾರ್ಯಕರ್ತ ಕೆ.ಎ.ಹಾರೀಸ್‌ನನ್ನು ಬಂಧಿಸಿ, ಗಡಿಪಾರು ಮಾಡುವಂತೆ ಆಗ್ರಹಿಸಿ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು. ಗ್ರಾಪಂ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಕೆಟೋಳಿರ ಹರೀಶ್ ಪೂವಯ್ಯ, ವೈದ್ಯಾಧಿಕಾರಿ ಡಾ.ಪೂವಯ್ಯ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎ.ಹೆಚ್.ಅಬ್ದುಲ್ ರಹಿಮಾನ್, ಗ್ರಾಪಂ ಸದಸ್ಯರಾದ ಬಿ.ಎಂ.ಪ್ರತೀಪ, ಮಾಚೇಟ್ಟಿರ ಕುಶು ಕುಶಾಲಪ್ಪ, ಎಂ.ಐ.ಮಹಮ್ಮದ್ ಕುರೇಶಿ, ಟಿ.ಎ.ಮಹಮ್ಮದ್ ಮತ್ತಿತರರಿದ್ದರು.

ಗೃಹರಕ್ಷಕಿ ಪಲ್ಲವಿಗೆ ಚಾಂಪಿಯನ್‌ಶಿಪ್

ಮಡಿಕೇರಿ, ಜ.11– ಬೆಂಗಳೂರಿನ ಆರ್.ಎ.ಮುಂಡುಕರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ನಡೆದ ರಾಜ್ಯಮಟ್ಟದ ವೃತ್ತಿಪರ ಮತ್ತು ಕ್ರೀಡಾಕೂಟದ ಮಹಿಳೆಯರ ವಿಭಾಗದಲ್ಲಿ ಕೊಡಗು ಜಿಲ್ಲೆಯ ಗೃಹರಕ್ಷಕಿ ಎಚ್.ಆರ್.ಪಲ್ಲವಿ ಚಾಂಪಿಯನ್‌ಶಿಪ್ ಪಡೆದಿದ್ದಾರೆ.

ಎಚ್.ಆರ್.ಪಲ್ಲವಿ 400 ಮೀಟರ್ ಓಟದಲ್ಲಿ ಪ್ರಥಮ, 100 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಹಾಗೂ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಗೃಹರಕ್ಷಕರಾದ ವೈ.ಎನ್.ಕವನ್ ಕುಮಾರ್ ಪುರುಷರ ವಿಭಾಗದ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಎ.ಪಿ.ಜಯಕುಮಾರ್ ಬೆಂಗಳೂರಿನ ಗೃಹರಕ್ಷಕ ಮತ್ತು ಪೌರರಕ್ಷಣಾ ತರಬೇತಿ ಅಕಾಡೆಮಿಯಲ್ಲಿ ನಡೆದ ಅಡ್ವಾನ್ಸ್ ಫೈರ್ ಪೈಟಿಂಗ್ ತರಬೇತಿಯಲ್ಲಿ ಪ್ರಥಮ, ಗೃಹರಕ್ಷಕ ಅಧಿಕಾರಿಗಳ ತರಬೇತಿಯಲ್ಲಿ ದ್ವಿತೀಯ ಹಾಗೂ ಗೃಹರಕ್ಷಕ ಮತ್ತು ಪೌರರಕ್ಷಣಾ ಪ್ರಾದೇಶಿಕ ತರಬೇತಿ ಕೇಂದ್ರದ ದೇವರಬೆಳಕೆರೆ ದಾವಣಗೆರೆ ಜಿಲ್ಲೆಯಲ್ಲಿ ನಡೆದ ಪುನರ್‌ಮನನ ತರಬೇತಿಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ ರಾಜ್ ವಿಜೇತ ಗೃಹರಕ್ಷಕರನ್ನು ಅಭಿನಂದಿಸಿದರು. ಗೃಹರಕ್ಷಕ ದಳದ ಜಿಲ್ಲಾ ಬೋಧಕ ಡಿ.ಅಕ್ಷಯ್ ಕುಮಾರ್, ಗೃಹರಕ್ಷಕ ದಳದ ಎಂ.ವಿಶ್ವನಾಥ, ವಿ.ಜಿ.ನಿರ್ಮಲಾ, ಮಡಿಕೇರಿ ಘಟಕಾಧಿಕಾರಿ ವೈ.ಎನ್.ಕವನ್‌ಕುಮಾರ್ ಹಾಗೂ ಗೃಹರಕ್ಷಕ ಘಟಕಾಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.



ರಾಜ್ಯಮಟ್ಟದ ವೃತ್ತಿಪರ ಮತ್ತು ಕ್ರೀಡಾಕೂಟದ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್‌ಶಿಪ್ ಪಡೆದ ಗೃಹರಕ್ಷಕಿ ಎಚ್.ಆರ್.ಪಲ್ಲವಿಯನ್ನು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್ ಅಭಿನಂದಿಸಿದರು.

ನಲ್ಲೂರಿನಲ್ಲಿ ವಿದ್ಯುತ್ ತಗುಲಿ ಹಸು ಸಾವು



ಗೋಣಿಕೊಪ್ಪ ಜ.11– ವಿದ್ಯುತ್ ತಗುಲಿ ಹಸು ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ನಲ್ಲೂರು ಗ್ರಾಮದಲ್ಲಿ ನಡೆದಿದೆ. ಕಾಫಿ ಬೆಳೆಗಾರ ಪುಚ್ಚಿಮಾಡ ಪ್ರಕಾಶ್ ಪೂಣಚ್ಚ ಅವರಿಗೆ ಸೇರಿದ ಹಸು ವಿದ್ಯುತ್‌ನಿಂದ ಮೃತಪಟ್ಟಿದ್ದು, ಗದ್ದೆಯ ತೋಡಿನಲ್ಲಿ ನೀರು ಕುಡಿಯುತ್ತಿದ್ದಾಗ ನೀರಿನ ಮೇಲೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿದೆ. ತಕ್ಷಣ ವಿದ್ಯುತ್ ಕಡಿತಗೊಂಡ ಪರಿಣಾಮ ಬೇರೆ ಹಸುಗಳು ಪಾರಾಗಿವೆ. ಮೃತಪಟ್ಟ ಹಸು ಸುಮಾರು 50 ಸಾವಿರ ರೂ. ಬೆಲೆಬಾಳಲಿದೆ ಎಂದು ಮಾಲೀಕ ಪುಚ್ಚಿಮಾಡ ಪ್ರಕಾಶ್ ಪೂಣಚ್ಚ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಉತ್ತಮ ಮೌಲ್ಯ ಅಳವಡಿಸಿಕೊಳ್ಳಬೇಕು

ಕುಶಾಲನಗರ, ಜ.11– ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾಗುವ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಜಿಪಂ ಮಾಜಿ ಸದಸ್ಯ ವಿ.ಪಿ.ಶಶಿಧರ್ ಹೇಳಿದರು.

ಸಮೀಪದ ಶಿರಂಗಾಲದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆದರ್ಶ ವಿದ್ಯಾರ್ಥಿ ಸಂಘ ಹಾಗೂ ಕಾಲೇಜು ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕಠಿಣ ಅಭ್ಯಾಸದೊಂದಿಗೆ ಉತ್ತಮ ಫಲಿತಾಂಶ ತಂದು ಸಂಸ್ಥೆ ಹಾಗೂ ಪೋಷಕರಿಗೆ ಕೀರ್ತಿ ತರಬೇಕು ಎಂದರು.

ಡಿಡಿಪಿಐ ಸಿ.ಪುಟ್ಟರಾಜು, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಎನ್.ಎಸ್.ರಮೇಶ್, ಕೂಡಿಗೆ ಡಯಟ್ ಉಪನ್ಯಾಸಕ ಹೆಚ್.ಡಿ.ಮಂಜುನಾಥ್, ಶಿರಂಗಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಬಿ.ರವಿ, ಗುರುಲಿಂಗಪ್ಪ ಇತರರಿದ್ದರು.

ಕಾಫಿ, ಕಾಳುಮೆಣಸು ಮಾರಾಟಗಾರರ ಮಾಹಿತಿ ಪಡೆಯಬೇಕು



ಮಡಿಕೇರಿ, ಜ.11–ಕಾಫಿ ಮತ್ತು ಕಾಳುಮೆಣಸು ಖರೀದಿಸುವಾಗ ವ್ಯಾಪಾರಸ್ಥರು ಮಾರಾಟಗಾರರ ಸಂಪೂರ್ಣ ಮಾಹಿತಿಯನ್ನು ಪಡೆಯಬೇಕು. ತಪ್ಪಿದಲ್ಲಿ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಸಾಧ್ಯತೆಗಳಿವೆ ಎಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿನ ವ್ಯಾಪಾರಸ್ಥರು ಕಾಫಿ ಮತ್ತು ಕಾಳುಮೆಣಸು ಮಾರಾಟಗಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆಯನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಬೆಳೆ ಖರೀದಿಸುವಾಗ ಸಂಶಯ ಉಂಟಾದಲ್ಲಿ ಅಂತಹ ವ್ಯಕ್ತಿಗಳ ಭಾವಚಿತ್ರವನ್ನು ತೆಗೆದುಕೊಳ್ಳಬೇಕು. ಮಾರಾಟಗಾರರ ಹಿನ್ನೆಲೆ ಪರಿಶೀಲಿಸಿ, ಎಚ್ಚರಿಕೆಯಿಂದ ವ್ಯವಹರಿಸಬೇಕು ಎಂದು ಸೂಚನೆ ನೀಡಿದ್ದಾರೆ. ಸ್ಥಳೀಯ ಪೊಲೀಸ್ ಠಾಣಾಧಿಕಾರಿಗಳು ಪರಿಶೀಲಿಸುವಾಗ ಕಾಫಿ ಮತ್ತು ಕಾಳುಮೆಣಸು ಖರೀದಿದಾರರ ವಿವರವನ್ನು ಸಂಗ್ರಹಿಸದೇ ಇರುವುದು ಕಂಡು ಬಂದಲ್ಲಿ ಅಂತಹ ವ್ಯಾಪಾರಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು. ಸದರಿಯವರಿಗೆ ನ್ಯಾಯಾಲಯ 3 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

ಶುಶ್ರೂಷಕರ ಸೇವೆ ಅಮೂಲ್ಯ: ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರ



ಚಾಮರಾಜನಗರದ ಜಿಲ್ಲಾಸ್ಪತ್ರೆ ಆವರಣದ ಸರ್ಕಾರಿ ಶುಶ್ರೂಷಕರ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶುಶ್ರೂಷಕ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರ, ಆರೋಗ್ಯ ತರಬೇತಿ ಸಂಸ್ಥೆಯ ಆಡಳಿತಾಧಿಕಾರಿ ಆಶಾ, ಪ್ರಾಂಶುಪಾಲ ಮಹಮ್ಮದ್ ಕುದರತ್ ಮತ್ತಿತರರಿದ್ದರು.

ಚಾಮರಾಜನಗರ, ಜ.11– ಶುಶ್ರೂಷಕರ ಸೇವೆ ಅಮೂಲ್ಯವಾದದ್ದು, ಪ್ರಾಮಾಣಿಕತೆಯಿಂದ ಸೇವೆ ಮಾಡಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರ ತಿಳಿಸಿದರು.

ನಗರದ ಜಿಲ್ಲಾಸ್ಪತ್ರೆ ಆವರಣದ ಸರ್ಕಾರಿ ಶುಶ್ರೂಷಕರ ಶಾಲೆಯಲ್ಲಿ ನಡೆದ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಸ್ಪತ್ರೆಗಳಲ್ಲಿ ಶುಶ್ರೂಷಕರ ಸೇವೆ ಬಹಳ ಮುಖ್ಯವಾಗಿದೆ. ವೈದ್ಯರ ಸಲಹೆಯಂತೆ ರೋಗಿಗಳಿಗೆ ಚಿಕಿತ್ಸೆ ನೀಡುವುದೇ ಶುಶ್ರೂಷಕರು. ಶುಶ್ರೂಷಕ ವಿದ್ಯಾರ್ಥಿಗಳು ಕಲಿಕೆಗೆ ಹೆಚ್ಚು ಒತ್ತು ನೀಡಬೇಕು. ಬೇರೆ ವಿಚಾರಗಳಿಗೆ ಕಿವಿಗೊಡದೆ ನಿಮ್ಮ ತರಬೇತಿಗಳ ಕಡೆ ಗಮನವಹಿಸಿದರೆ ಹೆಚ್ಚು ಅಂಕ ಪಡೆಯಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆ ಉತ್ತಮ ಸೇವೆಗಳನ್ನು ನೀಡುತ್ತಿದೆ. ಉತ್ತಮ ಪ್ರಾಂಶುಪಾಲರು, ಬೋಧಕರು ಇದ್ದಾರೆ. ಅವರು ನೀಡುವ ಸಲಹೆಗಳನ್ನು ಪಡೆದು ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳಬೇಕು. ಆಸ್ಪತ್ರೆಗಳಲ್ಲಿ ರೋಗಿಗಳೊಂದಿಗೆ ಸಂತೋಷದಿಂದ ಇರಬೇಕು. ನಿಮ್ಮ ಸಂತೋಷವೇ ಅವರು ಬೇಗ ಗುಣಮುಖರಾಗಲು ಕಾರಣ ಎಂದರು.

ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆಯ ಆಡಳಿತಾಧಿಕಾರಿ ಆಶಾ ಮಾತನಾಡಿ, ಜಿಲ್ಲೆಯ ಸರ್ಕಾರಿ ಶುಶ್ರೂಷಕರ ಶಾಲೆಯ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಜಿಲ್ಲೆಗೆ ಕೀರ್ತಿತಂದಿದ್ದಾರೆ. ಅವರ ಕಲಿಕೆ ಇನ್ನು ಹೆಚ್ಚಿನ ಓದಿನಕಡೆಗೆ ಕರೆದೊಯ್ಯುಬೇಕಾಗಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಮಹಮ್ಮದ್ ಕುದರತ್ ಮಾತನಾಡಿ, ಚಾಮರಾಜನಗರದ ಶುಶ್ರೂಷಕರ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳು ಶಿಸ್ತಿನಿಂದ ಕೂಡಿದ್ದಾರೆ. ಇದುವರೆಗೆ ನಮ್ಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಹೊರದೇಶದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲೆ ಗಂಗಮ್ಮ, ತರಬೇತುದಾರರಾದ ವೆಂಕಟಲಕ್ಷ್ಮಮ್ಮ, ಬೋಧಕರಾದ ಪ್ರೇಮಾ ಹಾಜರಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. 3ನೇ ವರ್ಷ ಮುಗಿದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಜನತಾ ದರ್ಶನದ 456 ಅರ್ಜಿ ಇತ್ಯರ್ಥ

• ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ • ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾಹಿತಿ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜನತಾ ದರ್ಶನದ ಅರ್ಜಿಗಳ ವಿಲೇವಾರಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿದರು. ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಬೀಬ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಮತ್ತಿತರ ಅಧಿಕಾರಿಗಳು ಇದ್ದರು.

ಚಾಮರಾಜನಗರ, ಜ.11– ಜಿಲ್ಲೆಯ ವಿವಿಧೆಡೆ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ 489 ಅರ್ಜಿಗಳ ಪೈಕಿ 456 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಜನತಾ ದರ್ಶನದ ಅರ್ಜಿಗಳ ವಿಲೇವಾರಿ ಮತ್ತು ಪರಿಹಾರ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಸೆ.25ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಮಟ್ಟದ ಜನತಾ ದರ್ಶನದಲ್ಲಿ ಸ್ವೀಕರಿಸಲಾಗಿದ್ದ 221 ಅರ್ಜಿಗಳಲ್ಲಿ 216 ಅರ್ಜಿಗಳನ್ನು ವಿಲೇವಾರಿಗೊಳಿಸಲಾಗಿದೆ. ಅ.13ರಂದು ಗುಂಡ್ಲುಪೇಟೆ ತಾಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ನಡೆದ ಜನತಾ ದರ್ಶನದ ಎಲ್ಲಾ 131 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ನ27ರಂದು ಕೊಳ್ಳೇಗಾಲ ತಾಲೂಕು ಮಟ್ಟದ ಜನತಾ ದರ್ಶನದಲ್ಲಿ ಶಾಸಕರ ನೇತೃತ್ವದಲ್ಲಿ ಸಲ್ಲಿಕೆಯಾದ 137 ಅರ್ಜಿಗಳಲ್ಲಿ 109 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕರಿಂದ ಸಲ್ಲಿಕೆಯಾಗುವ ದೂರು, ಸಮಸ್ಯೆ, ಕುಂದುಕೊರತೆಗಳ ಅರ್ಜಿಗಳನ್ನು ವಿಳಂಬ ಮಾಡದೇ ಪರಿಹರಿಸಬೇಕು. ಜನರ ಸಂಕಷ್ಟಗಳಿಗೆ ಸ್ಪಂದಿಸಿ ಅರ್ಜಿಗಳನ್ನು ಸೂಕ್ತವಾಗಿ ಇತ್ಯರ್ಥಪಡಿಸಬೇಕು. ವಿಳಂಬ ಧೋರಣೆಗೆ ಅವಕಾಶವಾಗಬಾರದು. ಅರ್ಜಿಗಳನ್ನು ಸ್ವೀಕರಿಸಿದ ಬಳಿಕ ಕೂಲಂಕಷವಾಗಿ ಪರಿಶೀಲಿಸಬೇಕು. ಸಮಸ್ಯೆ ಇತ್ಯರ್ಥಕ್ಕೆ ಪರಿಹಾರಗಳನ್ನು ಕಂಡುಕೊಂಡು ದೂರುದಾರರು ಹಾಗೂ ಅರ್ಜಿದಾರರಿಗೆ ತಿಳಿಸಬೇಕು. ನಿಮ್ಮ ಹಂತ ದಲ್ಲೇ ಪರಿಹರಿಸಲು ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಉನ್ನತ ಹಂತಕ್ಕೆ ಕಳುಹಿಸಿಕೊಡಬೇಕು. ಸ್ವೀಕರಿಸಿದ ಅರ್ಜಿಗಳಿಗೆ ಸೂಕ್ತ ಹಿಂಬರಹ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

> ಸರ್ಕಾರದ ಪ್ರಮುಖ ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮೀ ಫಲಾನುಭವಿಗಳು ಯಾವುದೇ ತಾಂತ್ರಿಕ ತೊಂದರೆಯಿಂದ ಸೌಲಭ್ಯಗಳಿಂದ ವಂಚಿತರಾಗಬಾರದು. ತಾಂತ್ರಿಕ ತೊಂದರೆ, ಇನ್ನಿತರ ಸಮಸ್ಯೆಗಳ ಇತ್ಯರ್ಥಕ್ಕಾಗಿ ತಾಲೂಕು ಮಟ್ಟದಲ್ಲಿ ಶಿಬಿರ ನಡೆಸಲಾಗಿದೆ. ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಲು ಅಧಿಕಾರಿಗಳು ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಫಲಾನುಭವಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಆದಷ್ಟು ಬೇಗನೇ ಇತ್ಯರ್ಥಪಡಿಸಬೇಕು. -ಶಿಲ್ಪಾನಾಗ್, ಜಿಲ್ಲಾಧಿಕಾರಿ

ಸಭೆಯಲ್ಲಿ ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಬೀಬ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಹನುಮೇಗೌಡ, ಸಹಕಾರ ಸಂಘಗಳ ಉಪನಿಬಂಧಕಿ ಜ್ಯೋತಿ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಪ್ರಸನ್ನ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬಂದಿಗೌಡನಹಳ್ಳಿ ಡೇರಿ ಬಿಜೆಪಿ ತೆಕ್ಕೆಗೆ



ಚಾಮರಾಜನಗರ ತಾಲೂಕಿನ ಬಂದಿಗೌಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಬಿಜೆಪಿ ಬೆಂಬಲಿತ ನಿರ್ದೇಶಕರು ಸಂಭ್ರಮಿಸಿದರು.

ಚಾಮರಾಜನಗರ, ಜ.11– ತಾಲೂಕಿನ ಬಂದಿಗೌಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತರು ಗೆಲುವು ಸಾಧಿಸಿದ್ದಾರೆ.

9 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ 9 ಹಾಗೂ ಕಾಂಗ್ರೆಸ್‌ನ ಮೂವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಬಿಜೆಪಿ ಬೆಂಬಲಿತರಾದ ಗಿರೀಶ್, ಕುಮಾರ್, ನೀಲಮ್ಮ, ಬಿ.ಕೆ.ಬಂಕಪ್ಪ, ನಾಗರಾಜು, ಬಿ.ಗುರುಮಲ್ಲಪ್ಪ ಹಾಗೂ ಕಾಂಗ್ರೆಸ್ ಬೆಂಬಲಿತರಾದ ಮಹದೇವಪ್ಪ, ಗಿರೀಶ್, ಎಸ್.ಗುರುತಾಯಮ್ಮ ಆಯ್ಕೆಯಾಗಿದ್ದಾರೆ.

ಗ್ರಾಪಂ ಸದಸ್ಯ ಎನ್.ಮಲ್ಲೇಶ್, ವಾಟಳ್ ನಾಗರಾಜಪ್ಪ, ವೀರಭದ್ರಪ್ಪ, ದೇವಣ್ಣ, ಶಾಂತಮಲ್ಲಪ್ಪ, ಡೇರಿ ಮಾಜಿ ನಿರ್ದೇಶಕರಾದ ಮಲ್ಲೇಶ್, ನಂಜುಂಡಸ್ವಾಮಿ, ನಾಗರಾಜಪ್ಪ, ಕೆ.ವಿ.ಶಿವಣ್ಣ, ಶಿವಮಲ್ಲಪ್ಪ, ಕೆಂಪದೇವಮ್ಮ, ಚಂದ್ರು, ಗಿರೀಶ್, ಅನಂದ್, ಬಸವರಾಜು, ಮರಿಸ್ವಾಮಿ, ನಿಂಗರಾಜು, ಶಿವು, ಆಶೋಕ್, ಮಹೇಶ್ ಇದ್ದರು.

ನೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷೆ, ಅಧ್ಯಕ್ಷರಿಗೆ ಸನ್ಮಾನ



ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷೆ ನರ್ಗೀಸ್ ಬಾನು ಹಾಗೂ ಅಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಎಂಬಿಬಿಎಸ್ ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳು ಸನ್ಮಾನಿಸಿದರು.


ಚಾಮರಾಜನಗರ, ಜ.11–ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷೆ ನರ್ಗೀಸ್ ಬಾನು ಹಾಗೂ ಅಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಎಂಬಿಬಿಎಸ್ ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳು ಸನ್ಮಾನಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ನರ್ಗೀಸ್‌ಬಾನು, ಇತ್ತೀಚಿನ ಯುವ ಪೀಳಿಗೆ ಕ್ರೀಡೆಯಲ್ಲಿ ಆಸಕ್ತಿ ತೋರಿಸುತ್ತಿರುವುದು ಸಂತಸದ ವಿಷಯ. ಇನ್ನೂ ಹೆಚ್ಚು ಹೆಚ್ಚು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಮೂಲಕ ಕೀರ್ತಿ ತರುವಂತಹ ಕೆಲಸವನ್ನು ವಿದ್ಯಾರ್ಥಿಗಳು ಮಾಡಬೇಕು ಎಂದರು.

ಅಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸಹ ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಕ್ರೀಡೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಮತ್ತಷ್ಟು ಹೆಚ್ಚು ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಚಾಮುಲ್‌ನ ಗುಣ, ತಾಂತ್ರಿಕ ಅಧಿಕಾರಿ ಅಲಿಖಾನ್ ಸಾಹೇಬ್, ನಾಗಲಕ್ಷ್ಮೀ ಶ್ರೀನಿವಾಸ ಪ್ರಸಾದ್, ಎಸ್.ಹರ್ಷಿತ್, ಹೃತಿಕ್ ಜೆ.ಗೌಡ, ಬಿ.ಎಂ.ಸುಹಾಸ್, ನೀರಜ್‌ಗೌಡ, ಎಂ.ರವಿಶಂಕರ್, ಬಿ.ಎಸ್.ಸುಹಾಸ್, ಅಚ್ಯುತ್‌ಗೌಡ, ಮಧುಸೂಧನ್, ಯಶವಂತ್, ನಿಶ್ಚಲ್, ಪೃಥ್ವಿರಾಜ್, ಸೃಜನ್, ಮಂಯೂರ್, ರಾಕೇಶ್, ಸಿದ್ದನಗೌಡ ಪಾಟೀಲ್ ಇನ್ನಿತರರಿದ್ದರು.

ಬಿಳಿಗಿರಿರಂಗನಬೆಟ್ಟಕ್ಕೆ ಜ.15, 16ರಂದು ದ್ವಿಚಕ್ರ ವಾಹನ ನಿರ್ಬಂಧ



ಯಳಂದೂರು, ಜ.11– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಜ.15 ಮತ್ತು 16ರಂದು ನಡೆಯಲಿರುವ ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ ಹಾಗೂ ಚಿಕ್ಕಜಾತ್ರೆ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ಹೊರಡಿಸಿದ್ದಾರೆ.

ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ ಹಾಗೂ ಚಿಕ್ಕಜಾತ್ರೆಗೆ ಜಿಲ್ಲೆ ಮತ್ತು ಹೊರ ಜಿಲ್ಲೆಗಳಿಂದ ಲಕ್ಷಕ್ಕೂ ಅಧಿಕ ಭಕ್ತರು ಸೇರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿ ಸಾರ್ವಜನಿಕರು ಹಾಗೂ ಸಾರಿಗೆ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಲಿದೆ. ಬಿಳಿಗಿರಿರಂಗನ ಬೆಟ್ಟದ ರಸ್ತೆ ತುಂಬಾ ಕಡಿದಾದ ಹಾಗೂ ಕಿರಿದಾಗಿರುವುದರಿಂದ ಸಂಚಾರದಲ್ಲಿ ದಟ್ಟಣೆಯಾಗಿ ಅಪಘಾತಗಳ ಮುನ್ನೆಚ್ಚರಿಕೆಯಾಗಿ ದ್ವಿಚಕ್ರ ವಾಹನಗಳನ್ನು ನಿಷೇಧಿಸಲಾಗಿದೆ. ಯಳಂದೂರು ತಾಲೂಕಿನ ಗುಂಬಳ್ಳಿ ಮತ್ತು ಚಾಮರಾಜನಗರ ತಾಲೂಕಿನ ಹೊಂಡರಬಾಳು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್‌ಗಳ ಮೂಲಕ ಬಿಳಿಗಿರಿರಂಗನಬೆಟ್ಟಕ್ಕೆ ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ಜ.15 ಮತ್ತು 16ರಂದು ತಾತ್ಕಾಲಿಕವಾಗಿ ನಿರ್ಬಂಧಿಸಿರುವುದಾಗಿ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನವರಿ 31ರಿಂದ ಫೆಬ್ರವರಿ 9ರವರೆಗೆ ಸಂಸತ್ ಬಜೆಟ್ ಅಧಿವೇಶನ ನಡೆಯುವ ಸಾಧ್ಯತೆ



ನವದೆಹಲಿ, ಜ.11–ಸಂಸತ್ ಬಜೆಟ್ ಅಧಿವೇಶನವು ಜನವರಿ 31ರಿಂದ ಫೆಬ್ರವರಿ 9ರವರೆಗೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜನವರಿ 31ರಂದು ಜಂಟಿ ಸದನ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಅವರು ಹೇಳಿದ್ದಾರೆ. ಫೆಬ್ರವರಿ 1ರಂದು ಕೇಂದ್ರ ಸರ್ಕಾರ 'ಮಧ್ಯಂತರ ಬಜೆಟ್' ಮಂಡಿಸಲಿದೆ. ನಂತರ ಹೊಸ ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಿದೆ. 17ನೇ ಲೋಕಸಭೆಯ ಅವಧಿ ಜೂನ್ 16ರಂದು ಕೊನೆಗೊಳ್ಳುವುದರಿಂದ, ಇದು ಸಂಸತ್ತಿನ ಕೊನೆಯ ಅಧಿವೇಶನವಾಗಿದೆ. 2019ರಲ್ಲಿ, ಮಾರ್ಚ್ 10ರಂದು ಲೋಕಸಭೆ ಚುನಾವಣೆ ಘೋಷಿಸಲಾಗಿತ್ತು ಮತ್ತು ಏಪ್ರಿಲ್ 11 ಮತ್ತು ಮೇ 19ರ ನಡುವೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು.

ಒಂದನೇ ಪುಟದಿಂದ

ಇಂದು 'ಯುವ ನಿಧಿ' ಜಾರಿ

ಫಲಾನುಭವಿ ನಿರಂತರ 24 ತಿಂಗಳು ಅಥವಾ ಉದ್ಯೋಗ ದೊರೆಯುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಭತ್ಯೆ ಪಡೆಯಲಿದ್ದಾನೆ. ಪದವಿ ಪಡೆದು ಉದ್ಯೋಗದಲ್ಲಿರುವವರಿಗೆ ಭತ್ಯೆ ಸೌಲಭ್ಯ ಇಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಫಲಾನುಭವಿ ಅರ್ಜಿಯೊಂದಿಗೆ ಆಧಾರ್ ಕಾರ್ಡ್, ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತೇರ್ಗಡೆ ಹೊಂದಿದ ಅಂಕಪಟ್ಟಿ, ಬ್ಯಾಂಕ್ ಪಾಸ್‌ಬುಕ್, ಪದವಿ ಅಥವಾ ಡಿಪ್ಲೊಮಾ ಸರ್ಟಿಫಿಕೇಟ್ ಪ್ರತಿ ಲಗತ್ತಿಸಬೇಕು.

ಸುಂದರ ನಗರಿ ಮೈಸೂರು

ಆದರೆ ಇದೇ ಮೊದಲ ಬಾರಿ 27ನೇ ಸ್ಥಾನಕ್ಕೆ ದೂಡಲ್ಪಟ್ಟಿದ್ದು, ಯಾವ ವಿಭಾಗದಲ್ಲೂ ಉತ್ತಮ ಸ್ಪರ್ಧೆ ನೀಡದಿರುವುದು ಅತ್ಯಂತ ವಿಷಾದನೀಯ ಸಂಗತಿ. ಕೇಂದ್ರ ನಗರಾಭಿವೃದ್ಧಿ ಸಚಿವಾಲಯದಿಂದ ಸ್ವಚ್ಛ ನಗರ ಸಮೀಕ್ಷೆಗೆ ನಿಯೋಜನೆಗೊಂಡಿದ್ದ ಅಧಿಕಾರಿಗಳ ತಂಡವು ಕಳೆದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮೈಸೂರಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿತ್ತು. ಸ್ವಚ್ಛತೆಯಲ್ಲಿ ನಾಗರಿಕರು ನೀಡಿದ ಅಭಿಪ್ರಾಯಗಳ ಆಧಾರದ ಮೇಲೂ ಸರ್ವೇಕ್ಷಣಾ ಅಧಿಕಾರಿಗಳು ಅಂಕಗಳನ್ನು ನೀಡಿದ್ದರು. ಆದರೆ ವಿದ್ಯಾರಣ್ಯಪುರಂನ ಸೀವೇಜ್ ಫಾರಂನಲ್ಲಿ ಬೆಟ್ಟದಂತೆ ರಾಶಿ ಬಿದ್ದಿರುವ ಕಸ, ಅದರಿಂದ ಹೊರಸೂಸುವ ದುರ್ವಾಸನೆಯನ್ನು ಸಹಿಸಲಾಗದ ಸುತ್ತಮುತ್ತಲ ಜನರ ನೋವಿನ ಪ್ರತಿಕ್ರಿಯೆ ಈ ಬಾರಿ ದೊಡ್ಡ ಹೊಡೆತ ನೀಡಿರಬಹುದು. ಸ್ವಚ್ಛತೆ ನಿರ್ವಹಣೆ ಜೊತೆಗೆ ನಾಗರಿಕರ ಸಹಭಾಗಿತ್ವ ಬಹಳ ಮುಖ್ಯ. ಆದರೆ ಈ ಬಾರಿಯೂ ಸ್ವಚ್ಛ ಸರ್ವೇಕ್ಷಣೆಯಲ್ಲಿ ಭಾಗವಹಿಸುವಿಕೆಯಲ್ಲಿ ನಾಗರಿಕರು ಆಸಕ್ತಿ ತೋರದಿರುವುದು ಹಿನ್ನಡೆಗೆ ಪ್ರಮುಖ ಕಾರಣ ಎನ್ನಲಾಗಿದೆ.

ಜನರಿಗೆ ಈಗ ಸಂತೋಷವಾಗಿರಬಹುದು!

ಮಾಡಿಕೊಂಡು ಹಗಲಿರುಳು ಶ್ರಮಿಸುವ ಪೌರ ಕಾರ್ಮಿಕ ಬಂಧುಗಳ ಶ್ರಮವೂ ವ್ಯರ್ಥ. ಮೈಸೂರು ನಗರ 2015 ಮತ್ತು 16ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆಯಲ್ಲಿ ಸತತ ಎರಡು ಬಾರಿ ದೇಶದ ನಂ.1 ಸ್ವಚ್ಛ ನಗರ ಹಿರಿಮೆಗೆ ಪಾತ್ರವಾಗಿತ್ತು. ನಂತರದಲ್ಲಿ ಸ್ಪರ್ಧೆಯ ಸ್ವರೂಪ ಬದಲಾಗಿ ಜನಸಂಖ್ಯೆಗೆ ಅನುಗುಣವಾಗಿಯೂ ಸ್ಪರ್ಧೆ ಆಯೋಜಿಸಲಾಯಿತು. ಆದಾಗ್ಯೂ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ಟಾಪ್ 10ರೊಳಗೆ ಬರುತ್ತಿತ್ತು. ಅಂತೆಯೇ 2022ನೇ ಸಾಲಿನಲ್ಲೂ ಸ್ವಚ್ಛ ನಗರಗಳ ಪಟ್ಟಿಯಲ್ಲಿ 7 ಹಾಗೂ 3–10 ಲಕ್ಷ ಜನಸಂಖ್ಯೆ ವರ್ಗದಲ್ಲಿ ಮೊದಲ ಬಹುಮಾನ ಲಭಿಸಿತ್ತು. ಆದರೆ ಇದೇ ಮೊದಲ ಬಾರಿಗೆ 27ನೇ ಸ್ಥಾನಕ್ಕೆ ಕುಸಿದಿದ್ದು, ಜನಸಂಖ್ಯಾವಾರು ವಿಭಾಗದಲ್ಲೂ ಮೊದಲ ಸ್ಥಾನ ಕಳೆದುಕೊಂಡಿದೆ. ಇದಕ್ಕೆ ನೇರ ಹೊಣೆಗಾರರು ನಗರದಲ್ಲಿ ಕಂಡ ಕಂಡಲ್ಲಿ ಕಸ ಹಾಕುವ ಜನ ಹಾಗೂ ಅದನ್ನು ತಡೆಯುವಲ್ಲಿ ವಿಫಲವಾಗಿರುವ ಅಧಿಕಾರಿಗಳು. ಪೌರ ಬಂಧುಗಳು ನಿತ್ಯ ಮನೆ ಬಳಿಯೇ ಬಂದು ಕಸ ಸಂಗ್ರಹಿಸುತ್ತಾರೆ. ಟೀ ಅಂಗಡಿ, ಹೋಟೆಲ್ ಸೇರಿದಂತೆ ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗುವ ಮಳಿಗೆಗಳಲ್ಲಿ ದಿನಕ್ಕೆ ಎರಡು ಬಾರಿ ಕಸ ಸಂಗ್ರಹಿಸುತ್ತಾರೆ. ವಾಣಿಜ್ಯ ಮಳಿಗೆಗಳಿಂದಲೂ ಬಳಿಗೂ ತೆರಳಿ ತ್ಯಾಜ್ಯ ಪಡೆಯುತ್ತಾರೆ. ಅಲ್ಲದೆ '(ಅ)ನಾಗರಿಕರು' ರಸ್ತೆ ಬದಿ ಬಿಸಾಡುವ ಕಸವನ್ನೂ ತೆರವುಗೊಳಿಸುತ್ತಾರೆ. ಇಷ್ಟಾದರೂ ಕೆಲವರಿಗೆ ಪ್ಲಾಸ್ಟಿಕ್ ಕವರ್‌ನಲ್ಲಿ ಕಟ್ಟಿ, ಚೀಲದಲ್ಲಿ ತುಂಬಿ ಕಂಡ ಕಂಡ ಕಡೆ ಇಷ್ಟಬಂದಂತೆ ಬಿಸಾಡಿದರೆ ಸಮಾಧಾನ ಅನ್ನಿಸುತ್ತದೆ. ಪೌರ ಕಾರ್ಮಿಕರು ಸ್ವಚ್ಛ ಮಾಡಿ ಹೋದ ಹಿಂದೆಯೇ ಈ ರೀತಿ ಹೇಸಿಗೆ ಮೆರೆಯುತ್ತಿದ್ದಾರೆ. ವಿದ್ಯಾವಂತರು, ಉದ್ಯೋಗಸ್ಥರು, ತಮ್ಮ ಜ್ಞಾನ–ಧನದಿಂದ ಏನನ್ನಾದರೂ ಮಾಡುತ್ತೇವೆಂಬ ಹುಂಬತನವುಳ್ಳವರೇ ಹೀಗೆ ಮಾಡುತ್ತಿರುವುದು ವಿಷಾದನೀಯ ಸಂಗತಿ. ಈ ಕೆಟ್ಟ ಮನಃಸ್ಥಿತಿಯುಳ್ಳವರು ಸ್ವಚ್ಛ ಸರ್ವೇಕ್ಷಣೆಯಲ್ಲಿ ಪಾಲ್ಗೊಂಡು ಫೀಡ್‌ಬ್ಯಾಕ್ ನೀಡಲು ಹೇಗೆ ಸಾಧ್ಯ?.

ಇನ್ನು ಸಂಬಂಧಪಟ್ಟ ಅಧಿಕಾರಿಗಳಂತೂ ಮಾತಿನ ಶೂರರ. ಮಾತೆತ್ತಿದರೆ ಕಸ ಸುರಿಯುವವರಿಗೆ ದಂಡ ಹಾಕುತ್ತೇವೆ, ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವುದನ್ನು ಬಿಟ್ಟರೆ ಮತ್ತೇನೂ ಮಾಡಲಾರರು. ನಿಯಮಾನುಸಾರ ಕ್ರಮ ಕೈಗೊಳ್ಳುವುದಕ್ಕೂ ಅವರಿಂದ ಸಾಧ್ಯವಾಗುತ್ತಿಲ್ಲ. ಎಲ್ಲೆಂದರಲ್ಲಿ ಕಸ ಹಾಗೂ ಕಟ್ಟಡ ತ್ಯಾಜ್ಯ ರಾಶಿ ರಾಶಿ ಬಿದ್ದಿದ್ದರೂ ತಮ್ಮ ಕಾರಿನ ಗ್ಲಾಸ್ ಏರಿಸಿಕೊಂಡು ಮುಂದೆ ಸಾಗುತ್ತಾರೆ. ಜನಪ್ರತಿನಿಧಿಗಳಾದರೂ ಕಾಳಜಿ ಇದ್ದಿದ್ದರೆ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಬಹುದಿತ್ತು. ಒಟ್ಟಾರೆ ಮನಸ್ಸು ಸ್ವಚ್ಛವಾಗುವವರೆಗೆ ಮೈಸೂರು ಮತ್ತೆ ನಂ.1 ಸ್ವಚ್ಛ ನಗರವಾಗಲು ಸಾಧ್ಯವೇ ಇಲ್ಲ.

ಮತ್ತೆ ಕಾಡಾನೆ ಸೆರೆ 'ಆಪರೇಷನ್ ಜಂಬೋ'

ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 50ಕ್ಕೂ ಹೆಚ್ಚು ಕಾಡಾನೆಗಳು ಬಂದಿರುವ ಬೇಲೂರು ತಾಲೂಕಿನಲ್ಲಿ ಕಾರ್ಯಾಚರಣೆ ಆರಂಭಿಸಿದ್ದೇವೆ. ಎರಡು ತಿಂಗಳ ಹಿಂದೆ ತಾಲೂಕು ವ್ಯಾಪ್ತಿಗೆ ಬಂದ ಈ ಕಾಡಾನೆಗಳನ್ನು ಆನೆಗಳ ಆವಾಸ ಸ್ಥಾನಕ್ಕೆ ಓಡಿಸಬೇಕಿದೆ ಎಂದಿದ್ದಾರೆ. ಈ ಬಾರಿ ಎಂಟು ಆನೆಗಳ ಮೂಲಕ ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದ್ದು, ಅಭಿಮನ್ಯು ಆನೆ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಲಿದೆ. ಆನೆಗಳು ಈಗಾಗಲೇ ಬೇಲೂರು ತಾಲೂಕಿನ ಬಿಕ್ಕೋಡು ಆನೆ ಶಿಬಿರವನ್ನು ತಲುಪಿವೆ ಎಂದು ಅವರು ಹೇಳಿದ್ದಾರೆ.

ಬ್ರೈನ್ ಮ್ಯಾಪಿಂಗ್, ನಾರ್ಕೋ ಅನಾಲಿಸಿಸ್

ಪರೀಕ್ಷೆಗೊಳಪಡಿಸಲಾಯಿತು. ತರುವಾಯ ಪರೀಕ್ಷಾ ವಿಧಾನಗಳನ್ನು ಆರಂಭಿಸಲಾಯಿತು.

ಮನೋರಂಜನ್ ಹಾಗೂ ಸಾಗರ್ ಶರ್ಮಾ ದೇಹಕ್ಕೆ ಸೋಡಿಯಂ ಪೆಂಟೋಥಾಲ್ ಇಂಜೆಕ್ಷನ್ ನೀಡಲಾಯಿತು. ಈ ವೇಳೆ ಆರೋಪಿ ನಿದ್ರಾ ಸ್ಥಿತಿ ತಲುಪುತ್ತಾನೆ. ಆಗ ಮನಸ್ಥಿತಿ ತಟಸ್ಥ ಗೊಳ್ಳುತ್ತದೆ. ಈ ಸಂದರ್ಭದಲ್ಲಿ ವೈದ್ಯರ ಸಮಕ್ಷಮ ದಲ್ಲಿ ಪೊಲೀಸರು ಇಬ್ಬರಿಗೂ ತನಿಖೆಗೆ ಅವಶ್ಯವಿರುವ ಮಾಹಿತಿ ಕಲೆ ಹಾಕುತ್ತಾರೆ. ಈ ಪರೀಕ್ಷೆಗಳನ್ನು ಒಂದಾದ ಮೇಲೆ ಒಂದ ರಂತೆ ಮಾಡಬೇಕಿರುವ ಕಾರಣ ಶುಕ್ರವಾರ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಉಳಿದ ಆರೋಪಿಗಳಾದ ಅಮೋಲ್ ಶಿಂಧೆ, ಲಲಿತ್ ಝಾ ಹಾಗೂ ಮಹೇಶ್ ಕುಮಾವತ್ ಅವರನ್ನು ನಾಳೆ ನಂತರ ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲಾಗುವುದು. ಇವರಿಂದ ಕೂಡ ಹಲವು ಮಾಹಿತಿ ಕಲೆ ಹಾಕಲು ದೆಹಲಿ ಪೊಲೀಸರ ವಿಶೇಷ ತಂಡ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮತ್ತೊಬ್ಬ ಆರೋಪಿ ನೀಲಂ ಆಜಾದ್‌ಳನ್ನು ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲು ಪೊಲೀಸರು ಮುಂದಾಗಿದ್ದರು. ಆದರೆ ಆಕೆ ಇದಕ್ಕೆ ಸಮ್ಮತಿ ಸೂಚಿಸದೆ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸದ್ಯಕ್ಕೆ ನೀಲಂ ಆಜಾದ್‌ಳನ್ನು ಪಾಲಿಗ್ರಾಫ್ ಟೆಸ್ಟ್ ಒಳಪಡಿಸಿಲ್ಲ. ಸಂಸತ್ ಭವನಕ್ಕೆ ನುಗ್ಗಲು ಕಾರಣವೇನು, ಇದಕ್ಕೆ ಉತ್ತೇಜನ ನೀಡಿದವರು ಯಾರು, ಈ ಕೃತ್ಯದಲ್ಲಿ ಮತ್ಯಾರು ಭಾಗಿಯಾಗಿದ್ದಾರೆ, ನಿಮಗಿರುವ ಹಣಕಾಸು ಮೂಲಗಳು ಯಾವುವು, ಇದೇ ರೀತಿ ಮತ್ತೆ ಬೇರೆ ಯಾವ ಕಡೆ ಯಾವ ರೀತಿಯ ಕೃತ್ಯ ಎಸಗಲು ಸಂಚು ರೂಪಿಸಿದ್ದೀರಾ, ಭಯೋತ್ಪಾದನಾ ಸಂಘಟನೆಗಳು ನಿಮ್ಮ ಸಂಪರ್ಕದಲ್ಲಿವೆಯೇ, ಎಂಬಿವೇ ಹಲವು ಪ್ರಶ್ನೆಗಳನ್ನು ಕೇಳಲು ದೆಹಲಿ ಪೊಲೀಸರು ಸಿದ್ಧರಾಗಿದ್ದಾರೆ ಎನ್ನಲಾಗಿದೆ.

ಇಬ್ಬರು ಧೈರ್ಯವಾಗಿ ಫೋಟೋಗೆ ಪೋಸ್ ಕೊಟ್ಟರು

ಸಂಸತ್ ಭವನದಲ್ಲಿ ಲೋಕಸಭೆ ಕಲಾಪದಲ್ಲಿ ರಂಪಾಟ ಮಾಡಿದ ಮೈಸೂರಿನ ಮನೋರಂಜನ್ ಹಾಗೂ ಸಾಗರ್ ಶರ್ಮಾಗೆ ಸ್ವಲ್ಪವೂ ಪಶ್ಚಾತ್ತಾಪ ಮನಸ್ಥಿತಿ ಅವರ ಮುಖಭಾವದಲ್ಲಿ ಇಲ್ಲ. ನಾರ್ಕೋ ಅನಾಲಿಸಿಸ್ ಹಾಗೂ ಬ್ರೈನ್ ಮ್ಯಾಪಿಂಗ್ ಟೆಸ್ಟ್‌ಗಾಗಿ ಮನೋರಂಜನ್ ಹಾಗೂ ಸಾಗರ್ ಶರ್ಮಾರನ್ನು ಗುಜರಾತ್‌ನ ಫೋರೆನ್ಸಿಕ್ ಲ್ಯಾಬ್‌ಗೆ ನಿನ್ನೆ ರಾತ್ರಿ ಕರೆತಂದ ವೇಳೆ ಇಬ್ಬರು ಸಹಜವಾಗಿದ್ದರು. ಒಂದು ಸಣ್ಣ ತಪ್ಪು ಮಾಡಿದವರು ಪೊಲೀಸರು ಬಂಧಿಸಿದಾಗ ಪಶ್ಚಾತಾಪ ಭಾವ ತೋರುತ್ತಾರೆ. ಕೋರ್ಟ್ ಸೇರಿದಂತೆ ಇತರೆ ಪರೀಕ್ಷೆಗೆ ಒಳಪಡಿಸಿದರೆ, ಮಾಧ್ಯಮದವರ ಮುಂದೆ ಮುಖ ತೋರಲು ಅಂಜಿ, ಮುಚ್ಚಿಕೊಳ್ಳುತ್ತಾರೆ. ಆದರೆ ಫೋರೆನ್ಸಿಕ್ ಲ್ಯಾಬ್‌ಗೆ ಮನೋರಂಜನ್ ಹಾಗೂ ಸಾಗರ್ ಅವರನ್ನು ಪೊಲೀಸರು ಜೀಪ್‌ನಲ್ಲಿ ಕರೆದುಕೊಂಡು ಹೋಗುವಾಗ ದಿಟ್ಟವಾಗಿಯೇ ಫೋಟೋಗೆ ಪೋಸ್ ಕೊಟ್ಟರು. ಇಬ್ಬರಲ್ಲಿ ಯಾವುದೇ ಅಳುಕು ಹಾಗೂ ಪಶ್ಚಾತ್ತಾಪದ ಭಾವ ಕಾಣಿಸಲಿಲ್ಲ.

ಅಂಗವಿಕಲರ ಹಕ್ಕು ರಕ್ಷಿಸಿ; ಉಜ್ವಲ ಭವಿಷ್ಯ ರೂಪಿಸಿ

ಪದ್ಮಶ್ರೀ ಪುರಸ್ಕೃತ ವಿಜ್ಞಾನಿ ಡಾ.ಸುಧಾ ಕೌಲ್ ಸಲಹೆ

ಮೈಸೂರು, ಜ.11(ಬಿಎಲ್‌ಯು)– ಅಂಗವಿಕಲರ ಹಕ್ಕುಗಳನ್ನು ರಕ್ಷಿಸಿ, ಅವರ ಉಜ್ವಲ ಭವಿಷ್ಯ ರೂಪಿಸುವ ಜವಾಬ್ದಾರಿ ಆಯಿಷ್ ಸೇರಿದಂತೆ ವಿಶೇಷ ಚೇತನ ಮಕ್ಕಳ ಆರೈಕೆ ಮಾಡುತ್ತಿರುವ ಶಿಕ್ಷಕರು, ಸಂವಹನಕಾರರು ಹಾಗೂ ವೈದ್ಯರ ಮೇಲಿದೆ ಎಂದು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೆರಿಬ್ರಲ್ ಪಾಲ್ಸಿ ಸಂಸ್ಥಾಪಕರೂ ಆದ ಪದ್ಮಶ್ರೀ ಪುರಸ್ಕೃತ ವಿಜ್ಞಾನಿ ಡಾ.ಸುಧಾ ಕೌಲ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಐಸಾಕ್ ಸಂಸ್ಥೆ ಆಯೋಜಿಸಿದ್ದ ಎರಡು ದಿನಗಳ ಆ್ಯಕ್ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಅಂಗವಿಕಲರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಪರಿಹರಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ಅಂಗವಿಕಲರಿಗೆ ಎಲ್ಲಾ ರೀತಿಯ ಅವಕಾಶಗಳು ಸಿಗಬೇಕು. ಈ ನಿಟ್ಟಿನಲ್ಲಿ ಯುವ ಸಂವಹನಕಾರರು, ಶಿಕ್ಷಕರು ಹಾಗೂ ವೈದ್ಯರು ಶ್ರಮಿಸಬೇಕು ಎಂದು ಡಾ.ಸುಧಾ ಕೌಲ್ ಹೇಳಿದರು.

ಮಿದುಳು ವಾತ (ಸೆರಿಬ್ರಲ್ ಪಾಲ್ಸಿ) ಸೇರಿದಂತೆ ಅಂಕವೈಕಲ್ಯ ಸಮಸ್ಯೆ ಎದುರಿಸುತ್ತಿರುವ ವಿಶೇಷ ಮಕ್ಕಳ ಆರೈಕೆ ಮಾಡುವುದು ನಿಜಕ್ಕೂ ಸವಾಲಿನ ಸಂಗತಿಯಾಗಿದೆ. ಇಂತಹ ಮಕ್ಕಳ ಜೊತೆ ಸಂವಹನಕಾರರು ಬೆರೆಯಬೇಕು. ಆ ಮಕ್ಕಳೊಂದಿಗೆ ಬೆರೆತು ಅವರಿಗೆ ಕೌಶಲ್ಯ ಕಲಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಮಾನಸ ಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಐಸಾಕ್ ಸಂಸ್ಥೆ ಆಯೋಜಿಸಿದ್ದ ಆ್ಯಕ್ ಸಮ್ಮೇಳನದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೆರಿಬ್ರಲ್ ಪಾಲ್ಸಿ ಸಂಸ್ಥಾಪಕಿ ಡಾ.ಸುಧಾ ಕೌಲ್ 'ಇ ಪ್ರೊಸಿಡಿಂಗ್ಸ್' ಪುಸ್ತಕ ಬಿಡುಗಡೆ ಮಾಡಿದರು.

ಇದಕ್ಕಾಗಿ ಸಂವಹನಕಾರರಿಗೆ ಜ್ಞಾನ ಹಾಗೂ ಅನುಭವ ಅತೀ ಮುಖ್ಯವಾಗಿರುತ್ತದೆ. ಒಟ್ಟಾರೆ ಸಂವಹನಕಾರರು ಮಕ್ಕಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿ ಅವರಲ್ಲಿ ಎಲ್ಲರಂತೆ ಬದುಕುವ ಭರವಸೆ ಮೂಡಿಸಬೇಕು ಎಂದು ಹೇಳಿದರು.

ವಿಶೇಷಚೇತನ ಮಕ್ಕಳ ಬಗ್ಗೆ ಅವರ ಕುಟುಂಬಸ್ಥರು ಧೈರ್ಯವಾಗಿ ಮಾತನಾಡಬೇಕು. ಈ ಮೂಲಕ ಮಕ್ಕಳ ಸಮಸ್ಯೆ ಪರಿಹಾರ ಮಾಡಲು ಸಹಾಯವಾಗುತ್ತದೆ ಎಂದು ಡಾ.ಸುಧಾ ಕೌಲ್ ತಿಳಿಸಿದರು.

ಇದೇ ವೇಳೆ ಮಾತನಾಡಿದ ಅಮೇರಿಕಾದ ಸಂವಹನ ಸಾಧನಗಳ ತಂತ್ರಜ್ಞ ಡೇವಿಡ್ ಗೋಲ್ಡ್ ಬರ್ಗ್, ಸಂವಹನ ಸಮಸ್ಯೆಯಿಂದ ಬಳಲುವ ಮಕ್ಕಳಿಗಾಗಿ ಅಮೇರಿಕಾದ ಪ್ರತಿಯೊಂದು ಶಾಲೆಯಲ್ಲಿ ಪ್ರತ್ಯೇಕವಾದ ತರಗತಿಗಳಿರುತ್ತವೆ. ಇಲ್ಲಿ ಮಕ್ಕಳಿಗೆ ಅತ್ಯಾಧುನಿಕ ಸಾಧನಗಳನ್ನು ವಿತರಣೆ ಮಾಡಿ ಅವರ ವಾಕ್ ಮತ್ತು ಶ್ರವಣ ಸಮಸ್ಯೆ ಪರಿಹಾರ ಮಾಡಲಾಗುವುದು ಎಂದು ಹೇಳಿದರು.

ಇತ್ತೀಚೆಗೆ ವಿಶೇಷ ಸಾಮರ್ಥ್ಯವುಳ್ಳ ಅತ್ಯಾಧುನಿಕ ಸಾಧನಗಳನ್ನು ಆವಿಷ್ಕಾರ ಮಾಡಲಾಗಿದೆ. ಈ ಸಾಧನಗಳ ಮೂಲಕ ಮಕ್ಕಳ ವಾಕ್ ಮತ್ತು ಶ್ರವಣ ದೋಷ ಬಗೆಹರಿಸಬೇಕು. ಎಲ್ಲಾ ಮಕ್ಕಳಂತೆ ಇವರಿಗೂ ಸಮಾನ ಅವಕಾಶಗಳು ಸಿಗುವಂತೆ ಮಾಡಬೇಕು ಎಂದು ಡೇವಿಡ್ ಗೋಲ್ಡ್ ಬರ್ಗ್ ಸಲಹೆ ನೀಡಿದರು.

ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೂ ಎಲ್ಲಾ ಅವಕಾಶಗಳು ಸಿಗಬೇಕು. ಈ ನಿಟ್ಟಿನಲ್ಲಿ ಐಸಾಕ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದ್ದು, ಇಂತಹ ಕಾರ್ಯಾಗಾರ ಹಾಗೂ ತರಬೇತಿ ಆಯೋಜಿಸುತ್ತಿದೆ ಎಂದು ಐಸಾಕ್ ಅಧ್ಯಕ್ಷೆ ಭಾವನಾ ಬೊಟ್ಟಿ ತಿಳಿಸಿದರು.

ದೇಶದ ಹಲವು ರಾಜ್ಯಗಳ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದು, ಇಂದು ಮತ್ತು ನಾಳೆ ಹಲವು ವಿಚಾರಗಳ ಬಗ್ಗೆ ಚರ್ಚೆ, ಸಂವಾದಗಳು ನಡೆಯಲಿವೆ. ಸಮ್ಮೇಳನದ ಕಾರ್ಯದರ್ಶಿ ಡಾ.ರುಬೇನ್ ಟಿ.ವರ್ಗೀಸ್, ಸಂಯೋಜಕ ಪ್ರೊ.ಅಜೀಷ್ ಕೆ.ಅಬ್ರಾಹಿಂ ಹಾಗೂ ಡೇವಿ ಗೋಲ್ಡ್ ಬರ್ಗ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಂಗಡಿ–ಮುಂಗಟ್ಟು ನಾಮಫಲಕದಲ್ಲಿ ಕನ್ನಡ ಕಡ್ಡಾಯಕ್ಕೆ ಆಗ್ರಹಿಸಿ ಪ್ರತಿಭಟನೆ



ನಾಮಫಲಕದಲ್ಲಿ ಕನ್ನಡ ಕಡ್ಡಾಯಕ್ಕೆ ಆಗ್ರಹಿಸಿ ನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಿದರು

ಮೈಸೂರು,ಜ.11(ಜಿಎ)– ಮೈಸೂರಿನಲ್ಲಿರುವ ಎಲ್ಲಾ ಅಂಗಡಿ, ಮುಂಗಟ್ಟು ವ್ಯಾಪಾರ ಮಳಿಗೆಗಳು, ಮಾಲ್‌ಗಳು, ಖಾಸಗಿ ಕಚೇರಿಗಳು, ಶಾಲಾ–ಕಾಲೇಜು ಜಾಹೀರಾತು ಫಲಕ, ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸಿ ಪಾಲಿಕೆ ಆದೇಶ ಹೊರಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಮಹಾನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ. ಕನ್ನಡ ಭಾಷೆಯೇ ಸಾರ್ವಭೌಮ ಭಾಷೆ. ಕನ್ನಡ ನಾಡಿನಲ್ಲಿ ಮೊದಲು ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸಬೇಕು, ಕನ್ನಡದಲ್ಲೇ ವ್ಯವಹರಿಸಬೇಕು. ಶಿವಮೊಗ್ಗ ಮಹಾನಗರ ಪಾಲಿಕೆ ಮಾದರಿಯಲ್ಲಿ ನಗರದ ಎಲ್ಲಾ ಅಂಗಡಿ, ಉದ್ದಿಮೆಗಳು ನಾಮಫಲಕ ಮತ್ತು ಜಾಹೀರಾತು ಫಲಕಗಳಲ್ಲಿ ಕಡ್ಡಾಯವಾಗಿ ಶೇ.60 ಭಾಗ ಕನ್ನಡ ಭಾಷೆ ಪ್ರಧಾನವಾಗಿ ಬಳಸಬೇಕು. ಈ ನಿಯಮ ಉಲ್ಲಂಘಿಸಿದರೆ ಉದ್ದಿಮೆಗಳ ಪರವಾನಗಿ ರದ್ದುಪಡಿಸಲಾಗುತ್ತದೆ ಎಂದು ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಕನ್ನಡ ಬಳಸದ ಮಳಿಗೆಗಳಿಗೆ ನೋಟಿಸ್ ಜಾರಿ ಮಾಡಿ, ಒಂದು ತಿಂಗಳ ಕಾಲಾವಕಾಶ ನೀಡಬೇಕು. ನಂತರವೂ ಅವರು ಕನ್ನಡ ಬಳಸದಿದ್ದರೆ ಕಠಿಣ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಪಾಲಿಕೆ ಆದೇಶ ಹೊರಡಿಸದಿದ್ದರೆ ಮತ್ತೆ ಬೀದಿಗಿಳಿದು ಕನ್ನಡ ಬಳಸದ ನಾಮಫಲಕಗಳಿಗೆ ಮಸಿ ಬಳಿಯಲಾಗುವುದೆಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಯ್ಯ.ಸಿ.ಎಚ್, ಗೋಲ್ಡ್ ಸುರೇಶ್, ಡಾ.ಶಾಂತರಾಜೇ ಅರಸ್, ಪ್ರಭುಶಂಕರ್ ಪ್ರಜೀಶ್.ಪಿ, ಸುನಿಲ್ ಅಗರ್ವಾಲ್, ಶಿವಲಿಂಗಯ್ಯ, ರವಿ ಒಲಂಪಿಯ, ಹನುಮಂತಯ್ಯ, ಶಿವನಾಯಕ್, ಅಂಬಾ ಅರಸ್, ಲಕ್ಷ್ಮಿ, ಭಾಗ್ಯಮ್ಮ, ನೇಹಾ, ಮಂಜುಳಾ, ಪದ್ಮ, ಶುಭಶ್ರೀ, ಗೀತಾ ಗೌಡ, ಪುಷ್ಪವತಿ, ಮಂಜುಳಾ, ಜ್ಯೋತಿ, ಇಂದಿರಾ, ಎಳನೀರು ರಾಮಣ್ಣ, ದರ್ಶನ್ ಗೌಡ, ರಾಧಾಕೃಷ್ಣ, ಆನಂದ, ಮಹದೇವ ಸ್ವಾಮಿ, ರವೀಶ್, ಪ್ರಭಾಕರ, ರಮೇಶ್, ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಚುನಾವಣೆ

ಡಿ.ಗೌರಮ್ಮ ನೇತೃತ್ವದ ತಂಡ ಬೆಂಬಲಿಸಲು ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಸಹಕಾರಿ ಸಂರಕ್ಷಣಾ ಬಳಗದ ಸದಸ್ಯೆ ಮಂಜುಳ ಮಾನಸ ಮಾತನಾಡಿದರು.

ಮೈಸೂರು,ಜ.11(ಎಂಟಿವೈ)– ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಯ ಚುನಾವಣೆ ರಾಮಸ್ವಾಮಿ ವೃತ್ತದ ಬಳಿಯಿರುವ ಹಾರ್ಡ್ವಿಕ್ ಶಾಲೆ ಆವರಣದಲ್ಲಿ ಜ.14ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ನಡೆಯಲಿದ್ದು, ಮಹಿಳಾ ಬ್ಯಾಂಕ್ ಸಂಸ್ಥಾಪಕ ಉಪಾಧ್ಯಕ್ಷೆ ಡಿ.ಗೌರಮ್ಮ ನೇತೃತ್ವದ ತಂಡಕ್ಕೆ ಬೆಂಬಲ ನೀಡುವಂತೆ ಮೈಸೂರು ಸಹಕಾರಿ ಸಂರಕ್ಷಣಾ ಬಳಗದ ಸದಸ್ಯೆ ಮಂಜುಳ ಮಾನಸ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಏಳಿಗೆಗಾಗಿ ಶ್ರಮಿಸುವ ಉದ್ದೇಶದಿಂದ ಸಮಾನಮನಸ್ಕ ಮಹಿಳಾ ಮುಖಂಡರು ಒಳಗೊಂಡಂತೆ ತಂಡವೊಂದನ್ನು ರಚಿಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇವೆ. ಜ. 14ರಂದು ನಡೆಯುವ ಮೈಸೂರು ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕ್ ಚುನಾವಣೆಯಲ್ಲಿ 41 ಮಂದಿ ಚುನಾವಣಾ ಕಣದಲ್ಲಿದ್ದು, ಅದರಲ್ಲಿ ಪ್ರಗತಿಪರ ಆಲೋಚನೆ ಹೊಂದಿರುವ ಗೌರಮ್ಮ ನೇತೃತ್ವದ ತಂಡವನ್ನು ಮತದಾರರು ಗೆಲ್ಲಿಸಬೇಕು ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮಹಿಳಾ ಬ್ಯಾಂಕ್ ಚುನಾವಣಾ ಸ್ಪರ್ಧಿಗಳಾದ ಮಾಜಿ ಮೇಯರ್ ಮೋದಾಮಣಿ, ಪಾಲಿಕೆ ಮಾಜಿ ಸದಸ್ಯೆ ಎಸ್. ಪ್ರೇಮ, ಪಿ. ಭಾರತಿ ಹಾಗೂ ಇನ್ನಿತರರು ಹಾಜರಿದ್ದರು.

ರೈಲ್ವೆ ನೌಕರರ ಪ್ರತಿಭಟನೆಗೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬೆಂಬಲ



ನೈರುತ್ಯ ರೈಲ್ವೆ ನೌಕರರ ಸಂಘದ ಸದಸ್ಯರು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯಗೆ ಮನವಿ ಸಲ್ಲಿಸಿದರು.

ಮೈಸೂರು,ಜ.11(ಜಿಎ)–ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ನೈರುತ್ಯ ರೈಲ್ವೆ ನೌಕರರ ಪ್ರತಿಭಟನೆಗೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬೆಂಬಲ ಸೂಚಿಸಿದರು.

ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆಯನ್ನೇ ಮುಂದುವರೆಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನೈರುತ್ಯ ರೈಲ್ವೆ ನೌಕರರ ಸಂಘದ ಸದಸ್ಯರು ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪ ಡಿಆರ್‌ಎಂ ಕಚೇರಿ ಹಾಗೂ ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ವರ್ಕ್‌ಶಾಪ್ ಬಳಿ ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ನೌಕರರ ಹೋರಾಟಕ್ಕೆ ಕಾಂಗ್ರೆಸ್ ಪಕ್ಷದ ಬೆಂಬಲವಿದೆ ಎಂದು ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಯಾವುದೇ ಸಂಸ್ಥೆ ಏಳಿಗೆಯಾಗಬೇಕಾದರೆ, ಕಾರ್ಮಿಕರು ಮುಖ್ಯವಾಗಿದ್ದಾರೆ. ಆದರೆ, ಕೇಂದ್ರ ಸರ್ಕಾರ ಕಾರ್ಮಿಕರ ಪರ ಇಲ್ಲದೆ, ಬಂಡವಾಳಶಾಹಿಗಳ ಪರ ಕೆಲಸ ಮಾಡುತ್ತಿದೆ. ಬಡವರು, ಕಾರ್ಮಿಕರು, ರೈತರ ಪರ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ಕೇಂದ್ರ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಉಳ್ಳವರ ಪರವಿದ್ದು, ಬಡವರ ಪರವಿಲ್ಲ.ಕಾಂಗ್ರೆಸ್ ಪಕ್ಷ ರೈಲ್ವೆ ನೌಕರರು ಹೋರಾಟಕ್ಕೆ ಸಾತ್ವಿಕ ಬೆಂಬಲ ಸೂಚಿಸಿದ್ದು, ಕೇಂದ್ರ ಸರ್ಕಾರದ ವಿರುದ್ಧ ನೀವು ಮಾಡುವ ಹೋರಾಟಕ್ಕೆ ಪಕ್ಷದ ಮತ್ತು ನನ್ನ ಬೆಂಬಲವಿದೆ ಎಂದರು.

ರಾಜ್ಯ ಸರ್ಕಾರ ನೌಕರರ ಪರ ಧ್ವನಿ ಜೋಡಿಸುವಂತೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಪ್ರತಿಭಟನಾಕಾರರು ವಿವಿಧ ಬೇಡಿಕೆಗಳ ಮನವಿ ಪತ್ರ ನೀಡಿದರು. ಈ ವೇಳೆ ಸಂಘದ ಅಧ್ಯಕ್ಷ ಮಂಜುನಾಥ್, ಕಾರ್ಯ ದರ್ಶಿ ಯತಿರಾಜ್, ಪಿ.ಶಿವಪ್ರಕಾಶ್, ಎಸ್.ಸೋಮಶೇಖರ್, ಮಂಚೇಗೌಡ, ವಿ.ಅಶೋಕ್‌ಕುಮಾರ್, ಎಂ.ನಾಗೇಶ್ ಮತ್ತಿತರರು ಪಾಲ್ಗೊಂಡಿದ್ದರು.

ನಾಳೆಯಿಂದ ಮೈಸೂರು ಸಂಕ್ರಾಂತಿ ರಂಗಹಬ್ಬ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಂಗಾಯಣ ಉಪ ನಿರ್ದೇಶಕರಾದ ನಿರ್ಮಲ ಮಠಪತಿ ಅವರು 'ಮೈಸೂರು ಸಂಕ್ರಾಂತಿ ರಂಗಹಬ್ಬ' ನಾಟಕೋತ್ಸವ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು,ಜ.11(ಎಂಟಿವೈ)– ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಜ.13ರಿಂದ 17ರವರೆಗೆ ರಂಗಾಯಣ ಮತ್ತು ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ 'ಮೈಸೂರು ಸಂಕ್ರಾಂತಿ ರಂಗಹಬ್ಬ' ನಾಟಕೋತ್ಸವ ಆಯೋಜಿಸಲಾಗಿದೆ ಎಂದು ರಂಗಾಯಣ ಉಪ ನಿರ್ದೇಶಕರಾದ ನಿರ್ಮಲ ಮಠಪತಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಗ್ಗಿ ಹಬ್ಬ ಸಂಕ್ರಾಂತಿ ಹಿನ್ನೆಲೆಯಲ್ಲಿ ಈ ರಂಗಹಬ್ಬ ಆಯೋಜಿಸಲಾಗಿದೆ. ಜ.13ರಂದು ಸಂಜೆ 6ಕ್ಕೆ ರಂಗ ನಿರ್ದೇಶಕ ಬಿ. ಸುರೇಶ್ ಉದ್ಘಾಟಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್ ವಿಶೇಷ ಆಹ್ವಾನಿತರಾಗಿದ್ದಾರೆ.

ಸಭಾ ಕಾರ್ಯಕ್ರಮದ ಬಳಿಕ ಕೆ.ವಿ. ಸುಬ್ಬಣ್ಣ ರಚನೆಯ 'ಸೂಳೆ ಸನ್ಯಾಸಿ' ನಾಟಕ ಪ್ರದರ್ಶನ ನಡೆಯಲಿದೆ. ಜ. 14 ರಂದು ಸಂಜೆ 6ಕ್ಕೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರಚನೆಯ ಕಾಕನಕೋಟೆ, ಜ.15 ರಂದು ಸಂಜೆ 6ಕ್ಕೆ ಡಾ. ಮೀರಾ ಮೂರ್ತಿ ಅನುವಾದಿಸಿರುವ ಅತೋಲ್ ಫುಗಾರ್ಡ್ ಅವರ 'ಕಣಿವೆಯ ಹಾಡು' ನಾಟಕ, ಜ.16 ರಂದು ಸಂಜೆ 6ಕ್ಕೆ ಪ್ರೊ.ಎಸ್.ಆರ್. ಉಮೇಶ್ ಅವರ ಅವಾರ್ಡ್ ಕ್ಯಾನ್ಸರ್ ಕಥಾನಕಗಳು, ಜ.17 ರಂದು ಸಂಜೆ 6ಕ್ಕೆ ಶ್ರೀನಿವಾಸ ವೈದ್ಯ ರಚನೆಯ 'ಪಾರ್ಶ್ವ ಸಂಗೀತ' ನಾಟಕ ಪ್ರದರ್ಶನವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿ ವೇದಿಕೆಯ ಸುರೇಶ್ ಬಾಬು, ಸುಬ್ಬಣ್ಣ, ಹರಿದತ್ತ ಇದ್ದರು.

ಗನ್‌ಹೌಸ್ ವೃತ್ತದ ಪ್ರತಿಮೆ ಬಳಿ ಪ್ರತಿಭಟನೆಗೆ ಯತ್ನ

ಪ್ರತಿಭಟನಾಕಾರರ ವಶಕ್ಕೆ ಪಡೆದು ನಂತರ ಬಿಡುಗಡೆ

ಮೈಸೂರು, ಜ.11(ಜಿಎ)–ಮೈಸೂರಿನ ಗನ್‌ಹೌಸ್ ಬಳಿಯ ವೃತ್ತದಲ್ಲಿ ನಿರ್ಮಿಸಿರುವ ಪ್ರತಿಮೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ ಗನ್‌ಹೌಸ್ ಬಳಿ, ಪಾಲಿಕೆ ಮುಂಭಾಗ ಪ್ರತಿಭಟನೆಗೆ ಮುಂದಾದ 'ಕಾನೂನುಬಾಹಿರ ಪ್ರತಿಮೆ ತೆರವು ಹೋರಾಟ ಸಮಿತಿ'ಯ ಪದಾಧಿಕಾರಿಗಳನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದರು.

ಪ್ರತಿಮೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ, 'ಕಾನೂನುಬಾಹಿರ ಪ್ರತಿಮೆ ತೆರವು ಹೋರಾಟ ಸಮಿತಿ'ಯ ಮೂರು ತಂಡಗಳು, ಗನ್‌ಹೌಸ್ ಬಳಿಯ ವೃತ್ತದ ಮುಂಭಾಗ, ಕುವೆಂಪು ಉದ್ಯಾನವನ ಮತ್ತು ಪಾಲಿಕೆಯ ಮುಂಭಾಗ ಹಂತ ಹಂತವಾಗಿ ಪ್ರತಿಭಟನೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ, ಪ್ರತಿಭಟನೆಗೆ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದುಕೊಂಡಿರಲಿಲ್ಲ

ಪ್ರತಿಭಟನೆ ನಡೆಸಲು ಗನ್‌ಹೌಸ್ ವೃತ್ತಕ್ಕೆ ಆಗಮಿಸಿದ ಹೋರಾಟ ಸಮಿತಿಯ ಸಂಚಾಲಕ ಮೈ.ಕಾ.ಪ್ರೇಮ್ ಕುಮಾರ್, ಯಮುನಾ, ಮಹ ದೇವಸ್ವಾಮಿ, ಅರಸು ಮಂಡಳಿಯ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಅಮರ್‌ನಾಥ್ ರಾಜೇ ಅರಸ್ ಮತ್ತು ಮೈಸೂರು ರಕ್ಷಣಾ ವೇದಿಕೆ ಪದಾಧಿಕಾರಿಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡು, ಸಿಎಆರ್ ಮೈದಾನಕ್ಕೆ ಕರೆದೊಯ್ದರು.



ಮೈಸೂರಿನ ಗನ್‌ಹೌಸ್ ಬಳಿಯ ವೃತ್ತದಲ್ಲಿ ನಿರ್ಮಿಸಿರುವ ಪ್ರತಿಮೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ ದಸಂಸ ಮುಖಂಡರು ಪಾಲಿಕೆ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಕುರಿತು ಮಾಹಿತಿ ಪಡೆದ ಪೊಲೀಸ್ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮವಾಗಿ ಗನ್‌ಹೌಸ್ ಸುತ್ತಲೂ ಕಾವಲಿದ್ದರು. ಕಾನೂನು ಹಾಗೂ ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜು ಮಾರ್ಗದರ್ಶನದಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಮತ್ತು ಇನ್ನಿತರ ಅಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರು. ಒಪ್ಪದಿದ್ದಾಗ ವಶಕ್ಕೆ ಪಡೆದರು.


ಮತ್ತೊಂದೆಡೆ ಪ್ರತಿಭಟನೆ ಹಿನ್ನೆಲೆಯಲ್ಲಿ ವೃತ್ತದಲ್ಲಿ ಪ್ರತಿಮೆಯ ಮಂಟಪ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಸಮಿತಿಯ ಮೂರನೇ ತಂಡದ ನೇತೃತ್ವ ವಹಿಸಿದ್ದ ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ ಮತ್ತು ಕಾರ್ಯಕರ್ತರು ನಗರಪಾಲಿಕೆ ಮುಂದೆ ಪ್ರತಿಭಟನೆಗೆ ಮುಂದಾದಾಗ ಪೊಲೀಸರು, ಚೋರನಹಳ್ಳಿ ಶಿವಣ್ಣ ಸೇರಿದಂತೆ ಕೆ.ವಿ. ದೇವೇಂದ್ರ ನಟರಾಜ್ ಹಾರೋಹಳ್ಳಿ, ಶಿವಮೂರ್ತಿ ಶಂಕರಪುರ, ಹಗಿನವಾಳು ಪ್ರಭುಸ್ವಾಮಿ, ವಿಕ್ರಾಂತ್ ಚಿಕ್ಕಲಿಂಗಯ್ಯ, ಅರಸನಕೆರೆ ಶಿವರಾಜ್, ಪಡುವಾರಹಳ್ಳಿ ಸತೀಶ್,ತಗಡೂರು ಲಿಂಗಯ್ಯ, ಬೊಮ್ಮನಹಳ್ಳಿ ಮಹದೇವ್, ಆಲನಹಳ್ಳಿ ಸಿದ್ದರಾಜ್, ಸೋಮನಾಯಕ, ಬಿಳಿಕೆರೆ ದೇವರಾಜ್, ಅಣ್ಣಯ್ಯ ಪುರಂ ಅವರನ್ನು ವಶಕ್ಕೆ ಪಡೆದರು. ಕೊನೆಗೆ ಎಲ್ಲರನ್ನೂ ಬಿಡುಗಡೆಗೊಳಿಸಿದರು.

ಶುಕ್ರವಾರ
12-1-2024


ಬೆಳ್ಳಿ ಬೆಳಕು

ಮೈಸೂರು ಮಿತ್ರ
● ಸತ್ಯಮೂರ್ತಿ ತೋಳಹುಣಸೆ

ಸಿನಿಮಾ ಪುರವಣಿ




ಯಶ್ 19ನೇ ಚಿತ್ರ



ಕರೀನಾ ಕಪೂರ್ ನಾಯಕಿ?

ರಾಕಿಂಗ್‌ಸ್ಟಾರ್ ಯಶ್ ಅಭಿನಯದ 19ನೇ ಸಿನಿಮಾ 'ಟಾಕ್ಸಿಕ್' ಈಗಾಗಲೇ ಅನೌನ್ಸ್ ಆಗಿದೆ. ಈ ಚಿತ್ರಕ್ಕೆ ಮಲಯಾಳಂ ನಿರ್ದೇಶಕಿ ಗೀತು ಮೋಹನ್‌ದಾಸ್ ಆಕ್ಷನ್‌ಕಟ್ ಹೇಳುತ್ತಿದ್ದಾರೆ. ಇನ್ನು ಈ ಚಿತ್ರದ ನಾಯಕಿಯಾಗಿ ಬಾಲಿವುಡ್ ನಟಿ ಕರೀನಾ ಕಪೂರ್ ನಟಿಸುತ್ತಾರೆ ಅನ್ನೋ ಮಾತು ಕೇಳಿಬರುತ್ತಿದೆ. ಯಶ್ 19ನೇ ಸಿನಿಮಾ ಟಾಕ್ಸಿಕ್ ಮೇಲೆ ಇಡೀ ಭಾರತೀಯ ಚಿತ್ರರಂಗವೇ ಕಣ್ಣಿಟ್ಟಿದೆ. ಚಿತ್ರದಲ್ಲಿ ಯಶ್ ಹೇಗೆ ಕಾಣಿಸಿಕೊಳ್ಳಬಹುದು, ಅವರ ಲುಕ್ ಹೇಗಿರುತ್ತೆ, ನಾಯಕಿ ಯಾರಾಗ್ತಾರೆ, ಇಂತಹ ಒಂದಿಷ್ಟು ಪ್ರಶ್ನೆಗಳು ಎಲ್ಲರನ್ನು ಕಾಡುತ್ತಿವೆ. ಕರೀನಾ ಕಪೂರ್ ಕೂಡ ಸಂದರ್ಶನವೊಂದರಲ್ಲಿ ಯಶ್ ಬಗ್ಗೆ ಪ್ರಸ್ತಾಪಿಸಿದ್ದರು. ಕಾಫಿ ವಿತ್ ಕರಣ್ ಶೋನಲ್ಲಿ ಕರಣ್‌ಜೋಹರ್ ಕೇಳಿದ ಪ್ರಶ್ನೆಗೆ ಕರೀನಾ, ಯಶ್ ವಿಚಾರವಾಗಿ ಒಂದಷ್ಟು ಹೆಸರನ್ನು ಹೇಳಿದ್ದರು.

ಕಾರ್ಯಕ್ರಮದಲ್ಲಿ ಮಾತಾಡುವಾಗ ಪ್ರಭಾಸ್, ರಾಮ್‌ಚರಣ್, ವಿಜಯ್ ದೇವರಕೊಂಡ, ಅಲ್ಲು ಅರ್ಜುನ್, ಯಶ್ ಇವರಲ್ಲಿ ಯಾರೊಂದಿಗೆ ನಟಿಸಲು ಬಯಸುತ್ತೀರಿ ಎಂದು ಕರಣ್ ಕೇಳಿದ ಪ್ರಶ್ನೆಗೆ ಕರೀನಾಕಪೂರ್ ನೇರವಾಗಿ ಯಶ್ ಹೆಸರನ್ನು ಹೇಳಿದ್ದರು. ಕೆಜಿಎಫ್ ಚಿತ್ರವನ್ನು ನೋಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಕೆಜಿಎಫ್ ಹುಡುಗಿ ಎಂದು ಕರೀನಾಕಪೂರ್ ಹೇಳಿದ್ದರು. ಇದಾದ ಒಂದು ತಿಂಗಳ ಅಂತರದಲ್ಲಿ 'ಟಾಕ್ಸಿಕ್' ಚಿತ್ರದಲ್ಲಿ ಕರೀನಾ ಕಾಣಿಸಿಕೊಳ್ಳುತ್ತಾರೆ ಅನ್ನೋ ಸುದ್ದಿ ಓಡಾಡುತ್ತಿದೆ. ಈ ಹಿಂದೆ 'ಟಾಕ್ಸಿಕ್' ನಾಯಕಿಯಾಗಿ ಸಾಯಿಪಲ್ಲವಿ ನಟಿಸುತ್ತಾರೆ ಅನ್ನೋ ಮಾತಿತ್ತು. ಆದರೆ ಈಗ ಕರೀನಾಕಪೂರ್ ಹೆಸರು ಕೇಳಿಬರುತ್ತಿದೆ. ಈ ಬಗ್ಗೆ ಚಿತ್ರತಂಡ ಇನ್ನೂ ಕನ್‌ಫರ್ಮ್ ಮಾಡಿಲ್ಲ.





'ಜಸ್ಟ್ ಪಾಸ್' ಕಾಲೇಜಿಗೆ ರಂಗಾಯಣ ರಘು ಪ್ರಿನ್ಸಿಪಾಲ್

ಹೆಚ್ಚು ಅಂಕ ಗಳಿಸಿದವರಿಗೆ, ಡಿಸ್ಟಿಂಕ್ಷನ್ ಬಂದವರಿಗೆ ನಾನಾ ಕಾಲೇಜುಗಳಿವೆ. ಆದರೆ 'ಜಸ್ಟ್ ಪಾಸ್' ಆದವರ ಕಥೆ ಏನು? ಅವರಿಗೆ ಓದುವ ಅವಕಾಶವಿಲ್ಲವೇ ಎಂಬ ಪ್ರಶ್ನೆ ಪ್ರತಿ 'ಜಸ್ಟ್ ಪಾಸ್' ವಿದ್ಯಾರ್ಥಿಯದು. ಅದಕ್ಕೆ ಉತ್ತರವೇ ಜಸ್ಟ್ ಪಾಸ್ ಚಿತ್ರ. ಇದರಲ್ಲಿ ಜಸ್ಟ್ ಪಾಸ್ ಆದವರಿಗಾಗೇ ಒಂದು ಕಾಲೇಜನ್ನು ತೆರೆಯಲಾಗಿರುತ್ತದೆ. ಕೂದಲೆಳೆ ಅಂತರದಲ್ಲಿ ಪಾಸ್ ಆದವರಿಗಂತಲೇ ಈ ಕಾಲೇಜು ಓಪನ್ ಮಾಡಲಾಗಿದ್ದು, ಜತೆಗೆ ಇಲ್ಲಿ ಹಾಸ್ಟೆಲ್ ಕೂಡ ಉಚಿತವಾಗಿರುತ್ತೆ.

ವಿಶೇಷ ಎಂದರೆ ಈ ಕಾಲೇಜಿಗೆ ರಂಗಾಯಣ ರಘು ಪ್ರಿನ್ಸಿಪಾಲ್. ಇದೇ ಮೊದಲ ಬಾರಿಗೆ ಅವರು ಪ್ರಿನ್ಸಿಪಾಲ್ ಪಾತ್ರ ನಿರ್ವಹಿಸುತ್ತಿದ್ದಾರೆ. ತಮ್ಮ ಜೀವಮಾನದ ಸಂಪಾದನೆಯಿಂದ ಈ ಕಾಲೇಜನ್ನು ಶುರು ಮಾಡಿ, ಆ ವಿದ್ಯಾರ್ಥಿಗಳ ಬಾಳಿಗೆ ಬೆಳಕು ತೋರಿಸೋ ಗುರುವಾಗಿದ್ದಾರೆ. ಜಸ್ಟ್ ಪಾಸ್ ಆದವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಟ್ಯಾಲೆಂಟ್ ಇರುತ್ತದೆ. ಹಾಗೆಯೇ ಒಂದಷ್ಟು ತಲೆಹರಟೆ ವಿದ್ಯಾರ್ಥಿಗಳೂ ಇಲ್ಲಿರುತ್ತಾರೆ. ಇವರನ್ನೆಲ್ಲ ಆ ಪ್ರಿನ್ಸಿಪಾಲ್ ಹೇಗೆ ನಿಭಾಯಿಸುತ್ತಾರೆ. ಅವರಿಗೂ ಒಂದೊಳ್ಳೆ ದಾರಿ ಹೇಗೆ ಕಲ್ಪಿಸುತ್ತಾರೆ ಎಂಬುದೇ ಚಿತ್ರದ ಒನ್‌ಲೈನ್ ಕಥೆ. ಈಗಾಗಲೇ ಒಂದಷ್ಟು ಸಿನಿಮಾಗಳಲ್ಲಿ ನಟಿಸಿರುವ ಶ್ರೀಮಹದೇವ್ ಈ ಚಿತ್ರದ ನಾಯಕ. ಪ್ರಣತಿ ನಾಯಕಿ. ರಂಗಾಯಣ ರಘು, ಸಾಧುಕೋಕಿಲ, ಕಾಂತಾರ ಖ್ಯಾತಿಯ ಪ್ರಕಾಶ್ ತುಮಿನಾಡು ಹಾಗೂ ದೀಪಕ್‌ರೈ, ದಾನಪ್ಪ, ಗೋವಿಂದೇಗೌಡ ಸೇರಿದಂತೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. ಚಿತ್ರದಲ್ಲಿ ಕಥೆ ಒಂದು ತೂಕವಾದರೆ, ರಂಗಾಯಣ ರಘು ಅವರ ಪಾತ್ರವೇ ಒಂದು ತೂಕ. ಅವರಿಗೆ ಕಥೆ ಹೇಳಿದಾಕ್ಷಣ, ಕಾಸ್ಟ್ಯೂಮ್ ಬಗ್ಗೆ ಅವರೇ ಹೇಗಿರಬೇಕೆಂದು ಡಿಸೈನ್ ಮಾಡಿಕೊಂಡರು. ಯಾಕಂದ್ರೆ ಅವರದು ಪ್ರಿನ್ಸಿಪಾಲ್ ಪಾತ್ರ, ಅವರದ್ದೇ ಕಾಲೇಜು, ತೂಕವಾದ ವ್ಯಕ್ತಿತ್ವ, ನ್ಯಾಷನಲ್ ಅವಾರ್ಡ್ ಕೂಡ ಬಂದಿರುತ್ತೆ. ಸದಾ ಸಮಾಜಮುಖಿಯಾಗಿ ಚಿಂತಿಸುವ ಪಾತ್ರ ಅವರದ್ದು. ಮೂರು ಪಂಚೆ, 3 ಶರ್ಟ್, ಕೋಟು ಮತ್ತು 2 ಪೇಟ ಇಟ್ಟುಕೊಂಡಿರುವ ಸೀದಾ ಸಾದಾ ಮನುಷ್ಯ. ಇಡೀ ಸಿನಿಮಾದಲ್ಲಿ ಒಂದೇ ಚಪ್ಪಲಿ ಬಳಸಿದ್ದಾರೆ. ಅವರ ಪಾತ್ರದ ಬಗ್ಗೆ ಮತ್ತಷ್ಟು ವಿಶೇಷತೆಗಳಿವೆ. ಅವೆಲ್ಲವನ್ನೂ ಸಿನಿಮಾದಲ್ಲಿ ನೋಡಿದರೆ ಚೆನ್ನಾಗಿರುತ್ತೆ ಎಂಬುದು ನಿರ್ದೇಶಕ ಕೆ.ಎಂ.ರಘು ಅನಿಸಿಕೆ. ರಾಯ್ಸ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಕೆ.ವಿ. ಶಶಿಧರ್ ನಿರ್ಮಿಸುತ್ತಿರುವ ಜಸ್ಟ್ ಪಾಸ್ ಚಿತ್ರದ ಟೀಸರ್ ಎ2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದೆ. ಸಿಂಗಾರ ಸಿರಿಯೇ ಖ್ಯಾತಿಯ ಪ್ರಮೋದ್ ಮರವಂತೆ ಬರೆದಿರುವ ಹಾಡೊಂದು ಸದ್ಯದಲ್ಲೇ ಬಿಡುಗಡೆ ಆಗಲಿದೆ. ಹರ್ಷವರ್ಧನ್ ರಾಜ್ ಸಂಗೀತ, ಸುಜಯ್ ಕುಮಾರ್ ಛಾಯಾಗ್ರಹಣ ಈ ಚಿತ್ರಕ್ಕಿದೆ.



ರಾಗಿಣಿಗೆ ಬಂದ 'ಇಮೇಲ್' ಪ್ರಜ್ವಲ್ ಕೈಲಿ!

ನಟಿ ರಾಗಿಣಿ ದ್ವಿವೇದಿ ಮುಖ್ಯಪಾತ್ರದಲ್ಲಿ ಅಭಿನಯಿಸಿರುವ ಇಮೇಲ್ ಚಿತ್ರದ ಫಸ್ಟ್‌ಲುಕ್ ಇತ್ತೀಚೆಗೆ ಬಿಡುಗಡೆಯಾಗಿದೆ. ಎಸ್.ಆರ್. ರಾಜನ್ ಅವರು ಈ ಚಿತ್ರವನ್ನು ತಮಿಳು ಹಾಗೂ ಕನ್ನಡದಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಫಸ್ಟ್‌ಲುಕ್ ಅನ್ನು ನಟ ಪ್ರಜ್ವಲ್ ದೇವರಾಜ್ ಬಿಡುಗಡೆಗೊಳಿಸಿ, ಶುಭ ಹಾರೈಸಿದರು. ಎಸ್.ಆರ್.ರಾಜನ್ ಅವರೇ 'ಇಮೇಲ್' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.


'ಇಮೇಲ್' ಮಹಿಳಾ ಪ್ರಧಾನ ಕಥಾಹಂದರ ಹೊಂದಿದ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ. ರಾಗಿಣಿ ದ್ವಿವೇದಿ ಚಿತ್ರದ ನಾಯಕಿಯಾಗಿ ನಟಿಸಿದ್ದಾರೆ. 'ಮುರುಗ ಅಶೋಕ್', 'ಮನೋಬಲ', 'ಜೈಲರ್' ಖ್ಯಾತಿಯ ಬಿಲ್ಲಿ, ಮನೋಹರ್, ಅಕ್ಷಯ್‌ರಾಜ್, ಅರತಿಶ್ರೀ, ಮಂಜು ನಂಜನಗೂಡು, ರಾಮ್‌ಸನ್ನಿ, ನಯನ ಚೌಹಾನ್, ಶೈಲಜ, ಶ್ವೇತ, ತೇಜಸ್ವಿನಿ, ಕುಮಾರಿ ಸೃಷ್ಟಿ ಮುಂತಾದವರು 'ಇಮೇಲ್' ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಬಹುತೇಕ ಕನ್ನಡ ಕಲಾವಿದರೇ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಚಿತ್ರದಲ್ಲಿ 4 ಸುಂದರ ಹಾಡುಗಳಿದ್ದು 'ಜುಬಿನ್' ಹಾಗೂ 'ಐಲವ್‌ಯು' ಖ್ಯಾತಿಯ ಕಿರಣ್ ತೊಟಂಬೈಲ್ (ಕನ್ನಡ) ಸಂಗೀತ ಸಂಯೋಜನೆ ಮಾಡಿದ್ದಾರೆ. ಕನ್ನಡದ ಹಾಡುಗಳನ್ನು ಸಂತೋಷ್ ನಾಯಕ್ ಬರೆದಿದ್ದಾರೆ. 'ಮಾಸ್‌ಮಾದ', 'ಬೀರ್ ಮಾಸ್ಟರ್' ಹಾಗೂ ಫಯಾಸ್‌ಖಾನ್ ಅವರ ಸಾಹಸ ನಿರ್ದೇಶನ ಹಾಗೂ ಸೆಲ್ವಂ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ಗೋವಾ ಹಾಗೂ ಮುಂಬೈನಲ್ಲಿ 'ಇಮೇಲ್' ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಚಿತ್ರವು ಸದ್ಯದಲ್ಲೇ ತೆರೆಗೆ ಬರಲು ಸಿದ್ಧವಾಗಿದೆ.

ಸಂಕ್ರಾಂತಿ ಹಬ್ಬದಲ್ಲಿ ಕನ್ನಡ ಚಿತ್ರಗಳೇ ಇಲ್ಲ!

ಹಿಂದೆಲ್ಲ ವರ್ಷದ ಮೊದಲ ಹಬ್ಬ ಸಂಕ್ರಾಂತಿ ಬಂತೆಂದರೆ ಸಾಲು ಸಾಲು ಕನ್ನಡ ಚಿತ್ರಗಳು ಬಿಡುಗಡೆಗೆ ರೆಡಿಯಾಗುತ್ತಿದ್ದವು. ಹಲವಾರು ಹೊಸ ಚಿತ್ರಗಳ ಮುಹೂರ್ತ ಸಮಾರಂಭ ಅದ್ದೂರಿಯಾಗಿ ನಡೆಯುತ್ತಿತ್ತು. ಇತ್ತೀಚೆಗೆ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಯಾವುದೇ ದೊಡ್ಡ ಕನ್ನಡ ಸಿನಿಮಾಗಳು ರಿಲೀಸಾಗುತ್ತಿಲ್ಲ. ವರ್ಷಾಂತ್ಯದಲ್ಲೇ ಸ್ಟಾರ್ ಚಿತ್ರಗಳೆಲ್ಲ ರಿಲೀಸಾಗಿ ಜನವರಿಯಲ್ಲಿ ಸಣ್ಣಪುಟ್ಟ ಚಿತ್ರಗಳಷ್ಟೇ ಬಿಡುಗಡೆ ಕಾಣುತ್ತಿದ್ದವು. ಆದರೆ ಈ ವರ್ಷ ಅದೂ ಇಲ್ಲವಾಗಿದೆ. ಹೌದು, ಈ ವರ್ಷದ ಸಂಕ್ರಾಂತಿಗೆ ಒಂದೇ ಒಂದು ಕನ್ನಡ ಸಿನಿಮಾ ಕೂಡ ತೆರೆಗೆ ಬರ್ತಿಲ್ಲ. 'ಕಾಟೇರ' ಚಿತ್ರವೇ ಹಬ್ಬದ ಸಂಭ್ರಮದಲ್ಲಿ ಪ್ರೇಕ್ಷಕರನ್ನು ಸೆಳೆಯಬೇಕಿದೆ. ಆದರೆ ತೆಲುಗು, ತಮಿಳಿನಲ್ಲಿ ಐದಾರು ಸಿನಿಮಾಗಳು ಈ ಸಂಕ್ರಾಂತಿಯಲ್ಲಿ ಬಿಡುಗಡೆ ಕಾಣುತ್ತಿವೆ. ಈ ತಿಂಗಳ ಕೊನೆಯಲ್ಲಿ ಚಿಕ್ಕಣ್ಣ ಅಭಿನಯದ 'ಉಪಾಧ್ಯಕ್ಷ', ರಕ್ಷಿತ್‌ಶೆಟ್ಟಿ ಬ್ಯಾನರ್‌ನ 'ಬ್ಯಾಚುಲರ್ ಪಾರ್ಟಿ' ನಿರೀಕ್ಷೆಯಿರುವ ಚಿತ್ರಗಳು ಬಿಡುಗಡೆಯಾಗುತ್ತಿರುವುದೇ ಸಂತಸದ ವಿಚಾರ.

ಸಿನಿಪದಬಂಧ-508



ಹೆಸರು ____________
ವಿಳಾಸ ____________
____
ದೂರವಾಣಿ ಸಂಖ್ಯೆ ____________

ವಿಜೇತರು: ಜ್ಯೋತ್ಸ್ನಾ ರಾಮಚಂದ್ರ, #206, ಮಿಸ್ಟಿ ವುಡ್ಸ್, ಕೆ.ಸಿ.ನಗರ, ಮೈಸೂರು

ಎಡದಿಂದ ಬಲಕ್ಕೆ

1. ರಾಘವೇಂದ್ರ ರಾಜ್‌ಕುಮಾರ್ ಕಡಲಿನಲ್ಲಿ ಉರಿದ ಹಣತೆ 5
3. ಖಲಂದರ್ ಅವರ ನಿಜ ಸಂಗತಿ ರವಾನೆಯಾಗಿದೆ 5
5. ಅಜಿತ್-ಮಾನಸಿ ಪಟಾಕಿಗೆ ಹೆಸರಾಗಿರುವ ಊರನ್ನು ನೆನಪಿಸುತ್ತಾರೆ 4
7. 'ನಾಯಕ' ಜಗ್ಗೇಶ್‌ನಲ್ಲಿ ಒಂಬತ್ತು ಸ್ವಾದವಿದೆ 4
9. ಸುದೀಪ್ ಅಭಿನಯದ "ಬಸವ" 2
10. ಸರಿಸೃಪ, ಗೂಳಿಯ ಜೊತೆ ನಿಯತ್ತಿನ ಪ್ರಾಣಿಯೂ ಇದೆ 7
13. ವಿಷ್ಣು, ಪ್ರೇಮ, ರೋಜಾ ಅಭಿನಯದ ಸಂಗೀತಮಯ ಚಿತ್ರ 2
14. ಕೈಲಾಸವಾಸಿಯ ಜೊತೆ ಪಾಂಡವನೊಬ್ಬ ಸೇರಿಕೊಂಡರೆ ಚಿತ್ರವೊಂದು ಪ್ರತ್ಯಕ್ಷ! 4
15. ಸುನಾದ್‌ರಾಜ್‌ನ ಮೋಡದ ಸರ ಇಲ್ಲಿ ತಿರುಗಿದೆ 4
18. ವಿಷ್ಣು-ಆರತಿ ಅಭಿನಯಕ್ಕೆ ಗೀತಪ್ರಿಯ ನಿರ್ದೇಶಕ 5
19. ಅಂಬಿ-ಮಹಾಲಕ್ಷ್ಮೀ ಅಭಿನಯದಲ್ಲಿ ಸಾಗಿದ ದೋಣಿ 5



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 507ರ ಉತ್ತರ

ವೀ	ರ	ಕೇ	ಸ	ರಿ		ಜ	ಕ	ಣ	ಚಾ	ರಿ
ರ				ಷಿ		ರ್ನಿ			ರು	
ಮ	ಧು	ಮಂ	ಚ				ಅ	ಟ್ಟಿ	ಹಾ	ಸ
ದ			ಲಿ		ದಿ		ನು		ಸ	
ಕ	ಬ್ಜ		ಸ		ಯಾ		ರಾ		ನ್	
ರಿ		ಸುಂ	ದ	ರ	ಸ್ವ	ಪ್ನ	ಗ	ಳು		ಕ
	ರಾ		ಸಾ		ರೂ		ಸಂ		ನಿ	ನ್ನೇ
	ಮ		ಗ		ಪ್		ಗ			ಶ್ವ
ಭ	ಲ	ಗಾ	ರ				ಮ	ಹೇ	ಶ್ವ	ರ
	ಕ್ಷ್ಮಿ			ಸೀ		ಕೋ				ರಾ
ಕೋ	ಣ	ಈ	ದೈ	ತೆ		ಕೋ	ದಂ	ಡ	ರಾ	ಮ

ಮೇಲಿನಿಂದ ಕೆಳಕ್ಕೆ

1. ಸೌಂದರ್ಯ ಚಿತ್ರದ ನಾಯಕಿ ರುಜುವಾತು ಪಡಿಸಿದ್ದಾಳೆ 6
2. ಪದವೀಧರ ಹಾಡಿದ ಹಾಡು 2
3. ಸಿಡಿದೆದ್ದ ಸಹೋದರ ಚಿತ್ರದ ಸಂಗೀತ ನಿರ್ದೇಶಕ 2
4. ಶಂಕರ್ ನಾಗ್-ಸುಲಕ್ಷಣ ಅವರ ದೈವ ಲೀಲೆ 5
6. ಬಿ.ಆರ್.ಪಂತುಲು ಅವರ ಸ್ಕೂಲ್ ಮಾಸ್ಟರ್ ಚಿತ್ರದಲ್ಲಿ ತಮಿಳು ನಟನಿದ್ದಾನೆ 7
7. ರಘುವೀರನ ಬಿಳಿಯ ಬಣ್ಣದ ಹೂವು ಎಲ್ಲಿಯದು! 7
8. ಕನ್ನಡದಲ್ಲಿನ ಡುಯೆಟ್ ಸಾಂಗ್ 5
11. ರಂಭೆಯ ಜೊತೆ ಬಂದ ರೂಪಸಿಯರು 6
12. ಮಾನಸ ಸರೋವರ ಚಿತ್ರದ ನಾಯಕಿ 5
16. ಅಮರೀಶ್ ಪುರಿಯ "ಅರಣ್ಯ" 2
17. ಶಿವಣ್ಣ "ಸಾಧು" 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕಾಡಂಚಿನ ಜನರಿಂದ ಅಹವಾಲು ಆಲಿಸಿದ ಹರೀಶ್‌ಗೌಡ

ಡಾಂಬರೀಕರಣ, ಅಕ್ರಮ ಮದ್ಯ ಮಾರಾಟ ನಿಷೇಧ, ಕೆರೆಗೆ ಕೋಡಿ, ಕರೆಂಟ್ ಸಮಸ್ಯೆ ನಿವಾರಣೆಗೆ ಸೂಚನೆ

ಹುಣಸೂರು, ಜ.11– ಸಮಸ್ಯೆಗಳಿಗೆ ಸಿಲುಕಿರುವ ಗ್ರಾಮಗಳಿಗೆ ಕೂಡಲೇ ಮೂಲ ಸೌಕರ್ಯ ಒದಗಿಸುವಂತೆ ಹೇಳುವ ಮೂಲಕ ಶಾಸಕ ಜಿ.ಡಿ.ಹರೀಶ್‌ಗೌಡರು, ಆದಿವಾಸಿಗಳು ಮತ್ತು ಕಾಡಂಚಿನ ಗ್ರಾಮಸ್ಥರಿಂದ ಸಮಸ್ಯೆ ಆಲಿಸಿ ಸ್ಥಳದಲ್ಲೇ ಸೂಕ್ತ ಕ್ರಮಕ್ಕೆ ಸೂಚಿಸಿದ್ದಾರೆ.



ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಪಂ ವ್ಯಾಪ್ತಿಯ ಬಿಲ್ಲೇನಹೊಸಹಳ್ಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡರು ಭೇಟಿ ನೀಡಿದ ವೇಳೆ ಅಲ್ಲಿನ ಆದಿವಾಸಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

ತಾಲೂಕಿನ ಹನಗೋಡು ಹೋಬಳಿಯ ನೇರಳಕುಪ್ಪೆ ಹಾಗೂ ಕಡೇಮನುಗನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿದ ಅವರು, ಆದಿವಾಸಿಗಳು ಹಾಗೂ ಕಾಡಂಚಿನ ಗ್ರಾಮಸ್ಥರಿಂದ ಬಂದ ನೂರಾರು ದೂರು ಮತ್ತು ಅಹವಾಲುಗಳನ್ನು ಸ್ವೀಕರಿಸಿ ಈ ಸೂಚನೆ ನೀಡಿದ್ದಾರೆ.

ಡಾಂಬರ್ ಹಾಕಿಸಿಕೊಡಿ: ನೇರಳಕುಪ್ಪೆ ಗ್ರಾ.ಪಂ ವ್ಯಾಪ್ತಿಯ ಕಚುವಿನಹಳ್ಳಿ ಮುಖ್ಯ ರಸ್ತೆಯಿಂದ ಕೆ.ಜಿ.ಹೆಬ್ಬನಕುಪ್ಪೆಗೆ ಹೋಗುವ ರಸ್ತೆಗೆ ಕಳೆದ ಒಂದು ವರ್ಷದ ಹಿಂದೆಯೇ ರಸ್ತೆ ಡಾಂಬರಿಕರಣ ಕಾಮಗಾರಿ ಪ್ರಾರಂಭಿಸಿದ್ದು, ಕೇವಲ ಮೆಟ್ಲಿಂಗ್ ಹಾಗೂ ಚರಂಡಿ, ಡೆಕ್ ನಿರ್ಮಾಣ ಮಾಡಲಾಗಿದೆ. ಇದುವರೆಗೂ ಡಾಂಬರ್ ಹಾಕದೇ ವಿಳಂಬ ಮಾಡುತ್ತಿದ್ದು, ರಸ್ತೆ ಬದಿ ಮನೆಗಳಿಗೆ ನಿತ್ಯ ಓಡಾಡುವ ವಾಹನಗಳಿಂದ ಧೂಳು ಬರುತ್ತಿದೆ. ಬೇಗ ಡಾಂಬರ್ ಹಾಕಿಸಿಕೊಡಿ ಸಾರ್ ಎಂದು ಗ್ರಾಮಸ್ಥರು ಮನವಿ ಮಾಡಿಕೊಂಡರು.

ಇದಲ್ಲದೆ ಚಂದನಗಿರಿ ಗಿರಿಜನರ ಹಾಡಿ ರಸ್ತೆ ನೇರಳಕುಪ್ಪೆ ಎ ಹಾಡಿ ರಸ್ತೆ ಕೆಜಿ.ಹೆಬ್ಬನಕುಪ್ಪೆ ಬಸವೇಶ್ವರ ದೇವಸ್ಥಾನ ರಸ್ತೆ, ಬಿಲ್ಲೇನ ಹೊಸಹಳ್ಳಿಯಿಂದ ತಾವರೆಕೆರೆ ರಸ್ತೆ ಹೊಸಕೆರೆ ರಸ್ತೆ ಚಂದನಗಿರಿ ಹಾಡಿ ರಸ್ತೆ ಉಡುವೇಪುರದ ಸುಬ್ರಮಣಿ ಮನೆಗೆ ಹೋಗುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಗ್ರಾಮಸ್ಥರು ಮಾಡಿದ ಮನವಿಗೆ ಸ್ಪಂದಿಸಿದ ಶಾಸಕರು, ಮುಂಬರುವ ದಿನಗಳಲ್ಲಿ ಬರುವ ಅನುದಾನದಲ್ಲಿ ಆದ್ಯತೆ ಮೇರೆಗೆ ರಸ್ತೆ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿ ಕಚುವಿನಹಳ್ಳಿ ರಸ್ತೆಗೆ ಕೂಡಲೇ ಡಾಂಬರ್ ಹಾಕಲು ದೂರವಾಣಿ ಮೂಲಕ ಸಂಬಂಧಪಟ್ಟ ಅಧಿಕಾರಿಗೆ ಸೂಚನೆ ನೀಡಿದರು.

ಕರೆಂಟ್ ವೈರ್ ಸಮಸ್ಯೆ: ನೇರಳಕುಪ್ಪೆ ಎ ಹಾಡಿಯ ಬಾಬು ಹಾಗೂ ಕಚುವಿನಹಳ್ಳಿ ಶ್ರೀನಿವಾಸ್ ಅವರ ಮನೆ ಮೇಲೆ ಹಾದು ಹೋಗಿರುವ ಕರೆಂಟ್ ವೈರನ್ನು ಕೂಡಲೆ ಬೇರೆಡೆಗೆ ಸ್ಥಳಾಂತರಿಸಬೇಕು ಹಾಗೂ ಬಿಲ್ಲೇನ ಹೊಸಹಳ್ಳಿಯಲ್ಲಿ ಬಿಟ್ಟು ಹೋಗಿರುವ 7–8 ಮನೆಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಹಾಗೂ ಗ್ರಾಮಕ್ಕೆ ಹೆಚ್ಚುವರಿ ವಿದ್ಯುತ್ ಟಿಸಿ ಅಳವಡಿಸಲು ಗ್ರಾಮಸ್ಥರು ಒತ್ತಾಯಿಸಿದಾಗ ಶಾಸಕರು, ವಿದ್ಯುತ್ ಇಲಾಖೆಯ ಎಇಇ ಸಿದ್ದಪ್ಪ ಅವರಿಗೆ ಕರೆ ಮಾಡಿ ತಕ್ಷಣ ಈ ಕೆಲಸಗಳನ್ನು ಮಾಡಲು ಸೂಚಿಸಿದರು.

ಕೆರೆಗೆ ಕೋಡಿ ನಿರ್ಮಿಸಿಕೊಡಿ; ಬಿಲ್ಲೇನ ಹೊಸಹಳ್ಳಿಯ ತಾವರೆಕೆರೆಗೆ ಕೋಡಿ ಇಲ್ಲದೆ ಕೆರೆಯ ನೀರು ಪೋಲಾಗುತ್ತಿದೆ. ಇದಲ್ಲದೆ ಅಚ್ಚುಕಟ್ಟುದಾರರಿಗೆ ಬೆಳೆ ಬೆಳೆಯಲು ನೀರು ಸರಾಗವಾಗಿ ಹರಿಯಲು ಕಾಲುವೆ ಇಲ್ಲವೆಂಬ ಗ್ರಾಮಸ್ಥರ ದೂರಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕೋಡಿ ದುರಸ್ತಿಗೆ ಕ್ರಮವಹಿಸಲು ಸೂಚನೆ ನೀಡುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ಅಕ್ರಮ ಮದ್ಯ ಮಾರಾಟ ನಿಲ್ಲಿಸಿ; ಬಿಲ್ಲೇನ ಹೊಸಹಳ್ಳಿಯ ಆದಿವಾಸಿ ಮಹಿಳೆಯರು ಹಾಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ, ಪ್ರತಿ ನಿತ್ಯ ಆದಿವಾಸಿಗಳು ಕುಡಿದು ಗಲಾಟೆಗಳು ನಡೆಯುತ್ತಿವೆ. ಇದಲ್ಲದೆ ಇಸ್ಪೀಟ್ ಕೂಡ ಆಡುತ್ತಾರೆ. ಇದನ್ನು ನಿಲ್ಲಿಸಿ ಎಂಬ ಮನವಿಗೆ ಅಕ್ರಮ ಮದ್ಯ ಮಾರಾಟ ಮಾಡುವವರನ್ನು ಸದೆ ಬಡಿಯಲು ಅಬಕಾರಿ ಹಾಗೂ ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡುತ್ತೇನೆ ಎಂದು ತಿಳಿಸಿ ಅಕ್ರಮ ಮದ್ಯ ಮಾರಾಟಗಾರರ ಪರವಾಗಿ ಯಾರೂ ಸಪೋರ್ಟ್‌ಗೆ ಬರಬೇಡಿ ಎಂದು ತಮ್ಮ ಕಾರ್ಯಕರ್ತರಿಗೆ ತಿಳಿಸಿದರು.

ಮತದಾರರಿಗೆ ಕೃತಜ್ಞತೆ: ಇದೇ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡರು ಸಿಂಡೇನಹಳ್ಳಿ, ನೇಗತ್ತೂರು, ಶೆಟ್ಟಹಳ್ಳಿ, ಕಚುವಿನಹಳ್ಳಿ,, ನೇರಳಕುಪ್ಪೆ, ಬಿಲ್ಲೇನಹೊಹಳ್ಳಿ, ಉಡುವೇಪುರ, ಕಡೇಮನುಗನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ತಮಗೆ ಕಳೆದ ಚುನಾವಣೆಯಲ್ಲಿ ಹೆಚ್ಚಿನ ಮತ ನೀಡಿದ ಮತದಾರರಿಗೆ ಕೃತಜ್ಞತೆ ತಿಳಿಸಿದರು.

> ಹನಗೋಡು, ನೇರಳಕುಪ್ಪೆ ಬಾರ್‌ಗಳಲ್ಲಿ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕೂಲಿ ಕಾರ್ಮಿಕರು ಹಾಗೂ ಮಧ್ಯಮವರ್ಗದ ಪಾನ ಪ್ರಿಯರಿಗೆ ತೊಂದರೆ ಆಗುತ್ತಿದೆ. ಆದ್ದರಿಂದ ಬಾರ್‌ಗಳಲ್ಲಿ ಎಂಆರ್‌ಪಿ ಬೆಲೆಗೆ ಮದ್ಯ ಸಿಗುವಂತೆ ಮಾಡಿ ಎಂದು ಕೆ.ಜಿ. ಹೆಬ್ಬನಕುಪ್ಪೆಯ ಜನರು ಮನವಿ ಮಾಡಿದರು.

ತಾಪಂ ಇ.ಒ ಮನು, ನೇರಳಕುಪ್ಪೆ ಗ್ರಾಪಂ ಅಧ್ಯಕ್ಷೆ ಗೀತಾ ಸುರೇಶ್, ಉಪಾಧ್ಯಕ್ಷೆ ರುಕ್ಮಿಣಿ ಸುರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರು ಬಸವರಾಜ್, ಮುದಗನೂರು ಸುಭಾಷ್, ತಾ.ಪಂ ಮಾಜಿ ಸದಸ್ಯ ಗಣಪತಿ, ಅಧಿಕಾರಿ ಕೆ.ಪಿ.ಬಸವರಾಜ್, ಜಿ.ಪಂ ಎಇಇ ನರಸಿಂಹಯ್ಯ, ಕುಡಿಯುವ ನೀರು ಯೋಜನೆಯ ಎಇಇ ಮಹಮದ್ ಕಲೀಂ, ಗ್ರಾ.ಪಂ ಸದಸ್ಯರಾದ ಜವರಮ್ಮ, ಮಾದೇಗೌಡ, ಅಮಾಸೇಗೌಡ, ಸಣ್ಣಮ್ಮ, ಉಡುವೇಪುರ ಸುಬ್ರಮಣಿ, ಮಾಜಿ ಅಧ್ಯಕ್ಷ ಕೆ.ಡಿ.ಮಹೇಶ್, ಮುಖಂಡರಾದ ಕೂಡ್ಲೂರು ಜಾರ್ಜ್, ಸಂಜೀವ, ಕಂಬುಗೌಡರು, ನಟೇಶ್, ಬೀರತಮ್ಮನಹಳ್ಳಿ ಲೋಕೇಶ್, ಜಿ.ಡಿ.ಮೋಹನ್, ವಾಸು, ಅಮ್ಮಣಿ, ರಮೇಶ್, ಪ್ರಸನ್ನ, ಭರತ್, ರಾಮೇಗೌಡ ರವಿ, ಅಬ್ಬೂರುಕರ್ಣೇಗೌಡ ಪಿಡಿಒ ದೇವರಾಜ್ ಸೇರಿದಂತೆ ಇತರರು ಇದ್ದರು.

ಮಹರ್ಷಿ ವಾಲ್ಮೀಕಿ ಜಾತ್ರಾ ಸಮಿತಿ ತಾಲೂಕು ಅಧ್ಯಕ್ಷರಾಗಿ ಹೊನ್ನನಾಯಕ ಆಯ್ಕೆ



ತಾಲೂಕು ನಾಯಕ ಸಂಘದ ಸಭೆಯಲ್ಲಿ ಫೆಬ್ರವರಿ ತಿಂಗಳಲ್ಲಿ ರಾಜನಹಳ್ಳಿಯಲ್ಲಿ ನಡೆಯುವ ವಾಲ್ಮೀಕಿ ಜಾತ್ರೆಯ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಜ.11– ದಾವಣಗೆರೆಯ ರಾಜನಹಳ್ಳಿಯಲ್ಲಿ ಮುಂದಿನ ತಿಂಗಳು(ಫೆ.8 ಮತ್ತು 9) ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರೆ ನಡೆಯಲಿರುವ ಹಿನ್ನೆಲೆಯಲ್ಲಿ ಜಾತ್ರೆ ಸಮಿತಿಯ ತಾಲೂಕು ಅಧ್ಯಕ್ಷರಾಗಿ ಜಿ.ಪಂ ಮಾಜಿ ಸದಸ್ಯ ಗದ್ದೆಮೋಳೆ ಹೊನ್ನನಾಯಕ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪಟ್ಟಣದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ನಡೆದ ತಾಲೂಕು ನಾಯಕ ಸಂಘದ ಸಭೆಯಲ್ಲಿ ಹೊನ್ನನಾಯಕ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭ ಹೊನ್ನನಾಯಕರು ಮಾತನಾಡಿ, ದಾವಣಗೆರೆ ಹರಿಹರ ತಾಲೂಕು ರಾಜನಹಳ್ಳಿಯ ಶ್ರೀ ಮಠದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತಾಲೂಕು ಮಹರ್ಷಿ ವಾಲ್ಮೀಕಿ ಜಾತ್ರೆ ಸಮಿತಿ ಅಧ್ಯಕ್ಷರಾಗಿ ಆಯ್ಕೆ ಮಾಡಿದಕ್ಕೆ ಕೃತಜ್ಞತೆ ಸಲ್ಲಿಸಿದರು.

ಇದೇ ವೇಳೆ ಮಹರ್ಷಿ ವಾಲ್ಮೀಕಿ ಜಾತ್ರೆಯ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ತಾಲೂಕು ನಾಯಕ ಸಂಘದ ಹಂಗಾಮಿ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಮುಖಂಡರಾದ ಡಾ. ಮಹದೇವಯ್ಯ, ಆಲಗೂಡು ನಾಗರಾಜು, ಪಿ.ಶಶಿಧರ್, ಪೊಲೀಸ್ ಸಿದ್ದಪ್ಪ, ಮೇಗಡಹಳ್ಳಿ ರಾಜು, ಗವಿನಾಯಕ, ಶಿವಸ್ವಾಮಿ, ಗೋವಿಂದರಾಜ್, ತಲಕಾಡು ಸುಂದರನಾಯಕ, ಹೆಮ್ಮಿಗೆ ಹೊನ್ನನಾಯಕ, ಚಿನ್ನಸ್ವಾಮಿ, ಶಾಂತರಾಜು, ಸುಂದರ್, ತಿರುಮಕೂಡಲು ವಾಸು ಸೇರಿದಂತೆ ಮತ್ತಿತರರು ಹಾಜರಿದ್ದರು.

ಕೋಟೆ ಬಳಿ ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ದುರಂತ

ಅಪಾರ ಪ್ರಮಾಣದ ದವಸ-ಧಾನ್ಯ, ಚಿನ್ನ-ಬೆಳ್ಳಿ, ನಗದು ಭಸ್ಮ

ಹೆಚ್.ಡಿ. ಕೋಟೆ, ಜ.11– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯೊಂದರಲ್ಲಿ ಅಗ್ನಿ ದುರಂತ ಸಂಭವಿಸಿ ಅಪಾರ ಪ್ರಮಾಣದ ಧವಸ–ಧಾನ್ಯಗಳು, ಚಿನ್ನ, ಬೆಳ್ಳಿ, ನಗದು ಸುಟ್ಟು ಕರಕಲಾಗಿರುವ ಘಟನೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಬಳಿ ಗುರುವಾರ ನಡೆದಿದೆ.

ಗ್ರಾಮದ ನಿವಾಸಿ ಕೆಂಪಮ್ಮ ಎಂಬುವರ ಮನೆಯಲ್ಲಿ ಈ ದುರಂತ ಸಂಭವಿಸಿದ್ದು, ಇಡೀ ಕುಟುಂಬ ಬೀದಿ ಪಾಲಾಗಿದೆ. ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಭಾರಿ ಹೊಗೆ ಮನೆಯಿಂದ ಹೊರಗಡೆ ಬರುತ್ತಿದ್ದುದ್ದನ್ನು ಕಂಡ, ಸಮೀಪದ ಚಿಲ್ಲರೆ ಅಂಗಡಿ ಮಾಲೀಕರೊಬ್ಬರು ತಕ್ಷಣ ಮನೆ ಬಳಿ ಹೋಗಿ ನೋಡಿ ಅಗ್ನಿ ದುರಂತ ಕಂಡು ಕಿರುಚಿಕೊಂಡಿದ್ದಾರೆ. ಮನೆಯ ಮಾಲೀಕರಾದ ಕೆಂಪಮ್ಮ ಅವರು ತಮ್ಮ ಮೂವರು ಮೊಮ್ಮಕ್ಕಳ ಜೊತೆಗೂಡಿ ಜಮೀನಿನಲ್ಲಿ ಹೂ ಬಿಡಿಸಲು ತೆರಳಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಂಗಡಿ ಮಾಲೀಕ ಕಿರುಚಿಕೊಂಡದ್ದನ್ನು ಕೇಳಿ ತಕ್ಷಣ ಗಾಬರಿಗೊಂಡು ಮನೆ ಬಳಿ ಓಡಿ ಬಂದಿದ್ದಾರೆ.

ಕೆಂಪಮ್ಮ ಅವರ ಮೊಮ್ಮಗ ಬೇರೊಬ್ಬರ ಬೈಕ್‌ನಲ್ಲಿ ಹೆಚ್.ಡಿ. ಕೋಟೆ ಪಟ್ಟಣದಲ್ಲಿರುವ ಅಗ್ನಿಶಾಮಕ ಠಾಣೆಗೆ ತೆರಳಿ ಮಾಹಿತಿ ತಿಳಿಸಿದ್ದಾನೆ. ತಕ್ಷಣ, ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮನೆಯಲ್ಲಿ ಶಾರ್ಟ್ ಸರ್ಕ್ಯೂಟ್ ಆದ ತಕ್ಷಣ ಬಟ್ಟೆಗೆ ಬೆಂಕಿ ಆವರಿಸಿದೆ. ಇದರಿಂದ ಮನೆಯಲ್ಲಿದ್ದ ದವಸ–ಧಾನ್ಯ, ಗೃಹೋಪಯೋಗಿ ಪದಾರ್ಥಗಳು ಸುಟ್ಟು ಕರುಕಲಾಗಿದೆ. ಅಲ್ಲದೆ ಕೆಂಪಮ್ಮ ಅವರು ತಮ್ಮ ಟ್ರಂಕ್‌ನಲ್ಲಿ ಇಟ್ಟಿದ್ದ ಮೂರು ಲಕ್ಷ ರೂ. ಮೌಲ್ಯದ ಚಿನ್ನ, ಬೆಂಕಿಯಲ್ಲಿ ಬೆಂದು ಹೋಗಿದೆ. ಅಲ್ಲದೆ 3 ಲಕ್ಷ ರೂ. ಹಣ ಕೂಡ ಬೆಂಕಿಗೆ ಆಹುತಿಯಾಗಿದೆ. ಚಿನ್ನ ಹಾಗೂ ಹಣ ಬೆಂಕಿಗೆ ಆಹುತಿಯಾಗಿರುವುದನ್ನು ನೇರವಾಗಿ ಕಣ್ಣಾರೆ ಕಂಡ ಮನೆಯ ಒಡತಿ ಕೆಂಪಮ್ಮ ಕಂಡು ಗೋಳಾಡಿ ಕುಸಿದು ಬಿದ್ದಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ. ಸಹಾಯಕ ಅಗ್ನಿ ಶಾಮಕದಳ ಅಧಿಕಾರಿ ಎಂ.ಜಿ. ಸೋಮಣ್ಣ, ಚಾಲಕ ಹೇಮಂತ್ ಕುಮಾರ್, ಪ್ರಮುಖ ಅಗ್ನಿಶಾಮಕ ಸಿಬ್ಬಂದಿಗಳಾದ ಅಶೋಕ್, ಮುನಿಸಿದ್ದ ನಾಯಕ, ರಾಹುಲ್, ಬಾಲಕೃಷ್ಣ ಅವರುಗಳು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



> ನಾವು ಕಷ್ಟದಲ್ಲಿ ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಪ್ರತಿದಿನ ಜಮೀನಿನಲ್ಲಿ ಹೂ ಬೆಳೆದು, ಹಸು ಹಾಕಿಕೊಂಡು ಜೀವನ ಮಾಡುತ್ತಿದ್ದೇವೆ. ಕಷ್ಟದಿಂದ ಬದುಕುತ್ತಿದ್ದಂತಹ ನಮಗೆ ಇಂಥ ಒಂದು ಅವಘಡದಿಂದ ನಮ್ಮ ಕುಟುಂಬವೇ ಬೀದಿ ಪಾಲಾಗಿದೆ. ನಮಗೆ ಆಗಿರುವ ನಷ್ಟವನ್ನು ಸರ್ಕಾರ ಭರಿಸಬೇಕು. –ಅಳಿಯ ರಾಕೇಶ್.

ನಾಳೆ ನಮ್ಮೂರ ಕನ್ನಡ ಹಬ್ಬ ಕಾರ್ಯಕ್ರಮ

ನಂಜನಗೂಡು, ಜ.11– ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಜ.13 ರಂದು ಸಂಜೆ 4.30ಕ್ಕೆ ಕರ್ನಾಟಕ ಪ್ರತಿಧ್ವನಿ ವೇದಿಕೆಯ ವತಿಯಿಂದ ನಮ್ಮೂರ ಕನ್ನಡ ಹಬ್ಬ ಎಂಬ ಕಾರ್ಯಕ್ರಮವನ್ನು ನಗರದ ದೇವಿರಮ್ಮನಹಳ್ಳಿಯ ಶರಣ ಸಂಗಮ ಮಠದ ಆವರಣದಲ್ಲಿ ಏರ್ಪಡಿಸಲಾಗಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಪ್ರತಿಧ್ವನಿ ವೇದಿಕೆಯ ತಾಲೂಕು ಅಧ್ಯಕ್ಷ ತ್ರಿನೇಶ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರತಿಧ್ವನಿ ವೇದಿಕೆಯು ದೀನ ದಲಿತರ, ಶೋಷಿತರ, ರೈತ ಪರವಾಗಿ ಕನ್ನಡ ನೆಲ ಜಲ ಸಂರಕ್ಷಣೆಯ ಹೋರಾಟದಲ್ಲಿ ನಿರತವಾಗಿದೆ. ಇದೇ ಜ. 13ರಂದು ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಮ್ಮೂರ ಕನ್ನಡ ಹಬ್ಬ ಎಂಬ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಲಿದ್ದಾರೆ. ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ನಗರಾಧ್ಯಕ್ಷ ಆನಂದ್, ಗುರುಸಿದ್ದಪ್ಪ ಶಿವಕುಮಾರ್, ಪ್ರಕಾಶ್, ರಾಜಶೇಖರ್, ಶಿವು, ಚಂದ್ರಾವಾಡಿ ಕೀರ್ತಿ ಇದ್ದರು.



ತಿ.ನರಸೀಪುರ ತಾಲೂಕಿನ ಎಲ್ಲಾ 29 ಸರ್ಕಾರಿ ಪ್ರೌಢಶಾಲೆಗಳಿಗೆ ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣಾ ಅವರು SSLC ಪರೀಕ್ಷೆ ಬರೆಯುವ ತಾಲೂಕಿನ ಎಲ್ಲಾ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಅಭ್ಯಾಸ ಹಾಳೆ (ಬಫ್ ಶೀಟ್)ಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಅವರಿಗೆ ಕೊಡುಗೆಯಾಗಿ ನೀಡಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಚಿನ್ನಸ್ವಾಮಿ, ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ಪ್ರಸಾದ್.ಬಿ, ಆರ್.ಪಿ.ರಾಜಶೇಖರ್, ಮುಖ್ಯ ಶಿಕ್ಷಕಿ ಜ್ಞಾನೇಶ್ವರಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಆಲತ್ತೂರು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆ



ನಂಜನಗೂಡು ತಾಲೂಕು ಆಲತ್ತೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಆಲತ್ತೂರು ಗ್ರಾಮದ ನಂಜುಂಡಸ್ವಾಮಿ, ಉಪಾಧ್ಯಕ್ಷರಾಗಿ ಮಾದಯ್ಯನುಂಡಿ ಪ್ರಕಾಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಚುನಾವಣಾಧಿಕಾರಿಗಳಾದ ಪ್ರಸಾದ್, ಸಂಘದ ಕಾರ್ಯದರ್ಶಿ ಪುಟ್ಟಸ್ವಾಮಿ, ಗ್ರಾಮದ ಗೌಡರಾದ ಸಿದ್ದಲಿಂಗಪ್ಪ, ಗ್ರಾಮದ ಮುಖಂಡರು ಹಾಜರಿದ್ದರು.


ಎಳ್ಳು ಅಮಾವಾಸ್ಯೆ ಪೂಜೆ

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮರದೂರು ಗ್ರಾಮದ ತೋಪಿನಮ್ಮ ದೇವಾಲಯದಲ್ಲಿ ಎಳ್ಳು ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಾಲಯದಲ್ಲಿ ಪ್ರಧಾನ ಅರ್ಚಕ ಪ್ರಸನ್ನ ಅವರು ವಿಶೇಷ ಅಭಿಷೇಕ, ಪುಷ್ಪ ಅಲಂಕಾರವನ್ನು ಸೇರಿದಂತೆ ಇದೇ ರೀತಿಯ ಪೂಜೆ ವಿಧಾನವನ್ನು ನೆರವೇರಿಸಿದರು. ಭಕ್ತಾದಿಗಳಿಗೆ ಅನ್ನದಾನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ದೇವಸ್ಥಾನ ಅಭಿವೃದ್ಧಿ ಅಧ್ಯಕ್ಷ ಜವರೇಗೌಡ, ಮುಖಂಡರಾದ ಸಂತೋಷ್, ಅತ್ತಿಗೋಡು ಗ್ರಾಮದ ಪಣೀಶ, ರಜನಿಕಾಂತ್, ಗೌರೀಶ್ ಸೇರಿದಂತೆ ಮೂಡಲಕೊಪ್ಪಲು, ವಡ್ಡರಹಳ್ಳಿ, ಬೆಟ್ಟದಪುರ, ಕಿತ್ತೂರಿನ ಗ್ರಾಮಸ್ಥರು ಹಾಜರಿದ್ದರು.

ಅಭಿವೃದ್ಧಿ ಹೆಸರಿನಲ್ಲಿ ಪ್ರಕೃತಿಯ ನಾಶ ಕಳವಳಕಾರಿ ಸಂಗತಿ

ಅರಸನಕೆರೆ ಜೀರ್ಣೋದ್ಧಾರ ಕಾಮಗಾರಿ ವೀಕ್ಷಿಸಿದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ನಂಜನಗೂಡು, ಜ.11– ಪರಿಸರ ಸಂರಕ್ಷಣೆ ನಮ್ಮ ಧರ್ಮ, ನಮ್ಮ ಹೊಣೆಗಾರಿಕೆ ಎಂಬುದನ್ನು ಮರೆತು ತಂತ್ರಜ್ಞಾನ, ಅಭಿವೃದ್ಧಿ ಹೆಸರಿನಿಂದ ಪ್ರಕೃತಿಯ ನಾಶಕ್ಕೆ ಮುಂದಾಗಿರುವುದು ಕಳವಳಕಾರಿ ಸಂಗತಿ ಎಂದು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.



ಬಕಾರ್ಡಿ ಕೈಗಾರಿಕೆಯವರು ತಮ್ಮ ಸಿಎಸ್‌ಆರ್ ಅನುದಾನದಲ್ಲಿ ಕೈಗೊಂಡಿರುವ ಅರಸನ ಕೆರೆ ಜೀರ್ಣೋದ್ಧಾರ ಕಾಮಗಾರಿಯನ್ನು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವೀಕ್ಷಿಸಿದರು.

ತಾಲೂಕಿನ ಚಿನ್ನದಗುಡಿಹುಂಡಿ ಬಳಿಯಲ್ಲಿ ಬಕಾರ್ಡಿ ಕೈಗಾರಿಕೆಯವರು ತಮ್ಮ ಸಿಎಸ್‌ಆರ್ ಅನುದಾನದಲ್ಲಿ ಕೈಗೊಂಡಿರುವ ಅರಸನ ಕೆರೆ ಜೀರ್ಣೋದ್ಧಾರ ಕಾಮಗಾರಿಯನ್ನು ವೀಕ್ಷಿಸಿ ಕೆರೆಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಮೈಸೂರು ಸಂಸ್ಥಾನ, ನಮ್ಮ ಪೂರ್ವಜರು ಹಿಂದಿನಿಂದಲೂ ಸಹ ಪರಿಸರ ಸಂರಕ್ಷಣೆಗೆ, ವನ್ಯಜೀವಿ ಸಂರಕ್ಷಣೆಗೆ ಆದ್ಯತೆ ನೀಡಿದ್ದರು. ಯಾಕೆಂದರೆ ಮೈಸೂರಿನ ಜನತೆ ಸದಾ ಪರಿಸರ ಪ್ರೇಮಿಗಳಾಗಿದ್ದಾರೆ. ಆದ್ದರಿಂದಲೇ ನಮ್ಮ ಪೂರ್ವಜರು ಐತಿಹಾಸಿಕ ಈ ಅರಸನಕೆರೆಯಲ್ಲಿ ಜೀವಕಳೆ ತುಂಬಿ ವನ್ಯ ಜೀವಿಗಳ ಸಂರಕ್ಷಣೆ ಜೊತೆಗೆ ಈ ಭಾಗದ ರೈತರ ಬದುಕಿಗೂ ಆಸರೆಯಾಗಿದ್ದರು ಎಂದರು.

ಈ ಕೆರೆಗೆ ಭದ್ರತಾ ಸಿಬ್ಬಂದಿಗಳನ್ನೂ ನೇಮಿಸಿದ್ದರು. ನಾವು ಆಧುನಿಕತೆ ಹೆಸರಿನಲ್ಲಿ ಕೆರೆಗಳಿಗೆ ಪ್ಲಾಸ್ಟಿಕ್ ಎಸೆಯುವುದು, ತ್ಯಾಜ್ಯಗಳನ್ನು ಎಸೆಯುವ ಮೂಲಕ ಆಧುನಿಕತೆ ತಂತ್ರಜ್ಞಾನದ ಹೆಸರಿನಲ್ಲಿ ಕೆರೆ, ನದಿ ನಾಶಕ್ಕೆ ಮುಂದಾಗಿದ್ದೇವೆ. ಮತ್ತೆ ನಮ್ಮ ಪೂರ್ವಜರಂತೆ ನಾವು ಸಹ ಅದೇ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಕೆರೆ ಕಟ್ಟೆಗಳನ್ನು ಉಳಿಸಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಈ ಅರಸನಕೆರೆ ಸಂರಕ್ಷಣೆ ಗ್ರಾಮಸ್ಥರ ಜವಾಬ್ದಾರಿ: ಬಕಾರ್ಡಿ ಕಂಪನಿ ತಮ್ಮ ಸಿಎಸ್‌ಆರ್ ಅನುದಾನವನ್ನು ಬಳಸಿ ಇತಿಹಾಸವಿರುವ ಈ ಅರಸನಕೆರೆಯ ಜೀರ್ಣೋದ್ಧಾರ ಕೆಲಸಕ್ಕೆ ಮುಂದಾಗಿರುವುದು ಶ್ಲಾಘನೀಯ ಕೆಲಸ. ಇದರಿಂದ ಅಂತರ್ಜಲ ಹೆಚ್ಚಾಗಿ ಈ ಭಾಗದ ರೈತರಿಗೆ ಅನುಕೂಲವಾಗಲಿದೆ ಕೈಗಾರಿಕೆ ಕೆರೆ ಅಭಿವೃದ್ಧಿ ಪಡಿಸಿ ತಮ್ಮ ಸಾಮಾಜಿಕ ಕಳಕಳಿ ತೋರಿದೆ. ಈ ಭಾಗದ ಗ್ರಾಮಸ್ಥರು ದಿನ ನಿತ್ಯ ಪೂಜೆ ಸಲ್ಲಿಸುವಂತೆ ಕೆರೆಯ ಸಂರಕ್ಷಣೆ ಕಾರ್ಯವನ್ನು ನಿತ್ಯ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ಹ್ಯಾಂಡ್ಸ್ ಜೋನ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಗುರುನಂದನ್ ಮಾತನಾಡಿ, ಸುಮಾರು 900 ಎಕರೆ ಪ್ರದೇಶವಿರುವ ಅರಸನ ಕೆರೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಈ ಕಾಮಗಾರಿಯನ್ನು ನಡೆಸಲಾಗುತ್ತಿದೆ. ಮೊದಲಿಗೆ ಬಕಾರ್ಡಿ ಕೈಗಾರಿಕೆಯ ಅನುದಾನವನ್ನು ಬಳಕೆ ಮಾಡಿಕೊಂಡು ಸುಮಾರು 11 ಎಕರೆ ಪ್ರದೇಶದಲ್ಲಿ ಕೆರೆಯ ಜೀರ್ಣೋದ್ಧಾರ ಕೆಲಸಕ್ಕೆ ಮುಂದಾಗಿದ್ದೇವೆ. ಇದರಿಂದ ಸುಮಾರು 64 ಕೋಟಿ ಲೀಟರ್ ನೀರಿನ ಸಂಗ್ರಹಣೆಯಾಗಲಿದೆ. ವಿವಿಧ ಕಂಪನಿಗಳ ಸಿಎಸ್‌ಆರ್ ಅನುದಾನ ಪಡೆದು ಈ ಕೆರೆಯ ಸಂಪೂರ್ಣ ಜೀರ್ಣೋದ್ಧಾರಕ್ಕೆ ಮುಂದಾಗಲಿದ್ದೇವೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್‌ಕುಮಾರ್, ಗ್ರಾಪಂ ಅಧ್ಯಕ್ಷ ದೊರೆಸ್ವಾಮಿ, ಉಪಾಧ್ಯಕ್ಷೆ ಶೋಭಾ ಪ್ರಭುಸ್ವಾಮಿ, ಮುಖಂಡರಾದ ಬದನವಾಳು ಮಂಜುನಾಥ್, ಚಿನ್ನದಗುಡಿಹುಂಡಿ ಸುರೇಶ್, ಶಿವಸ್ವಾಮಿ, ರಂಗದಾಸ್, ವಿಜಯ್‌ಕುಮಾರ್, ಹರ್ಷತೇಜ್, ಬಕಾರ್ಡಿ ಕಂಪನಿಯ ನಿರ್ದೇಶಕ ಮುತ್ತುಕುಮಾರ್, ಸಿಎಸ್‌ಆರ್ ಮುಖ್ಯಸ್ಥ ಭರತ್ ಶರ್ಮ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಇಂದು ಕೆರೆಯ ಉದ್ಘಾಟನೆ

ಬಕಾರ್ಡಿ ಕಂಪನಿಯ ಸಿಎಸ್‌ಆರ್ ಅನುದಾನದಿಂದ ಜೀರ್ಣೋದ್ಧಾರಗೊಂಡಿರುವ ಈ ಅರಸನ ಕೆರೆಯನ್ನು ಜ.12ರ ಶುಕ್ರವಾರ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಉದ್ಘಾಟಿಸಲಿದ್ದಾರೆ. ವಿವಿಧ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಆದ್ದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮನವಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮೇರಿ ಕ್ರಿಸ್ಮಸ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಆಯಲಾಮ್ (ತ)	4 ಪ್ರದರ್ಶನಗಳು
ಸಂಗಂ	
ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು ಕ್ಯಾಪ್ಟನ್ ಮಿರರ್(ತ)	2 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪ್ರೇಮ ಕಥ (ತೆ): ಬೆ.10.20ಕ್ಕೆ, ಮಾಥಿಮಾರನ್ (ತ): ಮ.1.05ಕ್ಕೆ, ಸಲಾರ್–1 (ತೆ): ಮ.3.40ಕ್ಕೆ, ಕಾಟೇರ (ಕ): ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಮ.12.05ಕ್ಕೆ, ಕಾಟೇರ (ಕ): ಮ.3.50ಕ್ಕೆ, ರಾ.10ಕ್ಕೆ, ಪ್ರೇಮ ಕಥ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಒಂಟಿ ಬಂಟಿ ಲವ್ ಸ್ಟೋರಿ (ಕ): ಬೆ.10.20ಕ್ಕೆ, ಡಂಕಿ (ಹಿಂ): ಮ.1.20ಕ್ಕೆ, ರಾ.7.10ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಸಂ.4.30ಕ್ಕೆ, ಆಟಂ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಕಾಟೇರ (ಕ): ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಾಟೇರ (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸಲಾರ್–1 (ಕ): ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, ಸಲಾರ್ –1 (ಹಿಂ): ಮ.2.35ಕ್ಕೆ.
ಸ್ಕ್ರೀನ್ 4	ಮೈಗ್ರೇಷನ್ (3ಡಿ)(ಇಂ): ಬೆ.10.30ಕ್ಕೆ, ರಾ.7.55ಕ್ಕೆ, ಡಂಕಿ (ಹಿಂ): ಮ.12.35ಕ್ಕೆ, ಸಂ.4.35ಕ್ಕೆ, ಸಲಾರ್–1 (ಹಿಂ): ರಾ.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಸಂಘಟಿತ ಕಾರ್ಮಿಕರಿಗೆ ಇ–ಶ್ರಮ್ ಕಾರ್ಡ್ ವಿತರಣೆ



ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕರಾದ ಬಿ. ಮಂಗಳಗೌರಿ ಕಾರ್ಮಿಕ ಇಲಾಖೆಯಿಂದ ಇ –ಶ್ರಮ್ ಕಾರ್ಡನ್ನು ವಿತರಿಸುತ್ತಿರುವುದು.

ಕೆ.ಆರ್.ನಗರ, ಜ.11– ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕಷ್ಟದಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಇ – ಶ್ರಮ್ ಕಾರ್ಡ್ ವಿತರಿಸುತ್ತಿದ್ದು, ಇದರ ಉಪಯೋಗವನ್ನು ಪಡೆದುಕೊಳ್ಳುವಂತೆ ಅಸಂಘಟಿತ ಕಾರ್ಮಿಕರಿಗೆ ಹಿರಿಯ ಕಾರ್ಮಿಕ ನಿರೀಕ್ಷಕರಾದ ಬಿ.ಮಂಗಳ ಗೌರಿ ಮನವಿ ಮಾಡಿದರು.

ಪಟ್ಟಣದ ಕಾರ್ಮಿಕ ಇಲಾಖೆಯ ಕಚೇರಿ ಆವರಣದಲ್ಲಿ ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ ಇ – ಶ್ರಮ್ ಕಾರ್ಡ್ ವಿತರಿಸಿ ಮಾತನಾಡಿದ ಅವರು ದಿನ ಬೆಳಿಗ್ಗೆ ಸಾರ್ವಜನಿಕರ ಮನೆ ಬಾಗಿಲಿಗೆ ಪತ್ರಿಕೆ ವಿತರಿಸುವವರ ಹಾಗೂ ಅಸಂಘಟಿತ ಕಾರ್ಮಿಕರಿಗೆ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಸಾಮಾಜಿಕ ಭದ್ರತೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇದರ ಉಪಯೋಗವನ್ನು ಪ್ರತಿಯೊಬ್ಬ ಕಾರ್ಮಿಕರು ಪತ್ರಿಕೆ ಹಂಚುವವರು ಸೇರಿದಂತೆ ಈ ಯೋಜನೆಗೆ ಒಳಪಡುವ ಎಲ್ಲಾ ಕಾರ್ಮಿಕರು ಮಾಡಿಸಿಕೊಳ್ಳುವಂತೆ ತಿಳಿಸಿದರು.

ಈ ಯೋಜನೆಗೆ ಅರ್ಹರಾಗಿರಬೇಕಾದರೆ, ಈ ರಾಜ್ಯದ ನಿವಾಸಿಯಾಗಿರಬೇಕು. 16 ರಿಂದ 59 ವರ್ಷ ವಯೋಮಾನದವರಾಗಿರಬೇಕು. ಕೇಂದ್ರ ಸರ್ಕಾರದ ಇ–ಶ್ರಮ್ ಪೋರ್ಟಲ್‌ನಲ್ಲಿ ನ್ಯೂಸ್ ಪೇಪರ್ ಬಾಯ್ ಎಂಬ ವರ್ಗದಡಿ ನೋಂದಣಿಯಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಎಸ್‌ಐ ಮತ್ತು ಐಪಿಎಫ್ ಸೌಲಭ್ಯ ಹೊಂದಿರಬಾರದು. ಈ ನಿಯಮ ಹೊಂದಿರುವ ಎಲ್ಲರೂ ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಡಿಇಓ ಚಂದ್ರಕಾಂತ್ ಮಧುರ ಧನುಷ್ ನಟರಾಜ್ ವಡ್ಡರಕೊಪ್ಪಲು ಶಿವರಾಮು ಪಂಡಿತ್ ನಾಟಿಕರ್ ನಾಗಣ್ಣ ಶ್ರೀನಿವಾಸ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಇಂದು ಶಾರದಾ ವಿಲಾಸ ಕಾಲೇಜಿನ ವಿದ್ಯಾರ್ಥಿ ವೇದಿಕೆ ಸಮಾರೋಪ ಸಮಾರಂಭ

ಮೈಸೂರು, ಜ.11– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಜ.12ರಂದು ಶುಕ್ರವಾರ ಬೆಳಿಗ್ಗೆ 10.30ಕ್ಕೆ ವಿದ್ಯಾರ್ಥಿ ವೇದಿಕೆ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿದೆ.

ಮುಖ್ಯ ಅತಿಥಿಯಾಗಿ ಮೈಸೂರಿನ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತ ವಾಗಿ ಸಂಸ್ಥೆ ಅಧ್ಯಕ್ಷರಾದ ಡಾ.ಬಿ.ಎಂ. ಸುಬ್ರಾಂಯ, ಗೌರವ ಕಾರ್ಯದರ್ಶಿಗಳಾದ ಎನ್.ಚಂದ್ರಶೇಖರ್ ಉಪಸ್ಥಿತರಿರುತ್ತಾರೆ. ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವಾಗಿ ನೃತ್ಯ, ಸಂಗೀತ, ಹಾಡುಗಾರಿಕೆ, ಕಿರುನಾಟಕ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾಪ-4/ಪಿ.ಆರ್- /2023-24 ದಿ: 09-01-2024

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಹಿಂದಿನ CITB) ಮಂಡ್ಯ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಶ್ರೀ ಎಂ.ಎಲ್. ಸುಬ್ಬಣ್ಣ ರವರಿಗೆ ದಿನಾಂಕ: 21.08.1945 ರಂದು ಜಯಲಕ್ಷ್ಮೀಪುರಂ 3ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ 48, ಅಳತೆ 150 X 100+91/2 ಅಡಿಗಳು ನಿವೇಶನ ಮಂಜೂರಾಗಿದ್ದು, ಸದರಿಯವರು ನಿವೇಶನದ ಬಾಬ್ತು ಪೂರ್ಣ ಹಣ ರೂ. 2,387–8–0ಗಳನ್ನು ಪಾವತಿಸಿ. ಮುಚ್ಚಳಿಕೆ ಪತ್ರ ನೀಡಿ ಸ್ವಾಧೀನ ಪಡೆದಿದ್ದಾರೆ ನಂತರದಲ್ಲಿ ನಿವೇಶನವು ಇವರ ಮಗನಾದ ಶ್ರೀ ಎಂ.ಎಸ್. ಸುರೇಶ್ ರವರಿಗೆ ದಿನಾಂಕ: 28.06.1962 ರಂದು ವರ್ಗಾವಣೆಯಾಗಿರುತ್ತದೆ. ಮುಂದುವರೆದಂತೆ ಸದರಿ ನಿವೇಶನವು ಶ್ರೀ ಕೆ. ಜಯರಾಮನ್ ರವರಿಗೆ ವರ್ಗಾವಣೆಯಾಗಿದ್ದು, ಸದರಿ ಶ್ರೀ ಕೆ ಜಯರಾಮನ್ 24.04.1993ರಂದು 1)ಶ್ರೀ ನರೇಂದ್ರ ಶಶಿಭೂಷಣ್ ಚಂದ್ರಶೇಖರ್, 2) ಶ್ರೀ ಅರವಿಂದ್ ಎಸ್. ಚಂದ್ರಶೇಖರ್ ಮತ್ತು 3)ಕುಮಾರಿ ಚೇತನ ಚಂದ್ರಶೇಖರ್ (ಕ್ರಮ.ಸಂ.2, 3ನೇ ರವರ ಪರವಾಗಿ ಮೈನರ್ ಗಾರ್ಡಿಯನ್ ಆಗಿ ತಂದೆ ಜೆ.ಇ. ಚಂದ್ರಶೇಖರ್) ರವರು ಜಂಟಿಯಾಗಿ ಶುದ್ಧಕ್ರಯಕ್ಕೆ ಪಡೆದಿರುತ್ತಾರೆ. ಪ್ರಸ್ತುತ, ಮೇಲ್ಕಂಡ ಖರೀದಿದಾರರುಗಳಾದ 1) ಶ್ರೀ ನರೇಂದ್ರ ಶಶಿಭೂಷಣ್ ಚಂದ್ರಶೇಖರ್, 2) ಶ್ರೀ ಅರವಿಂದ್ ಎಸ್. ಚಂದ್ರಶೇಖರ್ ಮತ್ತು 3) ಶ್ರೀಮತಿ ಚೇತನ ಚಂದ್ರಶೇಖರ್ ರವರ ಪರವಾಗಿ ಅವರ ತಂದೆ ಜೆ.ಪಿ.ಎ. ಪ್ರತಿನಿಧಿ ಜೆ.ಇ.ಚಂದ್ರಶೇಖರ್ ನಂ. 48/ಎ, ಬಿ, ಸಿ 3ನೇ ಕ್ರಾಸ್, ಜಯಲಕ್ಷ್ಮೀಪುರಂ, ಮೈಸೂರು. ರವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಜಯಲಕ್ಷ್ಮೀಪುರಂ 3ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ 48 ಅಳತೆ 150 X 100+91/2 ಅಡಿಗಳ ನಿವೇಶನವನ್ನು ವರ್ಗಾವಣೆ ಹಾಗೂ ಕ್ರಯಪತ್ರ ನೀಡುವಂತೆ ಕೋರಿರುವುದರಿಂದ, ವರ್ಗಾವಣೆ ಕೋರಿರುವ ಸ್ವತ್ತಿಗೆ ವರ್ಗಾವಣೆ/ಕ್ರಯಪತ್ರ ನೀಡುವ ಸಂಬಂಧ ಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಹಾಗೂ ಮೇಲ್ಕಂಡ ನಿವೇಶನದ ಮೂಲ ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಹೊಂದಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ವಿಶೇಷ ತಹಸೀಲ್ದಾರ್,
ವಲಯ ಕಛೇರಿ–4
ಮೈಸೂರು ನಗರಾಭಿವರದ್ಧಿ ಪ್ರಾಧಿಕಾರ, ಮೈಸೂರು


ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು









ಮೈಸೂರು ಅರಮನೆ ಮಂಡಳಿ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ: 18/2023–24 ದಿನಾಂಕ: 09.01.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ.15.75 ಲಕ್ಷಗಳಿಗೆ ಸಂಬಂಧಿಸಿದ 04 ಸಂಖ್ಯೆ ದುರಸ್ಥಿ/ನಿರ್ವಹಣೆ/ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ/ನೋಂದಾಯಿತ ಏಜೆನ್ಸಿ/ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 23.01.2024 ಸಂಜೆ 4:00 ಗಂಟೆಯವರೆಗೆ. 2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ:24.01.2024 ಸಂಜೆ 4:00 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿ: 25.01.2024 ಸಂಜೆ 4.00 ಗಂಟೆಯವರೆಗೆ. 4) ಟೆಂಡರ್‌ಗಳನ್ನು ತೆರೆಯುವ ದಿ: 24.01.2024ರ ಸಂಜೆ 4.30 ಗಂಟೆಗೆ. 5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.2.75 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು.
DIPR/DDMYS/KSMCA/887/2023-24

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

"ಸಹಕಾರ ಸಂಕೀರ್ಣ", ಸಹಕಾರ ಭವನ ಆವರಣ, ಚಾಮರಾಜ ಜೋಡಿ ರಸ್ತೆ, ಮೈಸೂರು-570004

2024–28ನೇ ಸಾಲಿನ ಆಡಳಿತ ಮಂಡಳಿ ಚುನಾವಣೆ

ದಿನಾಂಕ 14–01–2024ರ ಭಾನುವಾರದಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಹಾರ್ಡ್ವಿಕ್ ಹೈಸ್ಕೂಲ್, (ಹಿಂದಿನ ಬಿಗ್‌ಬಜಾರ್ ಎದುರು) ರಾಮಸ್ವಾಮಿ ವೃತ್ತ, ಮೈಸೂರು, ಇಲ್ಲಿ ಮೇಲ್ಕಂಡ ಬ್ಯಾಂಕಿಗೆ 2024–28ನೇ ಅವಧಿಯ ಆಡಳಿತ ಮಂಡಳಿ ಚುನಾವಣೆಯು ನಡೆಯಲಿದ್ದು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ಷೇತ್ರಗಳಿಗೆ ಈ ಕೆಳಕಂಡ ನಾವುಗಳು ನಿರ್ದೇಶಕರುಗಳ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಮಾನ್ಯ ಮತದಾರರಾದ ತಾವುಗಳು ಈ ಕೆಳಗೆ ನಮೂದಿಸಿರುವ ನಮ್ಮೆಲ್ಲರಿಗೆ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿ ನಮ್ಮನ್ನು ಬ್ಯಾಂಕಿನ ನಿರ್ದೇಶಕರುಗಳನ್ನಾಗಿ ಆಯ್ಕೆ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ನಮಗೆ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ಕಳಕಳಿಯ ಮನವಿ ಸಲ್ಲಿಸುತ್ತಿದ್ದೇವೆ.

ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ವಿ. ಬೃಹದಂಬರವರ ಮುಂದಾಳತ್ವದಲ್ಲಿ ಬ್ಯಾಂಕನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಲು ತಮ್ಮಗಳ ಸಹಕಾರವನ್ನು ಕೋರುತ್ತೇವೆ. ಈಗಾಗಲೇ ನಮ್ಮಲ್ಲಿ ಹಲವರು ಮೇಲ್ಕಂಡ ಬ್ಯಾಂಕಿನಲ್ಲಿ ಸಂಸ್ಥಾಪಕರಾಗಿ, ಉಪಾಧ್ಯಕ್ಷರಾಗಿ, ನಿರ್ದೇಶಕರಾಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಬ್ಯಾಂಕ್ ತನ್ನೆಲ್ಲಾ ಸದಸ್ಯರಿಗೆ ಹಲವಾರು ಸೌಲಭ್ಯಗಳನ್ನು ನೀಡುತ್ತಿದ್ದು, ಸಾವಿರಾರು ಸದಸ್ಯರು ಇದರ ಸದುಪಯೋಗ ಪಡೆದುಕೊಂಡು ಬ್ಯಾಂಕನ್ನು ಮುನ್ನಡೆಸುತ್ತಿದ್ದಾರೆ. ನಮ್ಮ ಈ ತಂಡಕ್ಕೆ ತಮ್ಮ ಅಮೂಲ್ಯವಾದ 19 ಮತಗಳನ್ನು ಹಾಕಿ ನಮ್ಮನ್ನು ಜಯಶೀಲರನ್ನಾಗಿಸಿ ಆರ್ಥಿಕ ಪ್ರಗತಿಯ ಕಾರ್ಯಗಳನ್ನು ಮುಂದುವರೆಸಲು ನಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಸವಿನಯದಿಂದ ಪ್ರಾರ್ಥಿಸುತ್ತೇವೆ.

ಡಾ. ಎಂ.ವಿ. ಬೃಹದಂಬರವರ ತಂಡ

ಕ್ರಮ ಸಂಖ್ಯೆ	ಹೆಸರು
1	ಹಿಂದುಳಿದ ವರ್ಗದ ಸದಸ್ಯರುಗಳ ಕ್ಷೇತ್ರ — ಶ್ರೀಮತಿ ಅಶ್ವಿನಿ ಗಿರೀಶ್, Dip. In Elec. ಹಾಲಿ ನಿರ್ದೇಶಕರು ಮೊ. 8762373824
2	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಪಿ. ಆಶಾ ಭವಾನಿ, Dip. In Elec. ಕೈಗಾರಿಕೋದ್ಯಮಿ, ಮೊ. 9481530441
3	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಆಶಾಲತ ಎಸ್., BSc.,Dip. In Journalism. (ಆಶಾ ಸ್ವಾಮಿ) ಹಾಲಿ ನಿರ್ದೇಶಕರು ಮೊ. 9448753112
5	ಹುಣಸೂರು ತಾಲ್ಲೂಕು ಕ್ಷೇತ್ರ — ಶ್ರೀಮತಿ ಸಿ.ಎಸ್. ಕೋಮಲ w/o ಸದಾಶಿವಪ್ಪ ಹೆಚ್.ಪಿ., ಶಿಕ್ಷಕರು ಹಾಲಿ ಉಪಾಧ್ಯಕ್ಷರು ಮೊ. 8884815161
13	ಕೆ.ಆರ್. ನಗರ ತಾಲ್ಲೂಕು ಕ್ಷೇತ್ರ — ಶ್ರೀಮತಿ ಪ್ರಭಾಮಣಿ w/o ಎಂ. ಷಡಕ್ಷರಿ, ನಿರ್ದೇಶಕರು, ಅ.ಭಾ.ವೀ.ಮ. ಸಭಾ., ಮೈ. ನಗರ ಘಟಕ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9449049556
14	ಕೊಳ್ಳೇಗಾಲ ತಾಲ್ಲೂಕು ಕ್ಷೇತ್ರ — ಶ್ರೀಮತಿ ಪ್ರಭಾ ಸುರೇಂದ್ರ D/o ಚಿಕ್ಕಮರಿಗೌಡರು ಹಾಲಿ ನಿರ್ದೇಶಕರು ಮೊ. 7019531977
15	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಪ್ರಮೀಳ ಎಂ., ಬಿ.ಎ., W/o ಲೋಕೇಶ್ ಆರ್. ಮೊ. 6363335342
17	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಬಿ.ಎಸ್. ಪ್ರೇಮ ಕುಮಾರಿ ಎಂ.ಎ., ನಿವೃತ್ತ ಪ್ರಾಧ್ಯಾಪಕರು, ಜೆ.ಎಸ್.ಎಸ್. ಕಾಲೇಜು, ಮೈಸೂರು ಹಾಲಿ ನಿರ್ದೇಶಕರು ಮೊ. 9886468110
18	ಪರಿಶಿಷ್ಟ ಜಾತಿಕ್ಷೇತ್ರ — ಡಾ॥ ಭಾಗೀರಥಿ ಎನ್.ಎಂ., ಎಂ.ಬಿ.ಬಿ.ಎಸ್.,ಡಿ.ಜಿ.ಒ., ಹೆಚ್.ಹೆಚ್.ಎಂ ನಿವೃತ್ತ ಸ್ಥಾನಿಕ ವೈದ್ಯಾಧಿಕಾರಿಗಳು, ಚೆಲುವಾಂಬ ಆಸ್ಪತ್ರೆ, ಮೈಸೂರು ಹಾಲಿ ನಿರ್ದೇಶಕರು ಮೊ. 9448750405
19	ನಂಜನಗೂಡು ತಾಲ್ಲೂಕು ಕ್ಷೇತ್ರ — ಶ್ರೀಮತಿ ಬಿ.ಟಿ. ಭಾಗೀರಥಿ ಶ್ರೀ ಅಶ್ವಿನಿ ಪ್ರಿಂಟರ್ಸ್, ನಂಜನಗೂಡು ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9739779888
22	ಮೈಸೂರು ನಗರ ಕ್ಷೇತ್ರ — ಡಾ ಎಂ.ವಿ. ಬೃಹದಂಬ, ಎಂ.ಎ.,ಪಿಹೆಚ್.ಡಿ., ನಿವೃತ್ತ ಪ್ರಾಂಶುಪಾಲರು, ಜೆಎಸ್‌ಎಸ್ ಕಾಲೇಜು, ಮೈಸೂರು ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9481169993
23	ಪರಿಶಿಷ್ಟ ಪಂಗಡ ಕ್ಷೇತ್ರ — ಶ್ರೀಮತಿ ಎಸ್. ಮಹಾಲಕ್ಷ್ಮಿ ಮೊ. 9900444050
24	ಟಿ. ನರಸೀಪುರ ತಾಲ್ಲೂಕು ಕ್ಷೇತ್ರ — ಮಲ್ಲಿಕಾ ಎನ್. ಎಂ.ಎ.ಪಿ.ಹೆಚ್.ಡಿ. W/o ಶಿವಶಂಕರಸ್ವಾಮಿ ಪಿ., ಹಾಲಿ ನಿರ್ದೇಶಕರು ಮೊ. 9480770855
25	ಹಿಂದುಳಿದ ವರ್ಗದ ಸದಸ್ಯರುಗಳ ಕ್ಷೇತ್ರ — ಶ್ರೀಮತಿ ಮೀನಾ ಶ್ರೀನಿವಾಸ್ W/o ತೂಗುದೀಪ ಶ್ರೀನಿವಾಸ್ ಮಾಜಿ ನಿರ್ದೇಶಕರು ಮೊ. 9880023385
34	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಶಿವಕುಮಾರಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9480167969 ನಿರ್ದೇಶಕರು, ಜ್ಞಾನಗಂಗಾ ಗೃ.ನಿ.ಸ.ಸಂಘ,
35	ಚಾಮರಾಜನಗರ ತಾಲ್ಲೂಕು ಕ್ಷೇತ್ರ — ಡಾ. ಡಿ. ಶೀಲಾ ಕುಮಾರಿ, ಎಂ.ಎ.ಪಿ.ಹೆಚ್.ಡಿ. ನಿವೃತ್ತ ಸಂಸ್ಕೃತ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಾಲೇಜು, ಮೈಸೂರು ಹಾಲಿ ಅಧ್ಯಕ್ಷರು ಮೊ. 9740328196
37	ಗುಂಡ್ಲುಪೇಟೆ ತಾಲ್ಲೂಕು ಕ್ಷೇತ್ರ — ಶ್ರೀಮತಿ ಶ್ವೇತ ವಿ. ಹಾಲಿ ನಿರ್ದೇಶಕರು ಮೊ. 8147469961 ನಿರ್ದೇಶಕರು, ಜ್ಞಾನಗಂಗಾ ಗೃ.ನಿ.ಸ.ಸಂಘ,
40	ಮೈಸೂರು ತಾಲ್ಲೂಕು ಕ್ಷೇತ್ರ — ಶ್ರೀಮತಿ ಸುಶೀಲಾನಂಜಪ್ಪ, ಎಂ.ಎ. ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9964450069
41	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಸುಶ್ಮಿತಾ ಎಂ.ಎಸ್. W/O ಡಾ. ನವೀನ್‌ಕುಮಾರ್ ಆರ್.ಎಂ., ಮೊ. 9886563348 ಉಪನ್ಯಾಸಕರು, ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜು, ಮೈಸೂರು

ವಿಶೇಷ ಸೂಚನೆ : ಮತ ಚಲಾಯಿಸಲು ಬ್ಯಾಂಕ್ ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿದ್ದು ಸದಸ್ಯರುಗಳು ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ಕೋರಲಾಗಿದೆ.
* ಬ್ಯಾಂಕಿನ ಗುರುತಿನ ಚೀಟಿ ಇಲ್ಲದವರು 2 ಪಾಸ್ ಪೋರ್ಟ್ ಸೈಜ್ ಫೋಟೊ ತಂದು ಸ್ಥಳದಲ್ಲೇ ಗುರುತಿನ ಚೀಟಿ ಪಡೆದುಕೊಳ್ಳಬಹುದು.
ಚುನಾವಣೆಯ ದಿನಾಂಕ : 14-01-2024ನೇ ಭಾನುವಾರ ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00ರವರೆಗೆ
ಸ್ಥಳ : ಹಾರ್ಡ್ವಿಕ್ ಹೈಸ್ಕೂಲ್ (Hardwick High School), (ಹಿಂದಿನ ಬಿಗ್ ಬಜಾರ್ ಎದುರು), ರಾಮಸ್ವಾಮಿ ವೃತ್ತ, ಮೈಸೂರು